## ಕನ್ನಡ ಭಾಷಾ ಪಠ್ಯ

# ವಿನ್ಯಾಸ ಸೌರಭ–2

**ಬಿ.ಎಸ್ಸಿ – ಫ್ಯಾಡ್**

**(ಎರಡನೇ ಸೆಮಿಸ್ಟರ್)**

**2021 – 22**


**ಪ್ರಧಾನ ಸಂಪಾದಕರು**

**ಡಾ. ಪ್ರಶಾಂತ ಜಿ. ನಾಯಕ**

**ಸಂಪಾದಕರು**

**ಡಾ. ಎಸ್. ಮನೋನ್ಮನಿ**

**ಪ್ರೊ.ರಾಣಿ ಎಂ.ಎಸ್.**

**ಡಾ. ಕರಿಯಣ್ಣ ಎಸ್.**



**ಬೆಂಗಳೂರು ನಗರ ವಿಶ್ವ ವಿದ್ಯಾಲಯ**

**KANNADA BHASHA PATYA-VINYASA SOURABHA-2**
A Prescribed Text Book for B.Sc -FAD - Degree Course.
(First and Second Semester )

**Chief Editor.**
**Prof. Prashanth G. Nayaka**
Professor of Kannada & Director Kannada Bharathi,
Kuvempu Univeersity,Shankara Ghatta, B.R .Project,
Shivamogga District.

Edited by:
**Dr. S. Manonmani**
**Prof. M.S. Rani**
**Dr. S.Kariyanna**

Published by:
Bangalore City University
Bengaluru

Pp:@Bengaluru City University
First Print: 2021

**ಪ್ರಧಾನ ಸಂಪಾದಕರು**
**ಡಾ. ಪ್ರಶಾಂತ ಜಿ. ನಾಯಕ**
**ಸಲಹಾ ಸಮಿತಿ:**
**ಡಾ. ಕೆ.ವೈ. ನಾರಾಯಣ ಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

**ಸಂಯೋಜಕರು:**
**ಡಾ. ಬೆಳಕೆರೆ ಲಿಂಗರಾಜಯ್ಯ.**

**ಬೆಲೆ: ರೂ.-----**

# ಕನ್ನಡ ಭಾಷಾ ಪಠ್ಯ

## ವಿನ್ಯಾಸ ಸೌರಭ–2

**ಬಿ.ಎಸ್ಸಿ – ಫ್ಯಾಷನ್‌ಡಿಸೈನಿಂಗ್**

**(ಎರಡನೇ ಸೆಮಿಸ್ಟರ್)**

**2021–22**


**ಪ್ರಧಾನ ಸಂಪಾದಕರು**

**ಡಾ. ಪ್ರಶಾಂತ ಜಿ. ನಾಯಕ**

**ಪರಿಶೀಲಕರು:**

**ಡಾ. ಬೆಳಕೆರೆ ಲಿಂಗರಾಜಯ್ಯ.**

**ಸಂಪಾದಕರು**

**ಡಾ. ಎಸ್. ಮನೋನ್ಮನಿ**

**ಪ್ರೊ.ರಾಣಿ ಎಂ.ಎಸ್.**

**ಡಾ. ಕರಿಯಣ್ಣ ಎಸ್.**



**ಬೆಂಗಳೂರು ನಗರ ವಿಶ್ವ ವಿದ್ಯಾಲಯ**

**ಬೆಂಗಳೂರು.**

# ಪರಿವಿಡಿ


| | | |
|---|---|---|
| I | ಪರಿಸರ | |
| | ಆಶಯ | –ಅಕ್ಕಮಹಾದೇವಿ |
| | 1) ಒಂದು ಮುಂಜಾವಿನಲಿ | –ಚೆನ್ನವೀರ ಕಣವಿ |
| | 2) ನೆನಪಿನ ಆ ಗಿಡಮೂಲಿಕೆ ಸುತ್ತ .. | –ಶೂದ್ರ ಶ್ರೀನಿವಾಸ |
| | 3) ಭೂಮಂತ್ರಯ್ಯ | –ಬೆಳಗೆರೆ ಕೃಷ್ಣಮೂರ್ತಿ |
| | 4) ಲಿಮೆಕ್ಸ್ ಕಲ್ಲಿನ ಕಾಗದ | –ಎಸ್.ಸೀತಾರಾಮು |
| II | ಅಂತ:ಕರಣ | |
| | ಆಶಯ | –ಗರತಿಯ ಹಾಡು |
| | 1) ಸುಧೀರ | –ಗಂಗಾಧರ ಚಿತ್ತಾಲ |
| | 2) ಕಳ್ಳು ಬಳ್ಳಿ | –ಬಿ.ಟಿ. ಜಾಹ್ನವಿ |
| | 3) ದೀನಬಂಧು ಮದರ್ ತೆರೇಸಾ | –ಡಾ.ಗೀತಾ ಶೆಣೈ, |
| | 4) ಒಂದು ನಾಯಿ ಕಥೆ | – ಓ ಹೆನ್ರಿ<br>ಕನ್ನಡಕ್ಕೆ : ಜಿ.ಎಸ್. ರಂಗನಾಥ ರಾವ್ |
| III | ಮಾರುಕಟ್ಟೆ | |
| | ಆಶಯ | –ಶಂಕರ ಮೊಕಾಶಿ ಪುಣೇಕರ |
| | 1) ಮೀನು ಪೇಟೆ | –ಸು.ರಂ. ಎಕ್ಕುಂಡಿ |
| | 2) ಲೂಟಿ | –ಬಿ.ಟಿ. ಲಲಿತಾನಾಯಕ್ |
| | 3) ಪಣಂಬೂರು ಬಂದರು | –ಎಚ್. ನಾಗವೇಣಿ |
| | 4) ಕೃಷಿ ಉತ್ಪನ್ನಕ್ಕೂ ಆನ್‌ಲೈನ್‌ಸ್ಪರ್ಶ | –ಸಚ್ಚಿದಾನಂದ ಕುರಗುಂದ |
| IV | ಸೃಜನಶೀಲ/ ಸಂಕೀರ್ಣ | |
| | 1) ನನ್ನ ಕವಿತೆ | –ಸವಿತಾ ನಾಗಭೂಷಣ |
| | 2) ಲೇಖಕ | –ಹಿಂದಿ ಮೂಲ: ಮುನ್ಷಿ ಪ್ರೇಮಚಂದ್,<br>ಕನ್ನಡಕ್ಕೆ: ಕ್ಷಿತಿಜ ಬೀದರ್ |
| | 3)ಮಕ್ಕಳನಾಟಕಗಳಲ್ಲಿ ಹಾಸ್ಯ | – ಡಾ.ಎಂ.ಎಸ್.ವಿದ್ಯಾ |
| | 4) ಚಟುವಟಿಕೆ – | |

# ಪರಿಸರ

## ಆಶಯ: ವಚನ

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು
ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಅಳಿಸಂಕುಳವೆ, ಮಾಮರವೆ,
ಬೆಳುದಿಂಗಳೆ, ಕೋಗಿಲೆಯೆ,
ನಿಮ್ಮನೆಲ್ಲರನೂ ಒಂದು ಬೇಡುವೆನು,
ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡಡೆ
ಕರೆದು ತೋರಿರೆ.

**–ಅಕ್ಕಮಹಾದೇವಿ**

# 1. ಒಂದು ಮುಂಜಾವಿನಲಿ

**– ಚನ್ನವೀರ ಕಣವಿ**

ಒಂದು ಮುಂಜಾವಿನಲ್ಲಿ ತುಂತುರಿನ ಸೋನೆ ಮಳೆ
'ಸೋ' ಎಂದು ಶ್ರುತಿ ಹಿಡಿದು ಸುರಿಯುತ್ತಿತ್ತು;
ಅದಕೆ ಹಿಮ್ಮೇಳವನೆ ಸೂಸಿ ಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ ನುಸುಳುತಿತ್ತು

ಇಳೆವೆಣ್ಣು ಮೈದೊಳೆದು, ಮಕರಂದದರಿಶಿಣದಿ
ಹೂ ಮುಡಿದು ಮದುಮಗಳ ಹೋಲುತಿತ್ತು;
ಮೂಡಣದಿ ನೇಸರನ ನಗೆಮೊಗದ ಶ್ರೀ ಕಾಂತಿ
ಬಿಳಿಯ ಮೋಡದ ಹಿಂದೆ ಹೊಳೆಯುತಿತ್ತು.

ಹುಲ್ಲೆಸಳು, ಹೂಪಕಳೆ, ಮುತ್ತು–ಹನಿಗಳ ಮಿಂಚು
ಸೊಡರಿನಲಿ ಆರತಿಯ ಬೆಳಗುತಿತ್ತು;
ಕೊರಲುಕ್ಕಿ ಹಾಡುತಿಹ ಚಿಕ್ಕಪಕ್ಕಿಯ ಬಳಗ
'ಶುಭಮಸ್ತು' 'ಶುಭಮಸ್ತು' ಎನ್ನುತಿತ್ತು.

ತಳಿರ ತೋರಣದಲ್ಲಿ ಬಳ್ಳಿಮಾಡಗಳಲ್ಲಿ
ದುಂಬಿಗಳ ಓಂಕಾರ ಹೊಮ್ಮುತಿತ್ತು;
ಹಚ್ಚಹಸುರಿನ ಪಚ್ಚೆ ನೆಲಗಟ್ಟಿನಂಗಳದಿ
ಚಿಟ್ಟೆ ರಿಂಗಣಗುಣಿತ ಹಾಕುತಿತ್ತು.

ಉಷೆಯ ನುಣ್ಗದಪಿನಲಿ ಹರ್ಷಬಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತಿತ್ತು;
ಸೃಷ್ಟಿ ಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತಿತ್ತು.

# 1. ನೆನಪಿನ ಆ ಗಿಡ ಮೂಲಿಕೆಗಳ ಸುತ್ತ...

- ಶೂದ್ರ ಶ್ರೀನಿವಾಸ್

**ಕೋವಿಡ್ ಸಂಕಟದ ಪರಿಣಾಮವಾಗಿ ಗಿಡ ಮೂಲಿಕೆಗಳಿಗೆ ಮತ್ತೆ ಪ್ರಾಶಸ್ಯ ದೊರೆತು ಹಿತ್ತಲ ಗಿಡದ ಮದ್ದು ದೈನಂದಿನ ಊಟೋಪಚಾರದ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿರುವುದು ಮಹತ್ವದ ಬೆಳವಣಿಗೆ**

'2020' ನಮ್ಮೆಲ್ಲರ ಬದುಕಿನಲ್ಲಿ ಎಂತೆಂಥದೋ ಆತಂಕ, ವಿಷಾದ, ಮುಂದೇನು ಎಂಬ ಉದ್ವಿಗ್ನತೆಯನ್ನು ನಾನಾ ರೀತಿಯಲ್ಲಿ ಮುಂದಿಟ್ಟು ಹೋಗಿದೆ. ಇದನ್ನೆಲ್ಲ ಕುರಿತು ಹೇಗೆ ಯೋಚಿಸ್ತೀರಿ ಎಂದು. ಆದರೆ ಒಂದಂತೂ ಸತ್ಯ: ನಮ್ಮ ಯೋಚನೆಗೆ ನಿಜದ ಅರ್ಥದಲ್ಲಿ ಪೀಠಿಕೆಯೇ ದೊರಕಿರುವುದಿಲ್ಲ. ಯಾಕೆಂದರೆ 'ಉದ್ವಿಗ್ನತೆ' ಎಂಬ ಅವ್ಯಕ್ತ ಮಾನಸಿಕ ಭೂತ ಕಾಣದ ಕಂಬಕ್ಕೆ ಬಿಗಿದು 'ನುಚ್ಚು ನೂರಾದ' ವರ್ಷದ ಅಗಣಿತ ಸಂಗತಿಗಳ ನಡುವೆ ನಿಮ್ಮ ಚಿಂತನೆಯ ಅಸ್ತಿತ್ವ ಹೇಗೆ ಕೆಲಸ ಮಾಡುತ್ತಿದೆಯೆಂದು. ಏನು ಮಾಡಬೇಕೆಂದು ದಿಕ್ಕು ತೋಚದ ಪ್ರತಿಕ್ಷಣವೂ ಗಾಬರಿಗೊಳಿಸುವ ಭೀಕರ ಸುದ್ದಿಗಳು, ನೋಡಲಾಗದ ನೂರಾರು ಛಿದ್ರಗೊಂಡ ಚಿತ್ರಗಳು. ಇಂಥ ಸಮಯದಲ್ಲಿ ಕೈಯ ತುತ್ತು ರುಚಿಸುವುದು ಯಾವ ರೀತಿಯಲಿ. ಯಾವುದೋ ಒಂದು ಅತ್ಯುತ್ತಮ ಕವಿತೆಯನ್ನೋ, ಕಥೆಯನ್ನೋ, ಕಾದಂಬರಿಯನ್ನೋ ಓದಲು ತೆಗೆದುಕೊಂಡರೆ; ಅದರ ಗುಣಗ್ರಾಹಿತ್ವವನ್ನ ಅನುಭವಿಸುವ ಸುಖವನ್ನೇ ಕಳೆದು ಕೊಂಡಿರುತ್ತೇವೆ. ಅಷ್ಟೇ ಅಲ್ಲ ಪ್ರತಿ ದಿನ ಕೊನೆಯ ಪಕ್ಷ ಎರಡು ಗಂಟೆಯಾದರೂ ಶಾಸ್ತ್ರೀಯ ಸಂಗೀತವನ್ನು ಓದುತ್ತಾ ಕೇಳತಕ್ಕವನು. ಆದರೆ ಅದೂ ಕೂಡ ಭೂತ ಕಾಲದ ಆಗು ಹೋಗುಗಳ ಜೊತೆಗೆ ವರ್ತಮಾನ ಮತ್ತು ಭವಿಷ್ಯದ ಸಂಗತಿಗಳಿಗೆ ವಿಷಾದ ತುಂಬಿದ ಆಲಾಪನೆಯನ್ನು ರವಾನಿಸುವುದರಿಂದ ಲವಲವಿಕೆಗೆ ಪೂರಕವಾಗಿ ಆಲಿಸಲಾಗುತ್ತಿಲ್ಲ. ಯಾಕೆ ಹೀಗೆ? ಬಹು ಹಿಂದೆ ಈ ಪ್ರಮಾಣದಲ್ಲಿ ಘಟಿಸಿರಬಹುದಾ? ಆಗ ಏನೇನೂ ಸವಲತ್ತುಗಳು ಇಲ್ಲದ ಕಾಲಘಟ್ಟದಲ್ಲಿ ಎಷ್ಟೊಂದು ಪರಿತಪಿಸಿರಬಹುದು. ಅದರಲ್ಲೂ ಚೆನ್ನಾಗಿ ಬಾಳಿ ಬದುಕಿದ ಕುಟುಂಬಗಳೇ ನಿರ್ನಾಮವಾಗುತ್ತಿದ್ದ ಸಮಯದಲ್ಲಿ ಸಂತೈಸುವವರೇ ಇಲ್ಲದ ಸಮಯದಲ್ಲಿ ಒಂದು ವಿಧದಲ್ಲಿ ಅರಣ್ಯ ರೋದನವೇ ಆಗಿರಲು ಸಾಧ್ಯ. ಮನುಷ್ಯ ಸಂಬಂಧಗಳ ಈ ಪಾಟಿಯ ಏಳುಬೀಳುಗಳನ್ನ ನಾವು ಇಂದು ಈ ಕೊರೋನ ವರ್ಷದಲ್ಲಿ ಹೇಗೆ ಅರ್ಥೈಸಿಕೊಳ್ಳುವುದು? ಏನಾದರೂ ಮಾಡಿ ಬದುಕಬೇಕು ಎಂಬ ಬಹುದೊಡ್ಡ ಪ್ರಮಾಣದ ಆರ್ತಕೂಗು ಇನ್ನು ಈ ವಾತಾವರಣದಲ್ಲಿ ತರಂಗಗಳ ರೀತಿಯಲ್ಲಿ ಯಾವುದೋ

ಪ್ರಮಾಣದಲ್ಲಿ ಧ್ವನಿಸುತ್ತಿರಬಹುದು. ಯಾವ ಮಹಾನ್ ವಿಜ್ಞಾನಿ ತನ್ನ ಗಾಢವಾದ ಸಂಶೋಧನೆಯ ಮೂಲಕ ನೋಡಿ ಆ ಕಾಲದ ಆರ್ತತೆ ಹೀಗಿತ್ತು ಎಂದು ಬೊಗಸೆಯಲ್ಲಿ ತುಂಬಿ ಕೊಂಡ ಚಿತ್ರಣವನ್ನು ನಾವು ಇಂದು ಇಂಥ ವಿಷಮ ಕಾಲಚಕ್ರದಲ್ಲಿ ಧ್ಯಾನಿಸುತ್ತಾ ವ್ಯಾಖ್ಯಾನಿಸಿಕೊಳ್ಳಬಹುದು. ಆದರೂ ಈ ಸಮಾಜ ಸಾವಿರಾರು ವರ್ಷಗಳಿಂದ ಗಾಯಗೊಂಡ ಬಹುದೊಡ್ಡ ಮುದ್ದೆಯಾಗಿರುವಂಥದ್ದು. ಇಂಥದರ ನಡುವೆಯೂ ಸ್ವಲ್ಪಮಟ್ಟಿಗಾದರೂ ಬದುಕುಳಿಯಲು ಅಗಣಿತ ಔಷಧೀಯ ಗಿಡಮೂಲಿಕೆಗಳು ಮಾನವನಿಗೆ ಪ್ರಾಣಿ ಪಕ್ಷಿಗಳಿಗೆ ಜೀವಾಮೃತವಾಗಿ ಉಳಿದು ಬಂದಿರಬಹುದು. ಇಂಥ ಸಮಯದಲ್ಲಿ ಬದುಕುಳಿಯಲು ಒಂದು ಹುಲ್ಲು ಕಡ್ಡಿಯೂ ಸಹಾಯಕ್ಕೆ ಬರಬಹುದು ಎಂಬ ತಲೆ ತಲಾಂತರಗಳಿಂದ ಬಂದ ನಂಬಿಕೆಯ ಎಳೆ ಹಿಡಿದು ಎಲ್ಲಾ ಕಡೆ ಕೈ ಚಾಚುವ ಮನಸ್ಥಿತಿ ಗಾಢವಾಗ ತೊಡಗಿದೆ. ಆದರೆ ಒಂದಂತೂ ಸತ್ಯ: ಈ ಛಿದ್ರಗೊಂಡ ವರ್ಷದಲ್ಲಿ ಎಲ್ಲರಿಗೂ ಆ ಬದುಕೆಂಬ ನಿಗೂಢತೆಯನ್ನು ಮುಂದಿಟ್ಟುಕೊಂಡು ಅಧೀರತೆಯ ನಡುವೆ ಇಲ್ಲಿಯವರೆಗೆ ತಮ್ಮ ತಮ್ಮ ಮನದ ಮೂಲೆಯಲ್ಲಿ ಅವಿತು ಕೂತಿದ್ದ ದೇಸೀ ಔಷಧಿಗಳ ಕಡೆಗೆ ಮುಖ ತಿರುಗಿಸಿದ್ದಾರೆ. ಯೋಗಾಸನಗಳತ್ತ ಕೈ ಚಾಚಿದ್ದಾರೆ. ಆಧುನಿಕ ಔಷಧಿಗಳ ಮಿತಿ ಯನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದಾರೆ.

ದೇಹಕ್ಕೆ ಅದರದೇ ಆದ ಮಿತಿಗಳು ಇರುವುದನ್ನು ಮನಗಾಣುತ್ತಿದ್ದಾರೆ. ಈ ನೆಲೆಯಲ್ಲಿ ಮನುಷ್ಯರಲ್ಲಿ ಆಧುನಿಕ ಆಹಾರ ಪದ್ಧತಿಯ ಕಾರಣಕ್ಕಾಗಿ ದೇವಾಲಯ ಎಂದು ಪರಿಗಣಿಸಬೇಕಾದ ದೇಹವನ್ನು ಮಿತಿಮೀರಿ ದಂಡಿಸುತ್ತಾ ಹೋಗಿರುವುದನ್ನು ಮನಗಾಣುತ್ತಿದ್ದಾರೆ. ಇದಂತೂ ಕೊರೋನ ಕಾರಣಕ್ಕಾಗಿ ಒದಗಿದ ಬಹುದೊಡ್ಡ ಕೊಡುಗೆ ಎಂದು ಭಾವಿಸಬೇಕು. ಹಿಂದೆಂದಿಗಿಂತಲೂ ಜನರು ಆಯುರ್ವೇದ, ಹೋಮಿಯೋಪತಿ ಔಷಧಿಗಳ ಕಡೆಗೆ ಮುಖ ಚಾಚಿದ್ದಾರೆ. ಅಷ್ಟೇ ಅಲ್ಲ, ತಮ್ಮ ತಮ್ಮ ಮನೆಗಳ ಮುಂದೆ ಸ್ವಲ್ಪ ಜಾಗವಿದ್ದರೂ ಕೂಡ ಅಲ್ಲೆಲ್ಲಾ ಪರಂಪರೆ ಕೊಟ್ಟಿರುವ ಔಷಧೀಯ ಗಿಡಗಳನ್ನು ಬೆಳೆಸಲು ಪ್ರಯತ್ನಿಸುತ್ತಿದ್ದಾರೆ. ಎಂತೆಂಥ ತರಾವರಿ ಗಿಡಗಳು ನಳನಳಿಸುತ್ತಿವೆ. ಜೊತೆಗೆ ಅವುಗಳ ಮಹತ್ವ ಕುರಿತು ಪತ್ರಿಕೆಗಳಲ್ಲಿ ಬರುವ ನಾನಾ ಲೇಖನಗಳ ಮಹತ್ವವನ್ನು ಅರಿಯಲು ತುದಿ ಗಾಲಿನಲ್ಲಿ ನಿಂತಿದ್ದಾರೆ.

ಸುಮ್ಮನೆ ನಾನು ನನ್ನ ಬಾಲ್ಯವನ್ನು ಕೆದಕಿ ನೋಡಿಕೊಂಡಾಗ; ಯಾರ್ಯಾರೋ ನಾಟಿ ವೈದ್ಯರು ಬಹುದೊಡ್ಡ ಸಂತರಂತೆ ಗೋಚರಿಸತೊಡಗುತ್ತಾರೆ. ಯಾಕೆಂದರೆ ಅವರೆಲ್ಲ ನೂರಾರು ಪರಿತಪಿಸುವ ನೋವಿನ ಮುಖಗಳನ್ನು ಕಂಡವರು. ಸ್ವಲ್ಪ ಮಟ್ಟಿಗೆ ಸಾಂತ್ವನದನುಡಿಯೂ ಅವರು ಕೊಡುವ ಔಷಧಿಗೆ ಪೂರಕವಾಗಿರಲು ಸಾಧ್ಯ. ಅದರಲ್ಲೂ ಆ ಕಾಲ ಘಟ್ಟ ಭೂತ ಪಿಶಾಚಿಗಳು ಜನರ ಮುಗ್ಧತೆಯ ನಡುವೆ ಓಡಾಡಿಸುತ್ತಿದ್ದ ರಾಕ್ಷಸರೂ ಇದ್ದರು. ಮಾಯಮಾಟ ಯಾವ ಯಾವ ಪ್ರಮಾಣದಲ್ಲಿ ಚಲಾವಣೆಯಲ್ಲಿತ್ತು

ಎಂಬುದನ್ನು ನೆನಪು ಮಾಡಿಕೊಂಡರೆ ಈಗಲೂ ಒಂದು ಕ್ಷಣ ಭಯವು ಆವರಿಸುವುದು. ಕೆಲವು ವಿಷಯಗಳಲ್ಲಿ ನಾನು ಬೆಳೆದು ಬಂದ ಮನೆಯಲ್ಲಿ ನಿಜವಾಗಿಯೂ ಸೇವಾ ಮನೋಭಾವವನ್ನು ತುಂಬಿಕೊಂಡವರು ಇದ್ದರು. ನನ್ನ ದೊಡ್ಡಪ್ಪ ಅತ್ಯಂತ ಚೆನ್ನಾಗಿ ಗಂಧ ತೆಗೆದದ್ದನ್ನು ನಾನಾ ವಿಧದ ಗಾಯಗಳಿಗೆ ಔಷಧಿಯಾಗಿ ನೀಡುತ್ತಿದ್ದರು. ಅದರಲ್ಲೂ ಹೊಲಗಳಲ್ಲಿ ಜೋಳದ ಕಡ್ಡಿ ಸಮೃದ್ಧವಾಗಿ ಬೆಳೆದಿರುವಂಥ ಸಮಯದಲ್ಲಿ ಆ ಕಡ್ಡಿಗಳ ಗರಿಗಳು ಬ್ಲೇಡಿನ ರೀತಿಯಲ್ಲಿ ಸಾಕಷ್ಟು ಮೊನಚಾಗಿರುತ್ತದೆ. ಎಷ್ಟು ಎಚ್ಚರಿಕೆಯಿಂದ ಇದ್ದರೂ ಜಾನುವಾರುಗಳಿಗೆ, ಮನುಷ್ಯರ ಕಣ್ಣಿಗೆ ತಾಕುವುದು ಸ್ವಾಭಾವಿಕ. ಆಗ ಗಾಯವಾಗಿ ಕಣ್ಣು ಕಳೆದು ಹೋಗುವ ಸಾಧ್ಯತೆ ಇರುತ್ತದೆ. ಆಗ ತೇದ ಆ ಗಂಧದ ಸ್ವಲ್ಪ ಭಾಗವನ್ನು ಹೆಬ್ಬೆರಳಿನ ಪಕ್ಕದ ಬೆರಳಿನ ತುದಿಯಿಂದ ಗಾಯಗೊಂಡ ಜಾಗದಲ್ಲಿ ಇಡುತ್ತಿದ್ದರು. ಕೇವಲ ಒಂದೆರಡು ಬಾರಿ ಲೇಪನಕ್ಕೆ ವಾಸಿಯಾಗುತ್ತಿತ್ತು.ಎಲ್ಲೆಲ್ಲಿಂದಲೋ ಬರುತ್ತಿದ್ದರು. ಆ ಗಂಧವನ್ನು ತೆಗೆಯುವುದಕ್ಕೆದೊಡ್ಡಪ್ಪ ನನ್ನನ್ನು ಬಳಸಿಕೊಳ್ಳುತ್ತಿದ್ದರು. ನಾನು ಅದನ್ನು ಅತ್ಯಂತ ಹಿಂಸೆಯಿಂದ ತೆಗೆಯುತ್ತಿದ್ದೆ. ಅಷ್ಟರ ಮಟ್ಟಿಗೆ ಕೈ ನೋವು ಬರುತ್ತಿತ್ತು. ಹೆಚ್ಚಾಗಿ ಆ ಔಷಧಿಯನ್ನು ರಾತ್ರಿ ಸಮಯದಲ್ಲಿ ಇಡ ಬೇಕಾಗಿತ್ತು. ಅದಕ್ಕೂ ಬಳಸುತ್ತಿದ್ದುದು ಹಸಿ ಶುಂಠಿಯನ್ನು. ನನ್ನ ತಾತ ಬೇರೆ ರೀತಿಯ ಔಷಧಿಗಳನ್ನು ಕೊಡುತ್ತಿದ್ದರು. ಹೀಗೆ ಎಂತೆಂಥದೋ ಬಳಕೆಯಲ್ಲಿತ್ತು.

ಲಂಟಾನ, ಹೊಂಗೆ, ಎಕ್ಕಲಗಿಡದ ಹಾಲು, ವೀಳೆದೆಲೆ ಮತ್ತು ಸುಣ್ಣ ಮಿಶ್ರಿತ ಹರಳೆಣ್ಣೆ ಮತ್ತು ಖಾರದಪುಡಿ ಸೇರಿಸಿ ಗಾಯಗಳಿಗೆ ಲೇಪನ ಮಾಡಿದರೆ ಎಷ್ಟು ಆರಾಮವಾಗಿ ಗುಣವಾಗುತ್ತಿತ್ತು. ನನ್ನ ಅರಿವಿನ ಮಟ್ಟಿಗೆ ಪ್ರಕೃತಿಯ ಪ್ರತಿಯೊಂದು ಎಲೆಯಲ್ಲಿಯೂ ಔಷಧೀಯ ಗುಣವಿರುತ್ತದೆ. ನಾನು ಲಂಕೇಶ್ ಅವರ ಜೊತೆಯಲ್ಲಿ ಎಲ್ಲೆಲ್ಲೋ ಸುತ್ತಾಡುವಾಗ ನನ್ನ ಕಣ್ಣಿಗೆ ಬಿದ್ದ ಪ್ರತಿಯೊಂದು ಗಿಡದ ಎಲೆಯನ್ನ ಕಿತ್ತು ಸ್ವಲ್ಪ ಬಾಯಿಗಿಟ್ಟುಕೊಳ್ಳುವುದು ರೂಢಿಗತ ಸ್ವಭಾವವಾಗಿತ್ತು. ಅದಕ್ಕೆ ಲಂಕೇಶ್ ಅವರು ಆತ್ಮೀಯವಾಗಿ "ಛೆ...ಛೆ'ಯಲ್ಲಿ ಗೇಲಿ ಮಾಡಿದ್ದರು: "ಶೂದ್ರನನ್ನು ಎಲ್ಲಿಯೂ ಕರೆದುಕೊಂಡು ಹೋಗಬಾರದು, ಕಾಡು ನಾಶವಾಗುತ್ತದೆ" ಎಂದು.

ನನ್ನ ಬಾಲ್ಯದಲ್ಲಿ ನನ್ನೂರು ಆಗಲಿ, ಅಕ್ಕ ಪಕ್ಕದ ಹಳ್ಳಿಗಳಲ್ಲಿ ಆಗಲಿ ಎಲ್ಲಿಯೂ ಒಂದೇ ಒಂದು ಮೆಡಿಕಲ್ ಷಾಪ್ ಇರಲಿಲ್ಲ. ಹಾಗೆ ನೋಡಿದರೆ ಔಷಧೀಯ ಮಾತ್ರೆಯ ಪರಿಚಯವೇ ಇರಲಿಲ್ಲ. ಬಹಳ ಹೆಚ್ಚೆಂದರೆ ಕಸ್ತೂರಿ ಮಾತ್ರೆ ನೀಲಗಿರಿ ತೈಲ ಮಾತ್ರ ಲವಲವಿಕೆಗೆ, ಬೆಳ್ಳುಳ್ಳಿ, ಈರುಳ್ಳಿ, ಮೆಣಸು, ಲವಂಗ ಇಂಥವು ಪ್ರಧಾನ ಪಾತ್ರ ವಹಿಸುತ್ತಿದ್ದವು. ವೀಳೆದೆಲೆ ತೋಟದಲ್ಲಿ ಏಣಿ ಮೇಲೆ ನಿಂತು ತುಂಬಾ ಕೆಲಸ ಮಾಡುತ್ತಿದ್ದೆ. ಆಗ ಉಷ್ಣಕ್ಕೆ ರಾತ್ರಿ ನಿದ್ದೇನೆ ಬರುತ್ತಿರಲಿಲ್ಲ. ಆಗ ದೊಡ್ಡಪ್ಪ ತಾಟಿ ಬೆಲ್ಲ ಮತ್ತು ಸ್ವಲ್ಪ ಈರುಳ್ಳಿ

ಕೊಡ್ತಿದ್ದರು. ತಿಂದ ತಕ್ಷಣ ಎರಡು ಮೂರು ನಿಮಿಷಗಳಲ್ಲಿ ವಾಸಿಯಾಗುತ್ತಿತ್ತು. ದೀಪಾವಳಿಯ ಸಮಯದಲ್ಲಿ ಹೆಚ್ಚು ಕಜ್ಜಾಯ ಮತ್ತು ಇತರೆ ಎಣ್ಣೆ ಪದಾರ್ಥಗಳನ್ನು ತಿನ್ನುತ್ತಿದ್ದುದರಿಂದ ಕೆಮ್ಮಿನ ಬಾಧೆಗೆ ತುಂಬಾ ನರಳುತ್ತಿದ್ದೆ. ಆಗ ಹರಿಜನ ಕಾಲೋನಿಯಿಂದ ಮುನಿಯಮ್ಮ ಎಂಬ ಅಜ್ಜಿ ಬಂದು ಸ್ವಲ್ಪ ದೊಡ್ಡದಾದ ಇಕ್ಕಳ ರೂಪದ ವಸ್ತುವಿನಿಂದಬಾಯಿ ಅಗಲ ಮಾಡಲು ಹೇಳಿ ಎಂಥದೋ ಸ್ವಲ್ಪ ಮಿಶ್ರಿತ ವಸ್ತುವನ್ನು ಇಡುತ್ತಿದ್ದಳು. ಆ ರೀತಿ ಎರಡು ಮೂರು ಬಾರಿ ಮಾಡಿದಾಕ್ಷಣ ವಾಸಿಯಾಗಿ ಬಿಡುತ್ತಿತ್ತು. ಈಗ ಅದೆಲ್ಲ ನೆನಪು ಮಾಡಿಕೊಳ್ಳುವುದಕ್ಕೆ ಮಜಾ ಅನ್ನಿಸುತ್ತದೆ.

ಸುಮಾರು ಮೂರು ದಶಕಗಳ ಹಿಂದೆ ಒಂದು ಅಪೂರ್ವ ಅನುಭವ ನನ್ನ ಪಾಲಿಗೆ ಸಿಕ್ಕಿತು. ನನಗೆ ತುಂಬಾ ತಲೆ ನೋವಿತ್ತು. ಆ ಕಾರಣಕ್ಕಾಗಿ ಕನ್ನಡಕ ಕಡ್ಡಾಯವಾಗಿ ಬಳಸುತ್ತಿದ್ದೆ. ಒಮ್ಮೊಮ್ಮೆ ಮರೆತು ಹೊರಗೆ ಬಂದು ಬಿಟ್ಟರೆ ಮತ್ತೆ ವಾಪಸ್ಸು ಮನೆಗೆ ಹೋಗಿ ಅದನ್ನು ತಗೊಳ್ಳುತ್ತಿದ್ದೆ. ಈ ವಿಷಯವನ್ನು ಬೆಂಗಳೂರಿನ ಬನಶಂಕರಿ ಬಳಿ ಪ್ರಸಿದ್ಧ ಪತ್ರಕರ್ತ ಮತ್ತು ಸಾಹಿತ್ಯ ಚಿಂತಕ ವೈ.ಎನ್.ಕೆಯವರ ಬಳಿ ಹೇಳಿದೆ. ಆಗ ಅಲ್ಲಿ ಎ.ಕೆ. ರಾಮಾನುಜನ್, ಗಿರೀಶ್ ಕಾರ್ನಾಡ್, ಬಿ.ಸಿ. ರಾಮಚಂದ್ರ ಶರ್ಮಾ ಅವರು ಇದ್ದರು. ಆ ಅಮೂಲ್ಯ ಸಂಜೆ ವೈಎನ್‌ಕೆಯವರು "ಶೂದ್ರ, ಒಂದು ಕೆಲಸ ಮಾಡಿ, ನೀವು ಊಟದ ಸಮಯದಲ್ಲಿ ಪ್ರತಿ ದಿನ ಹಸಿ ಈರುಳ್ಳಿಯನ್ನು ಬಳಸಿ, ತಲೆ ನೋವು ಬರೋದಿಲ್ಲ" ಎಂದರು. ಅದಕ್ಕೆ ಎ.ಕೆ. ರಾಮಾನುಜನ್ ಸಹಾ ದನಿಗೂಡಿಸಿ ನಾನೂ ವೈಎನ್‌ಕೆಯವರ ಕಾರಣಕ್ಕಾಗಿ ತಪ್ಪದೇ ಬಳಸುತ್ತಿರುವೆ ಎಂದಿದ್ದರು. ಈ ದೃಷ್ಟಿಯಿಂದ ಆ ಸಂಜೆ ನನಗೆ ಎಂದೆಂದೂ ಮರೆಯಲಾಗದ 'ಅಪೂರ್ವ' ಸಂಜೆ ಅನ್ನಿಸಿತು. ಇಂಥದೇ ಚಾರಿತ್ರಿಕ ಭೇಟಿಯೆನ್ನಬಹುದಾದ ಒಂದು ಪ್ರಸಂಗ ನಡೆಯಿತು. ಅದು ದಶಕಗಳ ಹಿಂದಿನ ಸ್ಮರಣೀಯ ಸಂದರ್ಭ. ಮಾಸ್ತಿಯವರನ್ನು ಸಂದರ್ಶಿಸಿ 'ಶೂದ್ರ ವಿಶೇಷಾಂಕಕ್ಕೆ ಬಳಸಿಕೊಳ್ಳಬೇಕಾಗಿತ್ತು. ಡಾ.ಹೆಚ್.ಎಸ್.ರಾಘವೇಂದ್ರ ರಾವ್ ಮತ್ತು ನಾನು ಎರಡು ದಿವಸ ಅವರ ಬಳಿ ಚರ್ಚಿಸಿ ಅದನ್ನು ದೀರ್ಘ ಲೇಖನವಾಗಿ ಬಳಸಿಕೊಳ್ಳಬೇಕಾಗಿತ್ತು. ಆ ಸಂದರ್ಭದಲ್ಲಿ ಒಂದುಮಧ್ಯಾಹ್ನ ಅವರೊಟ್ಟಿಗೆ ಮೇಜಿನಲ್ಲಿ ಕುಳಿತು ಊಟ ಮಾಡುವಾಗ ನಾನು ಒಂದು ತುತ್ತು ಅನ್ನ ಬಾಯಲ್ಲಿಟ್ಟು ಕೊಳ್ಳಲು ಹೋದಾಗ ನನ್ನ ಕೈ ಹಿಡಿದು "ಶ್ರೀನಿವಾಸ ರೆಡ್ಡಿ ಮೊದಲು ಸ್ವಲ್ಪ ನೀರು ಕುಡಿಯಬೇಕು. ಮತ್ತೆ ಮಧ್ಯದಲ್ಲಿ ನೀರು ಕುಡಿಯಬಾರದು" ಎಂದರು ತೆಲುಗಿನಲ್ಲಿ. ಇದು ಊಟದ ವಿಷಯದಲ್ಲಿ ನನಗೆ ಒಂದು ದೊಡ್ಡ ಪಾಠವಾಯಿತು. ಕಳೆದ ಮೂರುವರೆ ದಶಕಗಳಿಂದ ತಪ್ಪದೇ ಪಾಲಿಸಿಕೊಂಡು ಬರುತ್ತಿರುವೆ. ಪ್ರತಿದಿನ ಊಟ ಮಾಡುವಾಗ ಅವರ ನೆನಪು ಬರುತ್ತದೆ. ದೊಡ್ಡವರ ಬದುಕಿನ ಶಿಸ್ತನ್ನು ಕುರಿತು ಇದನ್ನು ಇಲ್ಲಿ ಪ್ರಸ್ತಾಪಿಸಿದೆ. ಹಿಂದೆ ಮಾಸ್ತಿಯವರನ್ನು ಕುರಿತು ಕಸ್ತೂರಿಯ ಅಂಕಣ ಬರಹದಲ್ಲಿ ಇದನ್ನೆಲ್ಲ

ಪ್ರಸ್ತಾಪಿಸಿದ್ದೆ. ಕೆಲವು ವರ್ಷಗಳಿಂದೀಚೆಗೆ ಯೋಗದ ಬಗ್ಗೆ ಬಹುದೊಡ್ಡ ಪ್ರಮಾಣದಲ್ಲಿ ಒಲವು ಬೆಳೆಯುತ್ತಿದೆ. ಆಧುನಿಕ ಔಷಧಿಗಳು ದೇಹವನ್ನು ತಿಂದು ಹಾಕುತ್ತವೆ ಎಂಬ ಅರಿವು ಬೆಳೆಯುತ್ತಿದೆ. ಒಂದು ಕಾಲದಲ್ಲಿ ಇದರ ಬಗ್ಗೆ ತಾತ್ಸಾರವಿತ್ತು. ನನ್ನದೇ ಒಂದು ಪುಟ್ಟ ಉದಾಹರಣೆಯನ್ನು ಕೊಡಲು ಬಯಸುವೆ. ನಾನು ಕುತ್ತಿಗೆ ನೋವಿನಿಂದ ತುಂಬಾ ಒದ್ದಾಡುತ್ತಿದ್ದೆ. ದ್ವಿಚಕ್ರ ವಾಹನ ಓಡಿಸುವಾಗ ಕತ್ತಿನ ಬೆಲ್ಟನ್ನು ಕೆಲವು ದಿವಸ ಉಪಯೋಗಿಸುತ್ತಿದ್ದೆ. ಅದೇ ಸಮಯದಲ್ಲಿ ನಾನು ಯೋಗ ತರಗತಿಗೆ ಹೋಗಲು ಪ್ರಾರಂಭಿಸಿದ್ದೆ, ಯೋಗ ಗುರು ಓ.ಶಾ. ಅರುಣ್ ಅವರ ಬಳಿ. ಇವರು ಪ್ರಸಿದ್ಧ ಯೋಗಗುರು, ಯೋಗದ ಪಿತಾಮಹ ಬಿ.ಕೆ.ಎಸ್ ಅಯ್ಯಂಗಾರ್ ಅವರ ಪ್ರಮುಖ ಶಿಷ್ಯರು. ನಾನು ಮಾಮೂಲಿ ಯೋಗದ ತರಗತಿಗೆ ಹೋದಾಗ ಸರ್ ನನ್ನನ್ನು ಹತ್ತಿರ ಕರೆದು ಸಮಯ "ಶ್ರೀನಿವಾಸ್ ಯಾಕೆ ನಿಮಗೆ ಯೋಗಾಸನಗಳ ಬಗ್ಗೆ ನಂಬಿಕೆ ಇಲ್ಲವಾ?" ಎಂದು ಕೇಳಿದರು. ನನಗೆ ಗೊತ್ತಾಗದೆ ಯಾಕೆ ಎಂದು ಕೇಳಿದೆ. ನೀವು ಕುತ್ತಿಗೆಗೆ ಯಾಕೆ ಆ ಬೆಲ್ಟನ್ನು ಬಳಸ್ತೀರಿ? ಎಂದು ಕೇಳಿದಾಗ ನಾಚಿಕೆಯಿಂದ ಒದ್ದಾಡ ತೊಡಗಿದ್ದೆ. ಸಂಜೆ ಮನೆಗೆ ಹೋದವನೇ ಆ ಬೆಲ್ಬನ್ನು ಕತ್ತರಿಸಿ ಹೊರಗೆ ಬಿಸಾಕಿದೆ. ಒಂದು ಸರಳ ಆಸನದ ಮೂಲಕ ಕತ್ತು ನೋವು ಹೋಯಿತು. ಇಂದು ನಾನು ಓಡಾಡುವಾಗ ಯಾರಾದರೂ ಆ ರೀತಿಯಲ್ಲಿ ಬೆಲ್ಟ್ ಬಳಸುತ್ತಿದ್ದರೆ ಅದನ್ನು ತೆಗೆಯಲು ಸೂಚಿಸುವೆ. ಹಾಗೂ ಅದಕ್ಕೆ ಸಂಬಂಧಿಸಿದ ಆಸನವನ್ನು ತೋರಿಸುವೆ. ಮತ್ತು ಯೋಗ ತರಗತಿಯ ವಿಳಾಸ ಕೊಡುವೆ. ಇರಲಿ, ಸುಮಾರು ಮೂರು ದಶಕಗಳಿಗಿಂತ ಹಿಂದೆಯೇ ನನ್ನ ಪ್ರೀತಿ ಪಾತ್ರ ಲೇಖಕ, ಪತ್ರಕರ್ತ ಖುಷ್ವಂತ್ ಸಿಂಗ್ ಬಹು ದೀರ್ಘ ಲೇಖನ ಬರೆದರು. ಜಗತ್ತಿಗೆ ಯೋಗವನ್ನು ಪರಿಚಯಿಸಿದ ಮಹಾನ್ ಗುರು ಬಿ.ಕೆ.ಎಸ್. ಅಯ್ಯಂಗಾರ್ ಎಂದು. ನಾನು ಈ ಲೇಖನವನ್ನು ಜೆರಾಕ್ಸ್ ಮಾಡಿಸಿ ಯರ್ಯಾರಿಗೋ ತಲುಪಿಸಿದ್ದೆ. ಒಮ್ಮೆ ಬೆಂಗಳೂರಿನಲ್ಲಿ ಅವರೊಂದಿಗೆ ಚರ್ಚಿಸುತ್ತಿರುವಾಗ, ಖುಷ್ವಂತ್ ಸಿಂಗ್ ಲೇಖನ ಕುರಿತು ಪ್ರಸ್ತಾಪಿಸಿದೆ. ಅವರು ಸಂತೋಷದಿಂದ "ಯು ರೆಡ್ ದಟ್ ಆರ್ಟಿಕಲ್" ಎಂದರು. ಆಗ ನಾನು ಓದಿದ್ದು ಮಾತ್ರವಲ್ಲ, ಯಾರ್ಯಾರಿಗೋ ಅದನ್ನು ತಲುಪಿಸಿದೆ ಎಂದೆ. ಅವರು ಒಂದು ವಿಧದ ಸಂತೋಷದಿಂದ "ನೋಡು ಒಮ್ಮೆ ಅವರು ಪೂನಾದ ಯೋಗ ತರಗತಿಗೆಬಂದರು. ಬಾಗಿಲಲ್ಲಿ ನಿಂತು ಬಹಳ ಸಮಯ ನೋಡುತ್ತಲೇ ಇದ್ದರು. ನಂತರ ನನ್ನ ಬಳಿ "ಮಿಸ್ಟರ್ ಅಯ್ಯಂಗಾರ್ ಎಷ್ಟೊಂದು ಸುಂದರ ಮಹಿಳೆಯರು ಇದ್ದಾರೆ. ಯೋಗದ ಕಾರಣಕ್ಕಾಗಿ ಅವರ ಮುಖದಲ್ಲಿ ಎಂಥ ಕಳೆ ಇದೆ. ನನಗೆ ಮೊದಲೇ ಗೊತ್ತಿದ್ದರೆ ನಾನೂ ಸೇರಿಕೊಳ್ಳುತ್ತಿದ್ದೆ ಎಂದಿದ್ದರು" ಎಂದು ಆತ್ಮೀಯವಾಗಿ ಹೇಳಿದಾಗ ನಗು ತಡೆಯಲಾಗಲಿಲ್ಲ. ಇದನ್ನು ಒಮ್ಮೆ ದೆಹಲಿಯಲ್ಲಿ ಅವರನ್ನು ಭೇಟಿಯಾಗಿದ್ದಾಗ ನೆನಪು ಮಾಡಿದೆ. ಅದಕ್ಕೆ ಅವರು "ದಟ್

ಅಯ್ಯಂಗಾರ್ ಸ್ಟಿಲ್ ರಿಮೆಂಬರ್ ದಟ್" ಎಂದು ಯೋಗ ಗುರುಗಳ ಕುರಿತು ಸಾಕಷ್ಟು ಮೆಚ್ಚಿಗೆಯ ಮಾತಾಡಿದ್ದರು. ಜಗತ್ತಿನ ಎಲ್ಲಾ ಆಗು ಹೋಗುಗಳ ಕುರಿತು ನಿರ್ದಾಕ್ಷಿಣ್ಯತೆ ಮತ್ತು ಲವಲವಿಕೆಯನ್ನ ತುಂಬಿಕೊಂಡಿದ್ದವರು.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಆಯುರ್ವೇದ ಕಾಲೇಜಿನಲ್ಲಿ ಮುಖ್ಯ ಅತಿಥಿಯಾಗಿ ಮಾತಾಡುವ ಸಂದರ್ಭದಲ್ಲಿ ಅಲ್ಲಿಯ ಅಧ್ಯಾಪಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಮನವಿ ಮಾಡಿಕೊಂಡೆ: ನಮ್ಮ ಜನ ಅರಿವಿನ ಕೊರತೆಯಿಂದ ಆಧುನಿಕ ವೈದ್ಯ ಪದ್ಧತಿಗೆ ಸಿಕ್ಕಿಕೊಂಡು ನರಳುತ್ತಿದ್ದಾರೆ. ತುಂಬಾ ದುಬಾರಿಯಾಗಿರುವ ಔಷಧಿಗಳನ್ನು ನಿಭಾಯಿಸಲಾರರು. ಈ ವೈದ್ಯರು ದುಬಾರಿ ಎಂದು, ಅತ್ಯಂತ ಕೆಳವರ್ಗದ ಹಾಗೂ ಮಧ್ಯಮ ವರ್ಗದ ಅನಾರೋಗ್ಯ ಪೀಡಿತ ಜನ ಒಬ್ಬ ವೈದ್ಯರಿಂದ ಮತ್ತೊಬ್ಬ ವೈದ್ಯರ ಬಳಿ ಸುತ್ತಾಡುತ್ತಾ ತಮ್ಮ ದೇಹವನ್ನುಸಾಕಷ್ಟು ದುರ್ಬಲಗೊಳಿಸಿಕೊಳ್ಳುತ್ತಾ ಹೋಗುವರು. ಸ್ವಾಭಾವಿಕವಾಗಿಯೇ ಗುಣ ಹೊಂದುವ ಕಾಯಿಲೆಗಳಿಗೆಲ್ಲ ತಾಳ್ಮೆ ಕಳೆದು ಕೊಂಡು ವೈದ್ಯರ ಅರ್ಥಾತ್ ಔಷಧಿಗಳ ಗುಲಾಮರಾಗುತ್ತಿದ್ದಾರೆ. ಜೊತೆಗೆ ಮನೆಯ ಪಕ್ಕದಲ್ಲಿಯೇ ಔಷಧಿ ಅಂಗಡಿಯೂ ಇರುವ ಅದರ ಪಕ್ಕದಲ್ಲಿಯೇ ಬಾರ್ ಅಂಡ್ ರೆಸ್ಟೋರೆಂಟ್‌ಗಳು. ಈ ಬಾರ್‌ಗಳ ಹಾವಳಿ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ವ್ಯಾಪಕಗೊಂಡಿದೆ. ಎಷ್ಟೋ ಮನೆಗಳಲ್ಲಿ ನಕಲಿ ವಿಷಮಯ ಪಾನೀಯಗಳನ್ನು ಕದ್ದುಮುಚ್ಚಿ ಮಾರಾಟ ಮಾಡುತ್ತಾ ಜನಸಾಮಾನ್ಯರ ಬದುಕು ಹಾಗೂ ಆರೋಗ್ಯವನ್ನು ಕಿತ್ತುಕೊಳ್ಳುತ್ತಿದ್ದಾರೆ. ಅದನ್ನು ತಪ್ಪಿಸಬೇಕಾದರೆ ಆಯುರ್ವೇದ ಕಾಲೇಜಿನ ಅಧ್ಯಾಪಕರುಹಾಗೂ ವಿದ್ಯಾರ್ಥಿಗಳು ಹೆಚ್ಚು ಜನರ ನಡುವೆ ಕ್ರಿಯಾಶೀಲರಾಗ ಬೇಕಾಗುತ್ತದೆ. ಅಂಥದ್ದಕ್ಕೆ ನನ್ನಂಥ ನೂರಾರು ಮಂದಿ ಕೈ ಜೋಡಿಸುವರು ಎಂದು ವಿನಂತಿಸಿಕೊಂಡಿದ್ದೆ. ಈ ನೆಲೆಯಲ್ಲಿ ನಾನಾ ಸಂಸ್ಥೆಗಳು ಸಕ್ರಿಯವಾಗಿ ತೊಡಗಿಸಿಕೊಂಡಿವೆ. ಆದರೂ ಸಾಲದು. ಈಗ ಕೊರೋನ ಭೀಕರ ರೋಗದ ಕಾರಣಕ್ಕೆ ಜನ ಎಚ್ಚರ ವಹಿಸುತ್ತಿದ್ದಾರೆ. ಆ ಎಚ್ಚರದ ಬಿಸಿ ಆರದಂತೆ ಎಲ್ಲಾ ಕಡೆ ಅರಿವಿನ ಗಂಟೆಗಳು ಮೊಳಗುತ್ತಿರಬೇಕು. ನಮ್ಮ ನಮ್ಮ ಮನೆಗಳ ಗುಲಾಬಿ ಗಿಡಗಳ ಪಕ್ಕದಲ್ಲಿಯೇ ಪೂರ್ವಜರು ಬಿಟ್ಟು ಹೋಗಿರುವ ಗಿಡಮೂಲಿಕೆಗಳನ್ನು ಬೆಳೆಸಿ ಅವು ಸದಾ ನಳನಳಿಸುವಂತೆ ನೋಡಿಕೊಳ್ಳಬೇಕು.

# 2. ಭೂಮಂತ್ರಯ್ಯ

**– ಬೆಳಗೆರೆ ಕೃಷ್ಣಶರ್ಮ**

ಭೂಮಂತಯ್ಯನವರು ಪುಟ್ಟ ಪುಟ್ಟ ಸಭೆಗಳಲ್ಲಿ ಇಷ್ಟಪಟ್ಟು ಮಾತನಾಡುತ್ತಾರೆ. ಅಂಥ ಸಭೆಗಳಿಗೆ ಹೋಗುವಾಗ ಕುಂಬಳ, ತುಪ್ಪೀರೆ, ಹಿತ್ತಲವರೆ, ಶಂಬೆ, ಪಡವಲ, ಸೌತೆ ಮುಂತಾದ ಬಳ್ಳಿ ತರಕಾರಿ ಬೀಜಗಳನ್ನು ಮತ್ತು ಕರಿಬೇವು, ಪರಂಗಿ, ನಿಂಬೆ, ಯಳ್ಳಿ, ತೊಂಡೆ ಮುಂತಾದ ಸಸಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು.

"ನಿಮ್ಮ ಆ ಸಭೆಗಳಲ್ಲಿನ ಮಾತುಗಳು ಜನರ ಕಿವಿಗಳಿಗೆ ಹೋಗದೆ, ಗಾಳಿಗೆ ಹೋದರೂ ಈ ಬೀಜ ಮತ್ತು ಸಸಿಗಳು ನೆಲಕ್ಕಿಳಿಯಲಿ" ಎಂದು ಅವರ ಯಜಮಾನಿ ಇಂಥ ಸಸಿಗಳನ್ನು ಪ್ಲಾಸ್ಟಿಕ್ ಪಾಕೇಟುಗಳಲ್ಲಿ ಬೆಳೆಸುವುದಲ್ಲದೆ, ಬೀಜಗಳನ್ನು ಸಂಗ್ರಹಿಸಿ ಕೊಡುತ್ತಿದ್ದರು. ಅವುಗಳನ್ನು ಭೂಮಂತ್ರಯ್ಯನವರು ಸಭೆಯಲ್ಲಿ ಬಲು ಹೆಮ್ಮೆಯಿಂದ ಹಂಚುತ್ತಿದ್ದರು. ಒಮ್ಮೊಮ್ಮೆ ರೈತರ ಸಭೆ ನಡೆಸಿದವರಿಗೆ ಎಲ್ಲ ಬೀಜ ಮತ್ತು ಸಸಿಗಳನ್ನು ಕೊಟ್ಟು ತಮ್ಮ ಕಣ್ಣ ಮುಂದೆ ನೆಲಕ್ಕೆ ಹಾಕಿಸಿ ಸಮಾಧಾನಗೊಳ್ಳುತ್ತಿದ್ದರು. ಅದೆಲ್ಲ ದೊಡ್ಡ ಕಥೆ, ಇರಲಿ ಆಳಿಲು ಮತ್ತು ಇಲಿಗಳು ರೈತರ ಆತ್ಮಹತ್ಯೆ ವಿರುದ್ಧ ಹೋರಾಡಿದ ಕಥೆಗೆ ಬರೋಣ.

ಭೂಮಂತ್ರಯ್ಯನವರು ಅಂದು ತುಂಬಾ ಬೇಸರ ಮಾಡಿಕೊಂಡು ಆ ಪಕ್ಕದ ತೋಟದಲ್ಲಿನ ಹಲಸಿನ ಮರವನ್ನೇ ದಿಟ್ಟಿಸುತ್ತಿದ್ದರು. ಎರಡು ದಿನದಿಂದ ಅವರು ಒಂದು ಹನಿ ನೀರನ್ನೂ ಕುಡಿದಿರಲಿಲ್ಲ. ಎರಡು ದಿನದ ಹಿಂದೆ ರೈತರೊಬ್ಬರು ಆ ಮರಕ್ಕೆ ನೇಣು ಹಾಕಿಕೊಂಡಿದ್ದರು. ಅವರ ಬೋರ್‌ವೆಲ್ ನೀರು ನಿಂತುಹೋಗಿತ್ತು. ಅದಕ್ಕೂ ಮುಂಚೆ ಕೆರೆಕಟ್ಟೆ ಹಳ್ಳಗಳಲ್ಲಿ ಇಪ್ಪತ್ತು ವರ್ಷದ ಹಿಂದೆಯೇ ನೀರು ಬತ್ತಿಹೋಗಿತ್ತು. ಹೊಸದಾಗಿ 1200 ಅಡಿ ಬೋರು ಕೊರೆದರೂ ಧೂಳು ಬಂತೇ ಹೊರತು ನೀರು

ಬರಲಿಲ್ಲ. ಅಷ್ಟೊತ್ತಿಗೆ ಅವರ ಮನೆಯಲ್ಲಿದ್ದ ಕೊಬ್ಬರಿ, ಕಾಯಿ, ಆಭರಣಗಳೆಲ್ಲ ಖಾಲಿಯಾಗಿದ್ದವು. ತೋಟ ಬೇರೆ ಒಣಗುತ್ತಿತ್ತು. ಸಾಲ ಏರಿತ್ತು.

ರೈತ ಸಂಘದವರು "ರೈತ ಸಾಲಗಾರನಲ್ಲ ಸರ್ಕಾರವೇ ಬಾಕೀದಾರ" ಎಂದು ರೈತರಲ್ಲಿ ಜಾಗೃತಿ ಮೂಡಿಸುತ್ತಿದ್ದರೂ, ಅದನ್ನು ಆತ್ಮಹತ್ಯೆ ಮಾಡಿಕೊಂಡ ರೈತ ಸರಿಯಾಗಿ ಕೇಳಿಸಿಕೊಂಡಿರಲಿಲ್ಲ. ಬೆಳೆ ಇರಲಿಲ್ಲ, ತೆಂಗಿನ ಗಿಡ ಬಿಟ್ಟರೆ ಇನ್ಯಾವ ಹಣ್ಣು ಅಥವಾ ಮರಮುಟ್ಟುಗಳನ್ನು ಕೊಡುವ ಗಿಡಮರಗಳೂ ಆ ತೋಟದಲ್ಲಿ ಇರಲಿಲ್ಲ.

ಭೂಮಂತ್ರಯ್ಯನವರ ತೋಟ ಪಕ್ಕದಲ್ಲೇ ಇದ್ದರೂ ಅದನ್ನು ಕಣ್ಣು ಬಿಟ್ಟು ನೋಡಿರಲಿಲ್ಲ. ರೈತರು ಬೆಳೆದ ಬೆಳೆಗೆ ಬೆಲೆ ಇತ್ತು. ಆದರೆ ಆ ಬೆಲೆ ರೈತರಿಗೆ ಸಿಕ್ಕದೆ ದಲ್ಲಾಳಿಗಳಿಗೆ ಸಿಗುತ್ತಿತ್ತು. ಬಹುತೇಕ ಎಲ್ಲ ಅಸಲಿ ರೈತರು ಕಷ್ಟದಲ್ಲಿದ್ದರು. ಇದನ್ನೆಲ್ಲ ನೋಡಿಯೂ ಅಧಿಕಾರಸ್ಥರು ಸುಮ್ಮನಿದ್ದರು ಅಥವಾ ನಗುತ್ತಿದ್ದರು. ಒಬ್ಬ ಅವಿವೇಕಿ ವಿಜ್ಞಾನಿಯೊಬ್ಬ ಕುಡಿತ ಮತ್ತು ದುಂದು ವೆಚ್ಚವೇ ರೈತರ ಈ ದುರಂತಕ್ಕೆ ಕಾರಣ ಎಂದು ಸಂಶೋಧನೆ ಮಾಡಿ ಮುಖಕ್ಕೆ ಉಗಿಸಿಕೊಂಡ. ಅವರಿಗೆ ರೈತಾಪಿ ಜನರ ಸ್ಥಿತಿಯನ್ನು ಅರಿಯುವ ಮನಸ್ಸಿರಲಿಲ್ಲ. ಸರ್ಕಾರ ಇರುವ ರೈತರಿಗೆ ಬೆಲೆ ಕೊಡದೆ ಆತ್ಮಹತ್ಯೆ ಮಾಡಿಕೊಂಡ ರೈತರ ಪ್ರಾಣಕ್ಕೆ ಬೆಲೆಕಟ್ಟಿ, ದುಡ್ಡಿನ ಪರಿಹಾರ ಕೊಡುತ್ತಿತ್ತು. ಅದಕ್ಕೆ ಭೂಮಂತ್ರಯ್ಯನವರು ಹೇಳುತ್ತಿದ್ದುದು "ಇದು ಆತ್ಮಹತ್ಯೆಯಲ್ಲ ಹತ್ಯೆ" ಎಂದು.

ಹೊಟ್ಟೆ ತುಂಬಿದ ಜನರೆಲ್ಲಾ ತಮಗೆ ಅನ್ನ ಬೆಳೆದುಕೊಡುವ ರೈತರ ಪರಿಸ್ಥಿತಿ ನೋಡಿಕೊಂಡು ಸುಮ್ಮನಿದ್ದರೆ, ರೈತರ ಹೊಲ ತೋಟಗಳಲ್ಲಿನ ಅಳಿಲುಗಳು ಮತ್ತು ಇಲಿಗಳು ರೊಚ್ಚಿಗೆದ್ದು ಹೋರಾಟಕ್ಕಿಳಿದದ್ದು ವಿಸ್ಮಯ ಹುಟ್ಟಿಸಿತ್ತು.

ತಿಂಗಳ ಕಾಲ ಅವು ಬಲು ಕಷ್ಟದಿಂದ ಸಂಘಟನೆ ಮಾಡಿದ್ದವು. ಇಲ್ಲದಿದ್ದರೆ, ಸುಮಾರು ಮೂವತ್ತೆರಡು ಹಳ್ಳಿಗಳ ಒಂದು ಲಕ್ಷಕ್ಕೂ ಹೆಚ್ಚು ಅಳಿಲು ಮತ್ತು ಇಲಿಗಳು ಆ ಕೆರೆಯ ಅಂಗಳದಲ್ಲಿ ಸೇರಲು ಸಾಧ್ಯವಾಗುತ್ತಿರಲಿಲ್ಲ. ಆ ಜೀವಿಗಳಲ್ಲಿದ್ದ ಉತ್ಸಾಹ ಅವುಗಳ ಕಣ್ಣಲ್ಲಿ ಎದ್ದು ಕಾಣುತ್ತಿತ್ತು. ಅವುಗಳ ಕಣ್ಣುಗಳನ್ನು ಇನ್ನೂ ಸರಿಯಾಗಿ ಗಮನಿಸಿದವರಿಗೆ "ರೈತರ ತೋಟ ಹೊಲಗಳಲ್ಲಿ ಆಹಾರ ತಿಂದು ಬದುಕುತ್ತಿರುವ ನಾವೂ ರೈತರ ಈ ಸ್ಥಿತಿಗೆ ಕಾರಣವೇನೋ" ಎಂಬ ಪಶ್ಚಾತ್ತಾಪದ ಭಾವ ಎದ್ದು ಕಾಣುತ್ತಿತ್ತು.

ಭೂಮಂತಯ್ಯನವರು ಇವುಗಳ ನೇತೃತ್ವ ವಹಿಸುವುದು ಅನಿವಾರ್ಯವಾಗಿತ್ತು. ಏಕೆಂದರೆ ಇವರ ತೋಟದ ಅಳಿಲುಗಳು ಮತ್ತು ಇಲಿಗಳೇ ಈ ಹೋರಾಟದ ಮುಂಚೂಣಿಯಲ್ಲಿದ್ದವು. ಅವುಗಳ ಒತ್ತಾಯಕ್ಕೆ ಮಣಿಯಲೇಬೇಕಾಗಿತ್ತು. ಇವರ ತೋಟಕ್ಕೆ ಬರುತ್ತಿದ್ದ ಕರಡಿಗಳು, ಹಂದಿಗಳು, ನರಿಗಳು, ಮುಳ್ಳು ಹಂದಿಗಳು, ನವಿಲುಗಳು ಈ ಹೋರಾಟಕ್ಕೆ ಸೇರಲು ಉತ್ಸುಕವಾಗಿದ್ದವು. ಆದರೆ ಭಯಭೀತರಾದ ಜನ ಕೊಲ್ಲಲೂ ಹೇಸುವುದಿಲ್ಲವೆಂದು ಭೂಮಂತ್ರಯ್ಯನವರೇ ಅವುಗಳನ್ನು ತಡೆದಿದ್ದರು.

ಮೂವತ್ತೆರಡು ಹಳ್ಳಿಗಳ ಅಳಿಲುಗಳು, ಇಲಿಗಳು ಬತ್ತಿ ಹೋಗಿದ್ದ ಕಿಬ್ಬನಹಳ್ಳಿ ದೊಡ್ಡ ಕೆರೆಯ ವಿಶಾಲ ಅಂಗಳದಿಂದ ಅವು ಸತ್ಯಾಗ್ರಹ ಮೆರವಣಿಗೆ ಆರಂಭಿಸಿದ್ದವು. ಅದೊಂದು ಅನೂಹ್ಯ ಚಿತ್ರ ಪಟದಂತೆ ಕಾಣುತ್ತಿತ್ತು. ಎಂಥ ಶಿಸ್ತು, ಎಂಥ ಛಲ, ಎಷ್ಟೊಂದು ಲವಲವಿಕೆ. ಒಂದು ಅಳಿಲು, ಒಂದು ಇಲಿ ಸಾಲಾಗಿ ಬರುತ್ತಿದ್ದರೆ ಆ ಸಾಲು ಸುಮಾರು ಹತ್ತು ಕಿಲೋ ಮೀಟರ್ ಚಾಚಿಕೊಂಡಿತ್ತು ಕಣ್ಣು ಮುಚ್ಚಿ ಬಿಡುವುದರಲ್ಲಿ ಮುಖ್ಯರಸ್ತೆಗೆ ಬಂದಿತ್ತು.

ಕೆಬಿ ಕ್ರಾಸ್, ನಿಟ್ಟೂರು, ಗುಬ್ಬಿ, ತುಮಕೂರು ಮೂಲಕ ಒಂದೇ ದಿನದಲ್ಲಿ ವಿಧಾನಸೌಧ ತಲುಪುವುದು ಅವುಗಳ ಗುರಿಯಾಗಿತ್ತು. ರಸ್ತೆಯುದ್ದಕ್ಕೂ ಜನ "ಇದು ನ ಭೂತೋ ನ ಭವಿಷ್ಯತ್" ಎಂದರು. ಈ ಮೆರವಣಿಗೆ, ಉದ್ದೇಶ ತಿಳಿದ ಜನ ನಾಚಿಕೆಪಟ್ಟರು. ದಾರಿಯಲ್ಲಿನ ಇತರ ಊರುಗಳ ಅಳಿಲು ಮತ್ತು ಇಲಿಗಳು ಇದೇನು ಕಥೆ ಎಂದು ವಿಚಾರಿಸಿ ತಾವು ಈ ಮೆರವಣಿಗೆಯಲ್ಲಿ ಸೇರುವ ಆಸೆ ತೋರಿದವು. ಅದಕ್ಕೆ ಅವಕಾಶವಾಗದ್ದಕ್ಕೆ ಬೇಜಾರು ಮಾಡಿಕೊಂಡು ಜೈಕಾರ ಹಾಕಿದವು.

ಭೂಮಂತ್ರಯ್ಯನವರು ಹೆಚ್ಚು ಕಡಿಮೆ ಅಳಿಲು ಅಥವಾ ಇಲಿಯಂತೆಯೇ ಕಾಣಿಸುತ್ತಿದ್ದರು. ಅವರನ್ನು ಯಾರೂ ಗುರ್ತು ಹಿಡಿಯಲಿಲ್ಲ. ಆಳಿಲು ಮತ್ತು ಇಲಿಗಳ ಭಾಷೆಯಲ್ಲಿ ಘೋಷಣೆಗಳು ಮೊಳಗುತ್ತಿದ್ದವು."ರೈತರ ಆತ್ಮಹತ್ಯೆ ನಿಲ್ಲಲಿ","ರೈತರನ್ನು ಉಳಿಸಿಕೊಳ್ಳಿ ಇಲ್ಲವೇ ಮಣ್ಣು ತಿನ್ನಿ","ರೈತರಿಗೆ ನೀರು ಕೊಡಿ", "ಬೆಳೆದ ಬೆಳೆಗೆ ಬೆಳೆ ಕೊಡಿ" ಆದರೆ ಇವು ಮನುಷ್ಯರಿಗೆ ಅರ್ಥವಾಗುತ್ತಿರಲಿಲ್ಲ. ಅದಕ್ಕೆ ಭೂಮಂತ್ರಯ್ಯನವರು ಒಮ್ಮೊಮ್ಮೆ ಆ ಘೋಷಣೆಗಳ ಅನುವಾದ ಮಾಡಿ ಅದಷ್ಟೂ ಜೋರಾಗಿ ಕೂಗುತ್ತಿದ್ದರು. ಆನರು ದನಿಗೂಡಿಸುತ್ತಿದ್ದರು.

ಇನ್ನೂ ಆ ಜೀವಿಗಳ ಮೆರವಣಿಗೆ ತುಮಕೂರು ತಲುಪುತ್ತಿದ್ದಂತೆ, ಪತ್ರಿಕೆ ಮತ್ತು ಟಿವಿಗಳ ವರದಿಗಾರರು ಚಿತ್ರಕಾರರು, ವಿಡಿಯೋಕಾರರು ಮುತ್ತಿಗೆ ಹಾಕಿದರು. ಈ ಘಟನೆಯ ಚಿತ್ರಗಳನ್ನು ಎಲ್ಲಿಂದ ತೆಗೆಯುವುದು,ಈ ಘಟನೆಯನ್ನು ಹೇಗೆ ವರದಿ ಮಾಡುವುದೆಂದು ತಬ್ಬಿಬ್ಬಾದರು. ಕ್ಷಣಾರ್ಧದಲ್ಲಿ ಈ ಸುದ್ದಿ

ವಿಧಾನಸೌಧ' ತಲುಪಿತು. ಇದು ನಿಜವೋ ಸುಳ್ಳೋ, ಮಾಧ್ಯಮದ ವಿಚಿತ್ರ ವ್ಯಕ್ತಿಗಳು ಹಬ್ಬಿಸಿದ ವಿಚಿತ್ರ ಗುಲ್ಲೋ ಎಂದು ಮುಖ್ಯಮಂತ್ರಿಗಳು ಖುದ್ದು ವಿಚಾರಿಸಿ ತಬ್ಬಿಬ್ಬಾದರು. ಅವರು ಕೃಷಿ ಮಂತ್ರಿ, ತೋಟಗಾರಿಕಾ ಮಂತ್ರಿ ಮತ್ತು ಅರಣ್ಯ ಮಂತ್ರಿಗಳ ತುರ್ತು ಸಭೆ ಕರೆದು ಚರ್ಚಿಸಿದರು.

ಮೆರವಣಿಗೆ ಬೆಂಗಳೂರು ತಲುಪಿದಾಗ ಬೆಂಗಳೂರಿನ ರಸ್ತೆಗಳ ಇದ್ದಕ್ಕಿದ್ದಂತೆ ಸ್ತಬ್ಧವಾದವು. ಜನ ಸ್ವಯಂ ಪ್ರೇರಣೆಯಿಂದ ಆ ಮೆರವಣಿಗೆ ಸರಾಗವಾಗಿ ಸಾಗಲು ದಾರಿಮಾಡಿಕೊಟ್ಟರು.

ಮೆರವಣಿಗೆ ವಿಧಾನಸೌಧ ತಲುಪಿದಾಗ ಮಧ್ಯಾಹ್ನ ಹನ್ನೊಂದು ಗಂಟೆಯಾಗಿತ್ತು. ಮೊದಲೇ ನಿರ್ಧಾರವಾದಂತೆ ಯಾರನ್ನು ಕೇಳದೆ, ಯಾರಿಗೂ ಹೇಳದೆ ವಿಧಾನಸೌಧದ ಮೂರೂ ಮಹಡಿಗಳಿಗೆ ಲಗ್ಗೆ ಇಡಲಾಯಿತು. ನಿಯೋಜನೆಗೊಂಡ ಒಂದು ಸಾವಿರ ಪೊಲೀಸರು ಏನು ಮಾಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ಇಲಿ ಅಳಿಲುಗಳು ಕಿಟಕಿ ಬಾಗಿಲು ಎನ್ನದೆ ಎಲ್ಲ ಕಡೆಯಿಂದ ಒಳನುಗ್ಗಿದ್ದವು. ಆ ಕ್ಷಣಕ್ಕಾದರೂ ಇಡೀ ವಿಧಾನಸೌಧ ಜೀವಂತಿಕೆ ಪಡೆದುಕೊಂಡಿತು. ಮನುಷ್ಯರು ಊಹಿಸಲಾಗದ ಸ್ಥಿತಿ ಅದಾಗಿತ್ತು.

ಮುಖ್ಯಮಂತ್ರಿಗಳು ಸತ್ಯಾಗ್ರಹದ ಮುಂಚೂಣಿಯಲ್ಲಿದ್ದ ಒಂದು ಇಲಿಯನ್ನು, ಒಂದು ಅಳಿಲನ್ನು ಮತ್ತು ಭೂಮಂತ್ರಯ್ಯನವರನ್ನು ಮಾತುಕಥೆಗೆ ತಮ್ಮ ಕೊಠಡಿಗೆ ಬರಲು ಹೇಳಿ ಕಳಿಸಿದ್ದು ವ್ಯರ್ಥವಾಯಿತು. ಇಂಥ ಮಾತುಕಥೆಯಲ್ಲಿ ನಮಗೆ ನಂಬಿಕೆ ಇಲ್ಲವೆಂದು ಅವರು ಖಡಾ ಖಂಡಿತವಾಗಿ ಹೇಳಿದರು.

ಬೇರೆ ದಾರಿಯಿಲ್ಲದ ಕೊನೆಗೆ ಅವರೇ ಈಚೆಗೆ ಬಂದರು. ಈ ಸಣ್ಣ ಜೀವಿಗಳು ಕೂಗುತ್ತಿರುವ ಘೋಷಣೆಗಳು ಸತ್ಯದಿಂದ ಹೊಳೆಯುತ್ತಿವೆ. ಅರ್ಥವಾಗುತ್ತಿಲ್ಲ ಎಂದಾಗ ಭೂಮಂತ್ರಯ್ಯನವರು ಅನುವಾದಿಸಿ ಅವುಗಳ ಅರ್ಥ ಹೇಳಿದರು. ಈ ಘೋಷಣೆಗಳನ್ನು ರೈತರ ಪರವಾಗಿಕೂಗುತ್ತಿರುವ 'ಈ ಜೀವಿಗಳಿಗೆ ನನ್ನ ನಮಸ್ಕಾರ, ಆದರೆ ಇಲಿಗಳು ವಿಧಾನಸೌದ ಕಡತಗಳನ್ನು ಕಡಿದು ಪುಡಿ ಮಾಡುವುದನ್ನು ದಯವಿಟ್ಟ ನಿಲ್ಲಿಸಲು ಹೇಳಿ ಎಂದು ಭೂಮಂತ್ರಯ್ಯನವರಿಗೆ ಸೂಚಿಸಿದರು.

ಅಷ್ಟರಲ್ಲಾಗಲೇ ಬಹುತೇಕ ಕಡತಗಳು ಚಿಂದಿಯಾಗಿ ತರಗೆಲೆಗಳಂತೆ ಹಾರಾಡುತ್ತಿದ್ದವು. ಇಲಿಗಳು ಟೀಂ ಮಾಡಿಕೊಂಡು ಮೂರು ಮಹಡಿಗಳನ್ನು ಆವರಿಸಿ ಮಂತ್ರಿಗಳು, ಶಾಸಕರು, ದಳ್ಳಾಳಿಗಳು, ಅಧಿಕಾರಿಗಳನ್ನು ಓಡಾಡಿಸಿಕೊಂಡು ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಕಚ್ಚಿದವು. ವಿಧಾನಸೌಧದಲ್ಲಿ ಮನೆ

ಮಾಡಿಕೊಂಡಿದ್ದ ಹೆಗ್ಗಣಗಳು ಕಿಟಕಿ ಹಾರಿ ಘೇರಿ ಕೀಳಲು ಮಾಡಿದ ಪ್ರಯತ್ನವನ್ನು ಒಂದು ತಂಡದ ಪೊಗದಸ್ತಾದ ಇಲಿಗಳ ತಂಡ ವಿಫಲಗೊಳಿಸಿತು.

ಎಲ್ಲ ಇಲಿಗಳು, ಅಳಿಲುಗಳು ತಮ್ಮ ಚುರುಕು ಕಾರ್ಯಾಚರಣೆ ಮುಗಿಸಿ ವಿಧಾನಸೌಧದ ಮುಂಭಾಗಕ್ಕೆ ಜಮಾಯಿಸಿದವು. ಅದೆಲ್ಲಿತ್ತೋ ಆ ಜನ, ರೈತರ ಆತ್ಮಹತ್ಯೆ ವಿರುದ್ಧದ ಈ ಹೋರಾಟಕ್ಕೆ ಬೆಂಬಲ ನೀಡಲು ಬಂದು ಸೇರಿತ್ತು. ನಗರದ ಜನರಿಗೆ ರೈತರ ಬಗ್ಗೆ ಕಾಳಜಿ ಇಲ್ಲ ಎಂಬ ನಂಬಿಕೆಯನ್ನು ಅವರು ಹುಸಿಗೊಳಿಸಿದ್ದರು.

ಮುಖ್ಯಮಂತ್ರಿಗಳು ಆಗ ಲಭ್ಯವಿದ್ದ ಮಂತ್ರಿಗಳನ್ನೆಲ್ಲ ಸೇರಿಸಿಕೊಂಡು ತುರ್ತು ಕ್ಯಾಬಿನೆಟ್ ಸಭೆ ನಡೆಸಿ ವಿಧಾನಸೌಧದ ಮುಂಭಾಗಕ್ಕೆ ಬಂದು ನಿಂತರು. ಇದು ಅವರಿಗೆ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಕಂಡು ಕೇಳರಿಯದ ಸವಾಲಾಗಿತ್ತು. ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ.

ಎಲ್ಲವೂ ಎಲ್ಲರಿಗೂ ಅರ್ಥವಾಗಿತ್ತು. ಆದರೂ ಪರಿಸ್ಥಿತಿಯ ತೀವ್ರತೆಯನ್ನು ಮನದಟ್ಟು ಮಾಡಲು, ಇಲಿಗಳ ಪರವಾಗಿ ಒಂದು ಇಲಿ, ಅಳಿಲುಗಳ ಪರವಾಗಿ ಒಂದು ಆಳಿಲು ತಲಾ ಎರಡುವರೆ ನಿಮಿಷ ಮಾತನಾಡಿದವು. ಭೂಮಂತ್ರಯ್ಯನವರು ಅವರಿಬ್ಬರ ಮಾತುಗಳನ್ನು ಸಂಗ್ರಹಿಸಿ ಅನುವಾದ ಮಾಡಿದರು...

"ರೈತರು, ರೈತ ಕಾರ್ಮಿಕರು ಇದ್ದರೆ ಎಲ್ಲರೂ ಇರುತ್ತಾರೆ. ಇವರು ಸತ್ತರೆ ಎಲ್ಲರೂ ಸಾಯುತ್ತಾರೆ, ಒಂದೇ ಒಂದು ದಿನ ರೈತರ ಬದುಕು ಬದುಕಿ ನೋಡಿ, ಛಳಿ, ಮಳೆ, ಬಿಸಿಲುಗಳನ್ನು ಉಂಡು ಅರಗಿಸಿಕೊಳ್ಳಿ. "ನಾವೂ ಮಣ್ಣಿನ ಮಕ್ಕಳೇ" ಎಂಬ ಕೊಳೆತ ಸುಳ್ಳು ಹೇಳಬೇಡಿ. ರೈತರು ಬೆಳೆದ ಬೆಳೆಯನ್ನು ಸಂತೆ, ಮಾರುಕಟ್ಟೆಗಳಲ್ಲಿ ಒಮ್ಮೆ ಮಾರಾಟ ಮಾಡಿನೋಡಿ.

ರೈತರು ಎಲ್ಲರನ್ನೂ ಸಾಕುತ್ತಾರೆ ಎಲ್ಲರೂ ಸೇರಿ ಇವರನ್ನು ಕೊಲ್ಲುತ್ತಿದ್ದಾರೆ. ಇಲ್ಲಿ ಇರುವ ಮುಖ್ಯಮಂತ್ರಿಗಳೇ ಮತ್ತು ಇಲ್ಲಿ ಇಲ್ಲದಿರುವ ಪ್ರಧಾನ ಮಂತ್ರಿಗಳೇ, ರೈತರನ್ನು ಮನುಷ್ಯರೆಂದು ಪರಿಗಣಿಸಿ, ಅವರ ನೂರು ಕಷ್ಟಗಳನ್ನು ಅರಿತು ಪರಿಹರಿಸಿ, ರೈತರು ಅವರನ್ನಷ್ಟೇ ಸಾಕಿಕೊಳ್ಳುತ್ತಿಲ್ಲ. ಎಲ್ಲ ಬಗೆಯ ನೌಕರರನ್ನೂ, ರಾಜಕಾರಣಿಗಳನ್ನು ಧರ್ಮಾಧಿಕಾರಿಗಳನ್ನೂ, ಸಾಹಿತಿಗಳನ್ನೂ, ಸಿನಿಮಾದವರನ್ನು ಸಾಕುತ್ತಿದ್ದಾರೆ. ನಿಮಗೆ ಗೊತ್ತಿರಲಿ ಅವರು ಪ್ರಾಣಿ, ಪಕ್ಷಿ, ಕೀಟಗಳಿಗೂ ಆಹಾರ ಒದಗಿಸುತ್ತಿದ್ದಾರೆ. ಅವರಿಗಾಗುತ್ತಿರುವ ನಷ್ಟದ ಲೆಕ್ಕವನ್ನು ನೀವ್ಯಾರೂ ಮಾಡುತ್ತಿಲ್ಲ.

ರೈತರ ಮಕ್ಕಳು ರೈತರಾಗಲು ಯಾಕೆ ಇಷ್ಟಪಡುತ್ತಿಲ್ಲವೆಂದ ಯೋಚಿಸಿ, ರೈತರಿಗೆ ಬಿಡುವಿಲ್ಲ. ರಜೆಯಲ್ಲ ಸಂಬಳ ಮೊದಲೇ ಇಲ್ಲ. ಅಷ್ಟೆಲ್ಲ ಬೇಡ ಇವರು ಬೆಳೆದ ಬೆಳೆಗೆ ಇವರ ಬಳಿ ಇದ್ದಾಗ ಬೆಲೆ ಇಲ್ಲ. ಇವರ ಕೈಯಿಂದ ವರ್ತಕರ ಕೈಗೆ ಹೋದ ತಕ್ಷಣ 'ಬೆಲೆ' ಬಂದುಬಿಡುತ್ತದೆ.

ಹೆಚ್ಚು ಮಾತು ಬೇಡ, ಇವರು ಬೆಳೆದ ಬೆಳೆಗೆ ಬೆಲೆ ಬೇಕು. ಇವರ ಪ್ರಾಣಗಳಿಗೆ ಬೆಲೆ ಬೇಕು. ಇವರದು ಆತ್ಮಹತ್ಯೆಯಲ್ಲ ಹತ್ಯೆ ಎಂಬುದು ನಿಮಗೆಲ್ಲರಿಗೂ ಗೊತ್ತಾಗಬೇಕು. ನಾವು ಪ್ರಾಣಿ ಪಕ್ಷಿಗಳು ಅವರ ಹೊಲ ತೋಟ ಗದ್ದೆಗಳಲ್ಲಿ ಮಾಡುವ ಊಟದ ವೆಚ್ಚವನ್ನು ಸರ್ಕಾರ ರೈತರಿಗೆ ತುಂಬಿಕೊಡಬೇಕು. ರೈತರು ಎಲ್ಲರನ್ನೂ ಸಾಕಿ ಉಳಿಯುವುದು ಸಾಧ್ಯವೇ ಯೋಚಿಸಿ, ಭೂಮಿ ಕೊಡಿ, ನೀರು ಕೊಡಿ, ಬೆಲೆ ಕೊಡಿ.

ಏನು ಮಾಡುತ್ತೀರೋ ಹೇಗೆ ಮಾಡುತ್ತಿರೋ ನಮಗೆ ಗೊತ್ತಿಲ್ಲ. ರೈತರ ಈ ಕಷ್ಟಗಳಿಗೆ ಒಂದು ತಿಂಗಳ ಒಳಗೆ ಪರಿಹಾರ ಯೋಜನೆಗಳು ಜಾರಿಯಾಗಬೇಕು. ಜಾರಿಯಾಗದಿದ್ದರೆ ರೈತರಂತೆಯೇ ಅನ್ನ ನೀರಿಲ್ಲದೆ ಬಳಲುತ್ತಿರುವ ಹುಲಿ, ಚಿರತೆ, ದನಕರುಗಳು, ಕರಡಿ, ಹಂದಿ, ಹಕ್ಕಿ ಪಕ್ಷಿಗಳು, ಕೀಟಗಳೇ ಮುಂತಾಗಿ ಒಂದು ಬೆಂಗಳೂರು ಮುತ್ತಿಗೆ ಹಾಕುತ್ತೇವೆ. ಆಗ ನಮ್ಮೊಟ್ಟಿಗೆ ಕೋಟಿ ಜನ ರೈತರೂ ಇರುತ್ತಾರೆ. ಇದು ಪೊಳ್ಳು ಬೆದರಿಕೆಯಲ್ಲ. ನಂಬಿಕೆಯಿಟ್ಟು ಕೊಡುತ್ತಿರುವ ಎಚ್ಚರಿಕೆ, ರೈತರು, ಕಾರ್ಮಿಕರು ಸಾವಿರಾರು ವರ್ಷಗಳಿಂದ ಅನುಭವಿಸಿದ ನೋವುಗಳನ್ನು ವಿವರಿಸಲು ಈ ಮಾತುಗಳು ಸಾಲುತ್ತವೆಯೇ ಹೇಳಿ..."

ಅಲ್ಲಿದ್ದ ಎಲ್ಲ ಮನುಷ್ಯರೂ ಅಳುತ್ತಿದ್ದರು. ಇಲಿಗಳು, ಅಳಿಲುಗಳು ಆಳುವುದನ್ನು ಕಲಿತಿರಲಿಲ್ಲ. ಮರುದಿನವೇ ಶಾಸನ ಸಭೆಯ ಅಧಿವೇಶನ ಕರೆದು ರೈತರ ಆತ್ಮಹತ್ಯೆ ಇನ್ನೆಂದೂ ನಡೆಯದಂತೆ ಅವರ ರಕ್ಷಣೆಗೆ ನಿಲ್ಲಲು, ಹಾಗೆಯೇ ಭೂಮಂತ್ರಯ್ಯನನ್ನು ಪ್ರಾಣಿ, ಪಕ್ಷಿ ಮತ್ತಿತರ ಜೀವಿಗಳ ಪರವಾಗಿ ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಲು ತೀರ್ಮಾನಿಸಲಾಯಿತು.

ಈ ಸುದ್ದಿ ದೆಹಲಿ ತಲುಪಲು ತಡವಾಗಲಿಲ್ಲ. ದೇಶದ ಎಲ್ಲ ರಾಜ್ಯಗಳ ಟಿವಿ ಚಾನಲ್‌ಗಳಲ್ಲಿ ನೂರಾರು ಬಗೆಯ ಚರ್ಚೆಗಳು ನಡೆದವು. ಕೊನೆಗೆ ಇಂಗ್ಲಿಷ್ ಸುದ್ಧಿ ವಾಹಿನಿಗಳಿಗೂ ಬುದ್ಧಿ ಬಂದು ಸರ್ಕಾರದ ರೈತರ ಬಗೆಗಿನ ಉದಾಸೀನವನ್ನು, ಹೊಣೆಗೇಡಿತನವನ್ನು ಹೊರಗೆಡವಿದವು. ಪತ್ರಿಕೆಗಳು ಮುಖಪುಟದಲ್ಲಿ ಕ್ರಿಕೆಟ್ ಮತ್ತು ಸಿನಿಮಾಗಳ ರಾಜಾರಾಣಿಯರಜಾಹೀರಾತು ಪ್ರಕಟಿಸುವುದನ್ನು ಬಿಟ್ಟು ಇಲಿ ಅಳಿಲುಗಳ ಹೋರಾಟದ ವಿವರಗಳನ್ನು ಚಿತ್ರಸಹಿತ ಪ್ರಕಟಿಸಿದವು. ಈ ಪ್ರಾಣಿಗಳೆಲ್ಲ ಒಟ್ಟಿಗೆ ಸೇರಿ

ಮಾಡಬಹುದಾದ ಹೋರಾಟದ ಎಚ್ಚರಿಕೆಯನ್ನು, ಅದರ ಸ್ವರೂಪದ ಪರಿಣಾಮವನ್ನು ಅಧಿಕಾರಸ್ಥರು ಬಹುಬೇಗ ಮನಗಂಡರು.

ಅಂತೂ ಸರ್ಕಾರಗಳು, ಅನುಭವಿ ರೈತಾಪಿಗಳ, ಸರ್ವಜೀವಿ ಪ್ರತಿನಿಧಿಗಳ, ಸರ್ವ ಪಕ್ಷಗಳ ಸಭೆ ಕರೆದು ಚರ್ಚಿಸಿ,ತಾವು ಜಾರಿಗೆ ತರಬಹುದಾದ ಎಲ್ಲ ಕ್ರಮಗಳನ್ನು ಒಟ್ಟಿಗೆ ಸೇರಿಸಿ "ಇಲಿ ಅಳಿಲುಗಳ ಘೋಷಣೆ" ಹೊರಡಿಸಿದವು. ಈ ಮೊದಲ ಎಷ್ಟೋ ಘೋಷಣೆಗಳು ಫೈಲುಗಳಲ್ಲೆ ಉಳಿದಿದ್ದವಲ್ಲ, ಹಾಗೆ ಈ ಘೋಷಣೆಯನ್ನು ಉದಾಸೀನ ಮಾಡುವುದು ಸಾಧ್ಯವಿರಲಿಲ್ಲ.

# 4. ಲಿಮೆಕ್ಸ್ ಕಲ್ಲಿನ ಕಾಗದ (ಓದು ಪಠ್ಯ)

**– ಎಸ್.ಸೀತಾರಾಮು**

**ಅರಣ್ಯ ನಾಶ, ಪರಿಸರ ಮಾಲಿನ್ಯ ತಗ್ಗಿಸಲು ಮರದಿಂದ ತಯಾರಿಸುವ ಕಾಗದ ಬಳಕೆ ತಗ್ಗಿಸುವುದು ಅನಿವಾರ್ಯ; ಪರ್ಯಾಯ ವ್ಯವಸ್ಥೆಗಳತ್ತ ಗಮನ ಹರಿಸಲು ಇದು ಸಕಾಲ**

ಇಂದಿನ ವಿದ್ಯುನ್ಮಾನ ಯುಗದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಕಾಗದ ರಹಿತ ಸಂವಹನೆಗೆ ಒತ್ತು ಕೊಡುತ್ತಿದ್ದರೂ, ಕಾಗದ, ಮನುಷ್ಯ ಜೀವನದ ಒಂದು ಮುಖ್ಯ ಭಾಗವಾಗಿ ಮುಂದುವರೆದಿದೆ. ಅದು ಹೆಚ್ಚು ಕಡಿಮೆ ಎರಡು ಸಹಸ್ರಮಾನಗಳಿಂದ ಜ್ಞಾನ, ಸಾಹಿತ್ಯ, ಕಲೆಗಳನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ಒಯ್ಯುತ್ತಿದೆ. ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ತಾಳೆಗರಿ, ಭೂರ್ಜ್ವಪತ್ರ, ತಾಮ್ರದ ಹಾಳೆಗಳು ಮುಂತಾದವುಗಳನ್ನು ಬಳಸಿ ಬರವಣಿಗೆಯನ್ನು ಮಾಡುತ್ತಾ ಬಂದಿದ್ದಾರೆ. ಆದರೆ ನಿಜವಾದ ಕಾಗದದ ಬಳಕೆ ಪ್ರಾರಂಭವಾದದ್ದು ಚೀನಾ ದೇಶದಲ್ಲಿ, 105 ಕ್ರಿ.ಶ. ನಂತರ, ಟ್ರಾಯ್ ಲುನ್ ಅನ್ನುವವನು ಆ ವರ್ಷ ತನ್ನ ಅನ್ವೇಷಣೆಯನ್ನು ಚೀನಾದ ಹಾನ್ ಚಕ್ರವರ್ತಿ ಹೋಡಿಯ ಗಮನಕ್ಕೆ ತಂದ. ಅವನು ಹಿಪ್ಪುನೇರಳೆ (ಮಲ್‌ಬೆರಿ) ಗಿಡದ ಕಾಂಡವನ್ನು ಚೆನ್ನಾಗಿ ಕುಟ್ಟಿ ಎಳೆ ಎಳೆಗಳಾಗಿ ಮಾಡಿ, ಚಿಂದಿ ಬಟ್ಟೆ ಮತ್ತು ಮೀನಿನ ಬಲೆಯನ್ನು ಒಟ್ಟಿಗೇ ಸೇರಿಸಿ, ಕುದಿಸಿ ಅದರಿಂದ ಕಾಗದವನ್ನು ತಯಾರಿಸಿದ. ಆ ಕಾಗದವನ್ನು ಚೈನಾದೆಲ್ಲೆಡೆ ಬಳಸಲು ಪ್ರಾರಂಭ ಮಾಡಿದರು. ನಂತರರೇಷ್ಮೆ ಮಾರ್ಗ (ಸಿಲ್ಕ್ ರೂಟ್)ದಿಂದ ಜಗತ್ತಿಗೆಲ್ಲ ಪ್ರಸರಿಸಿತು. ಸುಮಾರು 600 ಕ್ರಿ.ಶ.ದ ಹೊತ್ತಿಗೆ ಚೀನಾದಲ್ಲಿ ಮರದ ಅಚ್ಚಿನ ಮುದ್ರಣ ಪ್ರಾರಂಭವಾಯಿತು ಹಾಗೂ 740 ಕ್ರಿ.ಶ.ದಲ್ಲಿ ಚೀನಾದಲ್ಲೇ ಮೊದಲ ನ್ಯೂಸ್ ಪೇಪರ್ ಮುದ್ರಣಗೊಂಡಿತು.

ಇಂದು ನಾನಾ ಮೂಲವಸ್ತುವಿನಿಂದ ತಯಾರಿಸಿದ ನಾನಾ ವಿಧದ ಕಾಗದಗಳು ಬಳಕೆಯಲ್ಲಿವೆ. ಆದರೂ ಭಾಗಶಃ ಅತಿ ಹೆಚ್ಚು ಕಾಗದವನ್ನು ಮರಗಳಿಂದಲೇ ತಯಾರಿಸುತ್ತಾರೆ. ಸಾಮಾನ್ಯವಾಗಿ ಕಾಗದ ಉತ್ಪಾದಿಸಲು ಬಳಸುವ ಮರಗಳು ಎಂದರೆ – ಮೃದು ಮರಗಳುಠಿಡಿಣಛಿಜ (ಕ್ರಿಸ್‌ಮಸ್ ಟ್ರೀ) ಋಟಿಜ ಜಿಮಿ, ಟಚಿಡಿಛಿ (ವಿವಿಧ ಜಾತಿಯ ದೇವದಾರು ಮರಗಳು) ಎಜಚುಟಛಿಇ (ಒಂದು ವಿಷಪೂರಿತ ಮರ) ಜಾಛಿಚಿಟಥಿಠಿಣಣ (ನೀಲಗಿರಿ) ಛಿರಿಚುಚಿ(ಕರೀ ಮತ್ತಿ) ಮತ್ತು ಛಾಛಿ (ಬೀಟೆ ಮರ) ಮುಂತಾದವು. ಈ

ಮರಗಳ ದಿಮ್ಮಿಗಳನ್ನು ಸಣ್ಣ ಚೂರುಗಳಾಗಿ ಕತ್ತರಿಸಿ, ಕೆಲವು ರಸಾಯನಿಕಗಳೊಂದಿಗೆ ಬೆರೆಸಿ ಮರದ ತಿರುಳು (ಪಲ್ಪ್) ತಯಾರಿಸಿ ಅದರಿಂದ ಕಾಗದವನ್ನು ತಯಾರಿಸುತ್ತಾರೆ. ಮರದ ತಿರುಳು ಅಲ್ಲದೆ ಮರುಬಳಕೆ ಮಾಡಿದ ನೇಯ್ದ ಬಟ್ಟೆ (ರಿಸೈಕ್ಲಡ್ ಟೆಕ್ಸ್‌ಟೈಲ್) ಯಿಂದ ತಯಾರಿಸಿದ ಪಲ್ಪ್ ಅನ್ನು ಉತ್ತಮ ಸಕ್ಷಮ ಮುದ್ರಣಕ್ಕೆ ಮತ್ತು ಚಿತ್ರಕಲೆಯಲ್ಲಿ ಬಳಸುವ ಕಾಗದವನ್ನು ತಯಾರಿಸುತ್ತಾರೆ. 100% ಕಾಟನ್ ಮತ್ತು ಲಿನನ್ ಪಲ್ಪ್ ನಿಂದ ಹೆಚ್ಚು ಕಾಲ ಬಳಕೆ ಮತ್ತು ಬಾಳಿಕೆಗೆ ಬರುವ ಡಾಕ್ಯುಮೆಂಟ್ಸ್, ಉದಾ: ಹಣದ ನೋಟುಗಳು, ಪಾಸ್‌ಪೋರ್ಟ್‌ಗಳು, ಸರ್ಟಿಫಿಕೆಟ್ಸ್‌ಗಳೇ ಮುಂತಾದವನ್ನು ಮುದ್ರಿಸಲು ತಯಾರಿಸುತ್ತಾರೆ. ಜನಸಂಖ್ಯೆ ಬೆಳೆಯುತ್ತಾ ಹೋಗುತ್ತಿದೆ, ಅಂತೆಯೇ ಕಾಗದದ ಬಳಕೆ. 2030ರ ಹೊತ್ತಿಗೆ ಕಾಗದದ ಉಪಯೋಗ ಇಂದಿನ ಎರಡರಷ್ಟು ಆಗಲಿದೆ. ಇದರಿಂದಾಗಿ ಉಂಟಾಗಿರುವ ಒಂದು ಅತಿ ದೊಡ್ಡ ಸಮಸ್ಯೆ ಎಂದರೆ ಅರಣ್ಯನಾಶ. ಕಾಗದ ತಯಾರಿಸುವ ಕಾರ್ಖಾನೆಗಳು ಹೊರಬಿಡುವ ಕಲುಷಿತ ವಸ್ತುಗಳಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮ.

ಈ ದುಷ್ಪರಿಣಾಮಗಳನ್ನು ತಡೆಗಟ್ಟಲು ಇರುವ ಒಂದೇ ಮಾರ್ಗ ಎಂದರೆ ಮರದ ಕಾಗದದ ಬಳಕೆಯನ್ನು ತಗ್ಗಿಸುವುದು. ಹಾಗಾಗಬೇಕಾದರೆ ಅದರ ಬದಲಿಗೆ ಬೇರೆ ರೀತಿಯ ಕಾಗದವನ್ನು ತಯಾರಿಸುವುದು. ಈ ದಿಶೆಯಲ್ಲಿ ನಡೆದ ಸಂಶೋಧನೆಯ ಫಲವೇ **ಲಿಮೆಕ್ಸ್ ಕಲ್ಲಿನ ಕಾಗದ;** ಬಿಳಿ ಸುಣ್ಣದ ಕಲ್ಲನ್ನು ಬಳಸಿ ತಯಾರಿಸುವುದು. ತೈವಾನ್ ದೇಶದಲ್ಲಿ ಪ್ರಪ್ರಥಮವಾಗಿ ಇದರ ತಯಾರಿಕೆ ಸುಮಾರು ದಶಕದ ಹಿಂದೆ ಶುರುವಾದರೂ ಅದನ್ನು ದೊಡ್ಡ ಮಟ್ಟದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಬೆಳೆಸಿದ್ದು ಜಪಾನೀ ಕಂಪನಿಗಳು. ಅದರಲ್ಲೂ ವಿಶೇಷವಾಗಿ ಖಿಃಒ ಅಠ ಐಣಜ. (ಖಿಱಙ ಃಡಿಜಚಿ ಒಚಿಟಿಚಿರಿಚಿಚಿಣ ಛಿಠ) ವರ್ಷದಲ್ಲಿ 30000 ಟನ್‌ನಷ್ಟು ಲಿಮೆಕ್ಸ್ ತಯಾರಿಸಬಲ್ಲ. ದೊಡ್ಡ ಪ್ರಮಾಣದ ಫ್ಯಾಕ್ಟರಿಯನ್ನು ಸೆಂದೈನಲ್ಲಿ ಸ್ಥಾಪಿಸಿದೆ. ಈ ಕಂಪನಿಯ ಸಂಸ್ಥಾಪಕ ನೋಬುಯೋಶಿ ಯಮಸಾಕಿ 15ನೇ ವರ್ಷಕ್ಕೆ ಶಾಲೆಯನ್ನು ಬಿಟ್ಟು, ಬಡಗಿ ಕೆಲಸ ಮಾಡಿಕೊಂಡಿದ್ದವ. ನಂತರ ಕಾರು ಮಾರಾಟಗನಾಗಿದ್ದವನು 2011ರಲ್ಲಿ ಸ್ಥಾಪಿಸಿದ. ಕಂಪನಿಯನ್ನು ಮೊದಲು ತೈವಾನ್‌ನಿಂದ ಲಿಮೆಕ್ಸ್ ಅನ್ನು ಆಮದು ಮಾಡಿಕೊಂಡು ಮಾರುತ್ತಿದ್ದವ. ನಂತರ ಕಾಗದ ತಜ್ಞ ಯೋಚಿರೊ ಸುಮಿಯ ಜೊತೆಗೂಡಿ ಲಿಮೆಕ್ಸ್ ತಯಾರಿಸುವ ತಂತ್ರಜ್ಞಾನವನ್ನು ಇನ್ನೂ ಉತ್ತಮಗೊಳಿಸಿದ. ದಿನದಿಂದ ದಿನಕ್ಕೆ ಬೆಳೆಯುತ್ತಾ ಬಂದಿರುವ ಈ ಕಂಪನಿ ಈಗ ವಿದೇಶಗಳಲ್ಲೂ ಸೌದಿ ಅರೇಬಿಯಾ, ಅಮೆರಿಕೆಯ ಕ್ಯಾಲಿಫೋರ್ನಿಯ ಮುಂತಾದ ಕಡೆ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಸಹಾಯ ಮಾಡುತ್ತಿದೆ.

ನಮ್ಮ ದೇಶದಲ್ಲೂ ವಿಪುಲವಾಗಿ ಬಿಳೀ ಸುಣ್ಣದ ಕಲ್ಲು ಕರ್ನಾಟಕ, ಆಂಧ್ರ ಪ್ರದೇಶ, ಗುಜರಾತ್ ಮತ್ತು ಮೇಘಾಲಯಗಳಲ್ಲಿ ದೊರೆಯುತ್ತದೆ. ಇದನ್ನು ಗೋಡೆಗೆ ಹಚ್ಚುವ ಸುಣ್ಣ ಮಾಡಲು, ಎಲೆ ಅಡಿಕೆ ಜೊತೆ ತಿನ್ನುವ ಶುದ್ಧ ಸುಣ್ಣ ಮತ್ತು ಕೋಳಿ ಸಾಕುವಿಕೆಯಲ್ಲಿ ಅದರ ಆಹಾರವನ್ನು ತಯಾರಿಸಲು ಉಪಯೋಗಿಸಲಾಗುತ್ತಿದೆ. ರಾಜಾಸ್ತಾನ್ ಮತ್ತು ಮಧ್ಯಪ್ರದೇಶದಲ್ಲಿನ ಅಮೃತ ಶಿಲೆಯ ಕ್ವಾರಿಗಳಿಂದ ತೆಗೆದ ಚೂರುಗಳಿಂದಲೂ ಲಿಮೆಕ್ಸ್ ತಯಾರಿಸಬಹುದು. ಆದರೆ ಇನ್ನೂ ಯಾವ ಕಂಪನಿಯೂ ಲಿಮೆಕ್ಸ್ ಅನ್ನು ತಯಾರಿಸಲು ಮುಂದೆ ಬಂದಿಲ್ಲ. ಖಂಡಿತ ಶೀಘ್ರವಾಗಿ ಯಾರಾದರೂ ಮುಂದೆ ಬರುತ್ತಾರೆ.

**ಲಿಮೆಕ್ಸ್ ತಯಾರಿಸುವ ವಿಧಾನ:**

ಲಿಮೆಕ್ಸ್, ಸುಣ್ಣದ ಕಲ್ಲಿನಿಂದ ತಯಾರಾದ ಕ್ಯಾಲ್ಸಿಯಂ ಕಾರ್ಬೊನೆಟ್ ಮತ್ತು ಒಂದು ಸಣ್ಣ ಪ್ರಮಾಣದಲ್ಲಿ ಬೆರೆಸಿದ ಪಾಲಿಮೆರಿಕ್ ಅಂಟಿ(ರೆಸಿನ್)ನಿಂದ ಸಿದ್ಧಪಡಿಸಿದ ಒಂದು ಉತ್ತಮ ವಸ್ತು. ಈ ಕಚ್ಚಾ ಮಾಲನ್ನು ಬಿಸಿ ಮಾಡಿ, ಟ್ವಿನ್ ಸ್ಕ್ರೂ ಎಕ್ಸ್‌ಟ್ರೂಡರ್ ಮಶಿನ್‌ನಲ್ಲಿ ಚೆನ್ನಾಗಿ ನಾದಿ, ತೂಕದಲ್ಲಿ 50% ನಷ್ಟು ಕ್ಯಾಲ್ಸಿಯಮ್ ಕಾರ್ಬೊನೆಟ್ ಇರುವಂತಹ ಕರಗಿದ ಏಕರೂಪದ ವಸ್ತು ತಯಾರಾಗುತ್ತದೆ. ನಂತರ ಲಿಮೆಕ್ಸ್ ಕಂಪನಿಯ (ರಹಸ್ಯ) ವಿಧಾನದಂತೆ ಈಸಮರೂಪದ ದ್ರವ್ಯವನ್ನು ಕಾಯಿಸಿ, ಒತ್ತಡಕ್ಕೆ ಒಳಪಡಿಸಿದಾಗ ಮುಂದಿನ ಪರಿಷ್ಕರಣಕ್ಕೆ ಸೂಕ್ತವಾದ ವಸ್ತು ತಯಾರಾಗುತ್ತದೆ.

ಲಿಮೆಕ್ಸ್ ಅನ್ನು ಈ ಕರಗಿಸಿದ ಸಂಯೋಜಕವನ್ನು ಟಿ–ಡೈ ಶೀಟ್ ಎಕ್ಸ್‌ಟ್ರೂಶನ್‌ನಿಂದ ತಯಾರಿಸಲಾಗುತ್ತದೆ ಮತ್ತು ಹಿಗ್ಗಿಸುವ ವಿಧಾನದಿಂದ (ಸ್ಟ್ರೆಚಿಂಗ್) ಹಾಳೆಯಲ್ಲಿನ ಸಚ್ಛಿದ್ರ ರಚನೆಯನ್ನು, ಬಿಳೀಬಣ್ಣ ಮತ್ತು ಹಗುರತನ ಉಂಟುಮಾಡಲಾಗುತ್ತದೆ. ನಂತರ ಕೆಲವು ನಿಶ್ಚಿತ ರಸಾಯನಿಕಗಳನ್ನು ಈ ಲಿಮೆಕ್ಸ್ ಹಾಳೆಗಳಿಗೆ ವಿವಿಧ ರೀತಿಯ ಮುದ್ರಣಕ್ಕೆ ಅನುವಾಗುವಂತೆ ಬಳಿಯಲಾಗುವುದು.

ಲಿಮೆಕ್ಸ್‌ನ ಸಣ್ಣ ಗುಳಿಗೆ, (ಪೆಲೆಟ್ಸ್) ಗಳನ್ನು ಕರಗಿದ ಸಂಯೋಜಕವನ್ನು ಸಣ್ಣ ಗುಳಿಗೆಗಳಾಗಿ ಮಾಡಲಾಗುತ್ತದೆ. ಲಿಮೆಕ್ಸ್ ಗುಳಿಗೆಗಳನ್ನು ಹಳೆ ಉಪಯೋಗಿಸಿದ ಹಾಳೆಗಳು ಮತ್ತು ಗುಳಿಗೆ ಮಾಡುವಾಗ ಬರುವ ಹೆಚ್ಚುವರಿ ತುದಿಯ ಚೂರುಗಳನ್ನು ಬಳಸಿ ಮಾಡಲಾಗುತ್ತದೆ.

**ಲಿಮೆಕ್ಸ್‌ನ ವಿಶೇಷ ಗುಣ:**

**ಮುದ್ರಿಸಲು ಸೂಕ್ತ** – ಲಿಮೆಕ್ಸ್‌ನಿಂದ ಪುಸ್ತಕಗಳನ್ನು, ವಿಸಿಟಿಂಗ್ ಕಾರ್ಡ್‌ಗಳನ್ನು, ಪೋಸ್ಟರ್ ಮತ್ತು ನೋಟ್ ಪುಸ್ತಕಗಳನ್ನು ಸುಲಭವಾಗಿ ಮತ್ತು ಚೆನ್ನಾಗಿ ಮುದ್ರಿಸಬಹುದು. ಪೊಲೀಪ್ರೊಪಿಲೇನ್‌ನ

ಬಳಸುವುದರಿಂದ ಮೇಲಿನವನ್ನು ಹೆಚ್ಚು ಉಷ್ಣತೆಯ ಲೇಸರ್ ಪ್ರಿಂಟಿಂಗ್ ಮಶಿನ್‌ಗಳಲ್ಲಿಯೂ ಮುದ್ರಿಸಬಹುದು.

**ಅತ್ಯುತ್ತಮ ಗುಣಮಟ್ಟ** –ಹೊಸ ತಯಾರಿಕಾ ತಾಂತ್ರಿಕತೆಯಿಂದಾಗಿ ಲಘುವಾದ, ಕಡಿಮೆ ಬೆಲೆಯ, ಉತ್ತಮ ಮಟ್ಟದ ಲಿಮೆಕ್ಸ್ ಪೇಪರ್ ಅನ್ನು ತಯಾರಿಸಬಹುದು.



## ಲಿಮೆಕ್ಸ್ ಉತ್ಪನ್ನಗಳು

**ಲಿಮೆಕ್ಸ್ ಕಾಗದ** **ಲಿಮೆಕ್ಸ್ ವ್ಹೀಲ್ ಬರೋ ಮತ್ತು ಪ್ಯಾಕಿಂಗ್ ಮೆಟಿರಿಯಲ್**





**ಲಿಮೆಕ್ಸ್ ಫರ್‌ನೀಚರ್ ಲ್ಯಾಮಿನೇಟ್ ಹಾಳೆಗಳು ಪ್ಲಾಸ್ಟಿಕ್‌ನ ಬದಲಾಗಿ ಲಿಮೆಕ್ಸ್‌ನಿಂದ ಮಾಡಿದ ಪೆನ್‌ಗಳು**





**ಉಸಿರಾಡಬಲ್ಲ ಲಿಮೆಕ್ಸ್ ಬಟ್ಟೆ**

**ಲಿಮೆಕ್ಸ್ ಫುಡ್ ಕಂಟೇನರ್**





**ಅತ್ಯಂತ ಪ್ರಬಲ ಜಲ ಪ್ರತಿರೋಧ ಗುಣ** – ಈ ಗುಣದಿಂದಾಗಿ ಲಿಮೆಕ್ಸ್ ವಸ್ತುಗಳು ಹೊರಬಳಕೆಯಲ್ಲಿ, ಸ್ನಾನಗೃಹದಲ್ಲಿ ಮತ್ತು ನೀರಿನ ಒಳಗಡೆ ಉಪಯೋಗಿಸುವ ವಸ್ತುಗಳ ತಯಾರಿಕೆಗೆ ಹೇಳಿಮಾಡಿಸಿದಂಥದ್ದು. ಇದರಿಂದ ಮಾಡಿದ ಸರಕು ಸಾಗಾಣಿಕೆಯ ಬಾಕ್ಸಗಳು ಮಳೆಗೆ ಹಾಳಾಗದೇ ಇರುವುದರಿಂದ ಸರಕುಗಳನ್ನು ಸಾಗಾಣಿಕೆ ಕಂಪನಿಗಳು ನಿಶ್ಚಿಂತೆಯಾಗಿ ಸಾಗಿಸಬಹುದು.

**ಮರು ಬಳಕೆ ಸಾಧ್ಯವಿದೆ** – ಜಗತ್ತಿನಲ್ಲಿ ಬಿಳಿ ಸುಣ್ಣದ ಕಲ್ಲಿನ ನಿಕ್ಷೇಪಗಳು ವಿಪುಲವಾಗಿದ್ದರೂ. ಲಿಮೆಕ್ಸ್ ಅನ್ನು ಮರುಬಳಸಲು ಬರುವುದರಿಂದ ನಿಕ್ಷೇಪಗಳು ಎಂದೂ ಕರಗಿಹೋಗುವುದಿಲ್ಲ.

**ಕಡಿಮೆ ಪೆಟ್ರೋಕೆಮಿಕಲ್ಸ್ ಕಡಿಮೆ ವಿಷ** –ಇಂದು ಲಿಮೆಕ್ಸ್ 40% ಭಾಗ ಪೆಟ್ರೋಕೆಮಿಕಲ್ಸ್ ಆಧಾರಿತ ಪೋಲಿಪ್ರೊಪಿಲೆನ್‌ನಿಂದ ಆಗಿದ್ದರೂ 100% ಆಧಾರಿತ ಪ್ಲಾಸ್ಟಿಕ್‌ಗಿಂತ ಬಹಳ ಕಡಿಮೆ ವಿಷಕಾರಿ ಮತ್ತು ಪರಿಸರ ಸ್ನೇಹಿ.

**ಕಡಿಮೆ ಬೆಲೆ** – ಸುಣ್ಣದ ಕಲ್ಲು ಪೆಟ್ರೋಲ್ ಆಧಾರಿತ ಕಚ್ಚಾಮಾಲಿಗಿಂತ ಕಡಿಮೆ ಬೆಲೆಯದಾಗಿರುವುದರಿಂದ ಲಿಮೆಕ್ಸ್ ಪ್ಲಾಸ್ಟಿಕ್ ವಸ್ತುಗಳು ಪೆಟ್ರೋಲಿಯಂ ಆಧಾರಿತ ಪ್ಲಾಸ್ಟಿಕ್‌ಗಿಂತ ಬಹಳ ಕಡಿಮೆ ಬೆಲೆಯದ್ದಾಗಿದೆ.

**ಅರಣ್ಯ ಮತ್ತು ನೀರಿನ ಸಂರಕ್ಷಣೆ** – ಒಂದು ಟನ್ ಸಾಂಪ್ರದಾಯಿಕ ಮರದ ಸೆಲುಲೋಸ್ ಕಾಗದ ತಯಾರಿಸಲು 20 ಮರಗಳನ್ನು ಕತ್ತರಿಸಬೇಕಾಗುತ್ತೆ ಮತ್ತು 100 ಟನ್ ನೀರನ್ನು ಬಳಸಬೇಕಾಗುತ್ತೆ. ಆದರೆ ಒಂದು ಟನ್ ಲಿಮೆಕ್ಸ್ ತಯಾರಿಸಲು – 0.8 ಟನ್ ಸುಣ್ಣದಕಲ್ಲು ಮತ್ತು –0.2 ಟನ್ ಪೊಲಿಎಥಿಲಿನ್ ಸ್ವಲ್ಪವೂ ನೀರಿಲ್ಲದೆ ಬಳಸಲಾಗುವುದು. ಜಗತ್ತಿನ ಕೇವಲ 5% ಕಾಗದವನ್ನು ಲಿಮೆಕ್ಸ್‌ನಿಂದ ಬದಲಾಯಿಸಿದರೆ ದೊಡ್ಡ ಪ್ರಮಾಣದಲ್ಲಿ ಅರಣ್ಯನಾಶವನ್ನು ತಡೆಗಟ್ಟಬಹುದು ಮತ್ತು ನೀರಿನ ಬಳಕೆಯನ್ನು ಕಡಿಮೆಗೊಳಿಸಬಹುದು.

**ಇತರೆ ಉಪಯೋಗಗಳು**

ಇತ್ತೀಚೆಗೆ ಅನೇಕ ದೇಶಗಳು ಕೇವಲ ಒಂದು ಸಾರಿ ಉಪಯೋಗಿಸಬಹುದಾದ ಪ್ಲಾಸ್ಟಿಕ್ ವಸ್ತುಗಳನ್ನು – ಪ್ಲಾಸ್ಟಿಕ್ ಚೀಲಗಳು, ಆಹಾರ ಇಡುವ ಡಬ್ಬಗಳು, ತಿನ್ನಲು ಉಪಯೋಗಿಸುವ ಚಾಕು, ಚೂರಿ ಮುಂತಾದವುಗಳ ಉಪಯೋಗವನ್ನು ನಿಷೇಧಿಸುತ್ತಿವೆ. ಲಿಮೆಕ್ಸ್ – ಸುಣ್ಣದ ಕಲ್ಲು ಮತ್ತು ಪಾಲಿಯೋಲೆಫನ್ ಅಂಟಿನಿಂದ ಮಾಡಿದ್ದಾಗಿರುವುದರಿಂದ ಈ ಎಲ್ಲ ವಸ್ತುಗಳನ್ನು ಯಾವುದೇ ವಿರೋಧವಿಲ್ಲದೆ ತಯಾರಿಸಬಹುದು. ಮತ್ತೆ ಈ ಅಂಟಿನ ಜಾಗದಲ್ಲಿ ಜೈವಿಕ ವಿಘಟನೀಯ ಲಿಮೆಕ್ಸ್ ಉಪಯೋಗಿಸುವ ತಂತ್ರಜ್ಞಾನವನ್ನೂ ಕಂಡು ಹಿಡಿಯಲಾಗಿದೆ.

ಲಿಮೆಕ್ಸ್ ಮುಂದಿನ ದಿನಗಳಲ್ಲಿ ವಿಮಾನ ತಯಾರಿಕೆ, ಕಟ್ಟಡ ನಿರ್ಮಾಣ ಸೇರಿದಂತೆ ಪ್ಲಾಸ್ಟಿಕ್ ಎಲ್ಲೆಲ್ಲಿ ಉಪಯೋಗವಾಗುತ್ತಿದೆಯೋ ಅಲ್ಲೆಲ್ಲಾ ಅನೇಕ ಕ್ಷೇತ್ರಗಳಲ್ಲಿ ಉಪಯೋಗಿಸಲು ಬರುತ್ತದೆ. ಹೀಗಾಗಿ ಅದರ ಬೇಡಿಕೆಯೂ ಅಪಾರವಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲ.. ಲಿಮೆಕ್ಸ್ ಮಾನವ ನಿರ್ಮಿತ ವಸ್ತುಗಳಲ್ಲಿ ಒಂದು ಕ್ರಾಂತಿಕಾರಿ ಅನ್ವೇಷಣೆ ಎಂದರೆ ತಪ್ಪಾಗಲಾರದು.

**ಅಂತಃಕರಣ**

**ಆಶಯ:** **ಗರತಿಯ ಹಾಡು**

1

ಒಳ್ಳೆಯವರ ಗೆಳೆತನ ಕಲ್ಲುಸಕ್ಕರಿ ಹಾಂಗ
ಖುಲ್ಲರ ಗೆಳೆತನ ಮಾಡಿದರೆ । ನನಕಂದ
ಸಲ್ಲದ ಮಾತು ಬರತಾವ.

2

ಹುಟ್ಟುವಾಗ ತರಲಿಲ್ಲ ಹೋಗುವಾಗೊಯ್ಯಲಾರೆ
ಸುಟ್ಟು ಸುಟ್ಟು ಸುಣ್ಣದ್ದರಳಾಯ್ತು ।
ದೇಹವು ಕಷ್ಟವನು ಬಿಡಿಸೊ ಸೃಷ್ಟಿಗೊಡೆಯ.

3

ತೌರೂರು ದಾರೀಲು ತೆಗೆಸಣ್ಣ ಬಾವೀಯ
ಅಕ್ಕತಂಗೀರು ತಿರುಗಾಡೋ। ಹಾದೀಲಿ
ತೆಗೆಸಣ್ಣ ಕಲ್ಯಾಣದ ಕೊಳಗಳು

**–ಜಾನಪದ**

# 1. ಸುಧೀರ

**- ಗಂಗಾಧರ ಚಿತ್ತಾಲ**

**ಕವಿ ಪರಿಚಯ : ಕಾಲ(1923–1987)**

ಹೆಸರಾಂತ ನವ್ಯ ಕವಿಯಾಗಿದ್ದ ಶ್ರೀ ಗಂಗಾಧರ ಚಿತ್ತಾಲರು ಅಲ್ಪ ಪ್ರಮಾಣದ್ದಾದರೂ, ಮೌಲಿಕ ಸಾಹಿತ್ಯವನ್ನು ರಚಿಸಿದ್ದಾರೆ. ಅವರು ಮುಂಬಯಿಯರೈಲ್ವೆ ಇಲಾಖೆಯ ಲೆಕ್ಕಪತ್ರ ಶೋಧನ ವಿಭಾಗದ ಹಿರಿಯ ಹುದ್ದೆಯಲ್ಲಿದ್ದರು. ಚಿತ್ತಾಲರು 1982ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

**ಮುಖ್ಯ ಕವನ ಸಂಕಲನಗಳು:** ಮನುಕುಲದ ಹಾಡು, ಹರಿವ ನೀರಿದು, ಕಾಲದ ಕಥೆ, ಸಂಪರ್ಕ.

ಮಣ್ಣಾಗಿದ್ದಾನೆ ಹುಡುಗ !
ಕಣ್ಣಮುಂದೇ ಬೆಳೆದು ಕಣ್ತುಂಬಿ ನಿಂತವನು
ಎಲ್ಲಿಲ್ಲದಂಥ ಪ್ರಾಣೋಲ್ಲಾಸ ತಂದವನು
ಹೆದಗೇರಿ ಬಿಗಿಗೊಂಡ ಕೋದಂಡದಂಥವನು
ಈಗ ಮಣ್ಣಾಗಿದ್ದಾನೆ

ಈ ಪಿಳ್ಳೆಯ ಲಕ್ಷ್ಯವೆಲ್ಲ ಅಂತರಿಕ್ಷಕ್ಕೆ ಎಂದು ಕಂಡಾಗಲೇ
ಮನ ಅಳುಕಿತ್ತು
ಇವನ ಅಂಗಾಂಗದಲ್ಲಿ ಮಾತ್ರ
ಮುಗಿಲ ನೀಲಿಯ ಕುಡಿದು ಮೋಡಗಳಲೊಡನಾಡಿ

ಕುಶಲ ಕೇಳುವ ಚಪಲ ತುಳುಕಿತ್ತು
ನೆಲಕ್ಕೇ ಕಾಲು ತಾಕದ ಬೀಸು ನಡೆಯಲ್ಲಿ
ಗಾಳಿಬೆನ್ನೇರಿ ಬಾನಿಗೆ ಲಗ್ಗೆ ಇಡುವವನ ಸೆಳವಿತ್ತು

ಒಂದು ಮುಂಜಾನೆ ಕಣ್ಣುಜ್ಜಿ ನೋಡುತ್ತೇನೆ.
ದೋರ್ದಂಡ ಉದ್ದಂಡನಾಗಿ ನಿಂತಿದ್ದಾನೆ
ಸನ್ನದ್ಧ!

ಮಾತು ಮಾತಿಗೆ ಉಕ್ಕುವ, ಉತ್ತುಂಗ ಉತ್ಸಾಹ
ಕ್ಷಣ ನಿಲ್ಲಗೊಡದ ಖುಷಿ, ನೆರಳನರಿಯದ ಭಾವ
ಒಮ್ಮೊಮ್ಮೆ ಅನಿಸಿತ್ತು
ಇವನ ಧಮನಿಗಳಲ್ಲಿ ಸುರಿವ ನೆತ್ತರ ವೇಗ ಈ ನೆಲದ್ದೇ ಅಲ್ಲ
ಈತ ನಮ್ಮಂತಿಲ್ಲಿ ಬವಣೆ ಬಳಲಿಕೆಯ ತಲೆಭಾರ
ಸಾವರಿಸುತ್ತ ಕಾಲೆಳೆದು ದಿನ ನೂಕಿ ತೊಳಲ ಬಂದವನಲ್ಲ
ಆದರೂ ಎಣಿಸಿರಲಿಲ್ಲ
ಈ ಗಗನ ವೇಧಿ
ಇಷ್ಟೊಂದು ತ್ವರೆಯ ಆತುರದಿಂದ ಬಂದವನು

ಹತ್ತೇ ದಿನ ತಿತ್ತಿರಿ ಕುಣಿದು
ಅಲ್ಲಲ್ಲಿ ನುಗ್ಗಿ ಹಿಗ್ಗಿ ರಂಗುರಂಗಿನ ನೂರು ಗುಳ್ಳೆ ಊದಿ
ಹಾರಿಸಿ
ತುಟಿಮೇಲೆ ಜೇನುರುಚಿ ತೊಟಕಿಕ್ಕುವಾಗಲೇ ನೆಕ್ಕಿ ಚಪ್ಪರಿಸಿ
ಹಗಲಿಡೀ ಮುಂಜಾವಿನಂತೆ ಕಳೆದು
ಬಿಸಿಲೇರಿ ಬೈಗಿಳಿವ ಮೊದಲಿಗೇ ಹೊರಡುವನು
ಗರಿಬಿಚ್ಚಿ ನಿಗುರಿ ಗಗನಕ್ಕುಗಿದ ಈ ಬಾಣ
ಗಾಳಿ ಪಾಲಾಗಿ ನಾಲ್ಕಾರೆ ಪುಕ್ಕ ಮಾತ್ರ ನೆಲಕ್ಕಿಳಿಸಿ
ತೆರಳುವನು
ಈಗ ಉಳಿದದ್ದೇನು?

ನೆನೆದಾಗಲೆಲ್ಲ ಮನಸಲ್ಲಿ ಕಲಕುವ ಅವನ
ಮರೆಯಲಾಗದ ಸದಾ ನಗುಮುಡಿದ ಮುಖಬಿಂಬ
ಕಣ್ಣು ತುಂಬುವ ಅವನ ದೇಹದ್ಯುತಿಯ ಕಂಬ
ಮಾಯಲಾರದ ನೋವು ತಪ್ಪಿಸಬಾರದ ಕೊರಗು, ಹಳಹಳಿ:
ಈ ಆಕಾಶ ಪರವಶ ಜೀವ ಬಂತೆಲ್ಲಿಂದ ಹೋಯಿತೆಲ್ಲಿ?

# 2. ಕಳ್ಳುಬಳ್ಳಿ

**– ಬಿ.ಟಿ. ಜಾಹ್ನವಿ**

ಕೆಂಚನಿಗೆ ಕಣ್ಣು ಎಳೆಯುತ್ತಿದ್ದವು. ಗಂಟೆ ಆಗಲೇ ಹತ್ತಾಗಿತ್ತು. ಆದರೂ ಉಣ್ಣುವವರಿನ್ನೂ ಇದ್ದರು. ಎಲ್ಲರೂ ಉಂಡ ಮೇಲೆ ಪಾತ್ರೆಗಳನ್ನೆಲ್ಲ ಬೆಳಗಿ, ನೆಲ ಗುಡಿಸಿ ಒರೆಸಿ ಮಗ ತಿಪ್ಪ ನೆಲ ಕಾಣುವ ಹೊತ್ತಿಗೆ ಹನ್ನೊಂದಾದರೂ ಆಯ್ತೂ ಹನ್ನೆರಡಾದರೂ ಆಯ್ತು. ಹತ್ತು ವರ್ಷದ ತಿಪ್ಪ ಬೆಳಗ್ಗಿನಿಂದ ಈ ಮನೆಯ ಕೆಲಸ ಮಾಡಿ, ಮಾಡಿ ಸೋತು ಸುಣ್ಣ ಆಗಿದ್ದ. ಈ ಮನೆಯ ಯಜಮಾನರು ಶಿವಣ್ಣ ಮತ್ತು ಇಂದ್ರ. ನಾಳೆಯೇ ಅವರ ಒಬ್ಬನೇ ಮಗ ರಾಜುವಿನ ಹನ್ನೆರಡನೇ ವರ್ಷದ ಹುಟ್ಟುಹಬ್ಬ. ಇಂದೇ ಬಂಧುಬಳಗವೆಲ್ಲ ಬಂದಿಳಿದಿತ್ತು. ಅವರುಗಳೆಲ್ಲ ಉಂಡು ಮುಗಿಸುವ ತನಕ ತಿಪ್ಪನ ಹೊಟ್ಟೆಯೂ ಖಾಲಿ.

ಹೆಂಡತಿ ಬಸ್ವಿಯ ಬಳಿ ತಿಪ್ಪನನ್ನು ಕರೆತರುವೆ ಉಗಾದಿ ಹಬ್ಬಕ್ಕೆ ಎಂದು ಹೇಳಿಬಂದಿದ್ದ. ಆದರೆ ಶಿವಣ್ಣನ ಮನೆಗೆ ಬಂದಾಗ ಆ ವಿಷಯ ಮಾತಾಡಲೇ ಇಲ್ಲ. ಬದಲಿಗೆ ದುಡ್ಡಿಗಾಗಿ ಬಂದಿದ್ದೆ ಎಂದಿದ್ದ. ತಿಪ್ಪನನ್ನು ಊರಿಗೆ ಕರೆದು ಕೊಂಡು ಹೋಗಬಾರದೆಂದೇನೂ ಇರಲಿಲ್ಲ ಅವನಿಗೆ. ಆದರೆ ಮಗನನ್ನು ನೋಡಿ ಬಸ್ವಿ ಮತ್ತೆಲ್ಲಾದರು ಮನಸ್ಸನ್ನ ಬದಲಾಯಿಸಿ, ರಂಪ ತೆಗೆದು ಗಲಾಟೆ ಮಾಡಿದರೆ ಎಲ್ಲೀ ಸಹವಾಸ ಅಂತ ಆ ವಿಚಾರವನ್ನೇ ಕೈಬಿಟ್ಟಿದ್ದ. ಸಾಮಾನ್ಯವಾಗಿ ಅವನು ಶಿವಣ್ಣನ ಮನೆಯ ಬಳಿಗೆ ಬರುತ್ತಿರಲಿಲ್ಲ. ಆಫೀಸಿನ ಬಳಿಯೇ ಹೋಗಿಬರುತ್ತಿದ್ದ. ಆದರೆ ಇಂದು ರಜವಿದ್ದುದರಿಂದ ಮನೆಗೆ ಬಂದಿದ್ದ. ಇಲ್ಲಿ ಮಗನ ದುಡಿತದ ಅಂದಾಜು ಈಗವನಿಗೆ ಅರಿವಾಗಿತ್ತು. ಒಳಗೊಳಗೇ ಸಂಕಟವೂ ಆಯ್ತು.

ಕೆಂಚನಿಗೆ ನಾಲ್ಕು ಮಕ್ಕಳು. ಎಲ್ಲಿ, ಮಲ್ಲಿ, ಕೆಂಚಿ, ತಿಪ್ಪ, ತಿಪ್ಪನೇ ಕಿರಿಯವನು. ಅಂತೆಯೇ ಅವ್ವನ ಕಣ್ಮಣಿ. ಕಿರಿಮಗಳು ಕೆಂಚಿಯೊಬ್ಬಳ ಉಳಿದು ಇನ್ನಿಬ್ಬರು ಹಿರಿಯರಿಗೆ ಮದ್ವೆಯಾಗಿತ್ತು. ಕೈಯಲ್ಲಿ ಬಿಡಿಗಾಸು ಇರಲಿಲ್ಲವಾದ್ದರಿಂದ ಮುಂದಿನ ವರ್ಷಕ್ಕೆ ಅವಳ ಮದುವೆ. ಹುಡುಗನೂ ಗೊತ್ತಾಗಿದ್ದ, ಆದರೆ ಅಷ್ಟರೊಳಗೆ ಬೆಳಗ್ಗೆ ಚೆಂಬು ತೆಗೆದುಕೊಂಡು ಹೋದಾಗ, ಮಧ್ಯಾಹ್ನ ಅಪ್ಪಯ್ಯನಿಗೆ ಬುತ್ತಿ ಒಯ್ದಾಗ ಬಂಡೆ ಅಡಿಯಲ್ಲೊ, ಬಣವೆ ಮರೆಯಲ್ಲೂ ಕೆಂಚಿ, ಅವಳ ಭಾವಿಗಂಡ ಕೂಡಿ ಮಾಡಿದ ಪ್ರೀತಿಯ ಕಾವಿಗೆ ಕೆಂಚಿ ಕಕ್ಕಿಕೊಳ್ಳತೊಡಗಿದ್ದಳು. ಆ ಕ್ಷಣವೇ ಮದುವೆ ಮುಗಿಸಬೇಕಿತ್ತು. ಎಲ್ಲೂ ದುಡ್ಡು ಸಿಗದಿದ್ದಾಗ ಆ ಊರಿನ ಲಿಂಗಾಯತರ ರಾಮಣ್ಣನ ಸಲಹೆಯಂತೆ, ಸ್ಕೂಲಿಗೆ ಹೋಗುತ್ತಿದ್ದ ತಿಪ್ಪನನ್ನು ಅವರ ಮನೆಯಲ್ಲಿ ಇಟ್ಟು, ದುಡ್ಡು ಇಸಿದುಕೊಂಡು ಬಂದಿದ್ದ ಕೆಂಚ. ತನ್ನ ಕರುಳನ್ನು ಬಗೆದು

ಒಯ್ಯುತ್ತಿರುವರೇನೋ ಎಂಬಂತೆ ಗೋಳಾಡಿದ್ದಳು ಬಸ್ವಿ."ನಮ್ ಪಡಿಪಾಟ್ಲು, ನಮ್ ಬವಣೆ ಆ ಮಗಿಗೆ ಬ್ಯಾಡ ಅಂತ ಇಸ್ಕೂಲಿಗಾಕಿದ್ರೆ... ಇವತ್ತು ಅದಕ್ಕೂ ಕಲ್ಲು ಬಿತ್ತು, ನನ್ಮಗನಿಗೂ ಕಂಡೋರ್ಮನೆ ಚಾಕರೀನೆ ಗತಿಯಾಯ್ತಲ್ಲಾ....." ಅಂತ ಬಡಬಡಿಸಿದ್ದಳು. ಹೇಗೋ ಆರುತಿಂಗಳು ಕಾಲ ಹಾಕುವ ಹೊತ್ತಿಗೆ ಸಾಕುಸಾಕಾಯ್ತು, ಅಳುತ್ತ ಕರೆಯುತ್ತ, ಉಪವಾಸ ವನವಾಸ ಮಾಡಿ ನೆಲ ಕಚ್ಚಿ ಮಲಗಿಬಿಟ್ಟಳು ಆಕೆ. ಮೊಮ್ಮಕ್ಕಳನ್ನ ಕಂಡಿದ್ದರೂ ಇನ್ನೂ ಗಟ್ಟಿಮುಟ್ಟಾಗಿ, ಬಿರುಸಾಗಿದ್ದ ಬಸ್ವಿ, ನಾಲ್ಕಾಳು ಕೆಲಸವನ್ನು ಒಬ್ಬಳೇ ಮಾಡಿ ಬಿಸಾಕುವಂತಹ ಹೆಣ್ಣು. ಆಕೆ ಮೇಲೇಳದ ಹಾಗೆ ಮಲಗಿದಾಗ ಕೆಂಚ ನಿಜಕ್ಕೂ ಹೆದರಿದ. ಕೆಂಚನಿಗೆ ಅವಳೆಂದರೆ ಒಂಥರ ಭಯ, ಸಿಟ್ಟು, ಒಂಥರ ಪ್ರೀತಿ ಎಲ್ಲವೂ ಇತ್ತು. ಅವಳ ಜೊತೆಯಿಲ್ಲದೆ ಅವನಿಂದ ಏನೊಂದು ಕೆಲಸವೂ ಸಾಧ್ಯವೇ ಇರಲಿಲ್ಲ. ಇದು ಅವನಿಗೂ ತಿಳಿದಿತ್ತು. ಆದ್ದರಿಂದ ಆಕೇನ ಹೆಚ್ಚು ತಡವುತ್ತಿರಲಿಲ್ಲ. ಆದರೀಗ ಪೂರ್ತಿ ಹೆದರಿದ. ಎದ್ದೆನೋ ಬಿದ್ದೆನೋ ಅಂತ ತನ್ನ ಹಿರಿಮಗಳು ರತ್ನಿಯ ಊರಿಗೆ ಓಡಿದ. ಅಳಿಯ ವಿರೇಶಿ ಮುನ್ಸಿಪಾಲಿಟಿ ಕ್ಲೀನರೂ. ಕೆಲಸ ಸಿಕ್ಕು ಎರಡು ವರ್ಷಗಳಾಗಿದ್ದವು. ಆ ಮೊದಲು ಈರೇಸಿ ಆಗಿದ್ದೋನು ಕೆಲಸ ಸಿಕ್ಕನಂತರ ವಿರೇಶಿ ಆಗಿದ್ದ. ಮಗಳು ಅಳಿಯನ ಎದುರಿಗೆ ತನ್ನ ಕಷ್ಟ ಹೇಳಿಕೊಂಡ ಕೆಂಚ "ಏನನ ಮಾಡ್ರಪ್ಪ..... ಬಸ್ವಿ ನೆಲ ಹಿಡ್ದು ಮಲ್ಗದ್ರೆ ನನ್ ಕೈಕಾಲು ಬಿದ್ದೋದಂಗೆಯ....." ಅಂದ. "ಸುಮ್ಕೆ ನಾನೇಳಂಗೆ ಮಾಡ್ಮಾವ. ಎಲ್ಲಾನ ಒಂದೈನೂರು ಜೋಡಿಸ್ಕೊಂಡು ಹೋಗಿ ಮಗನ್ನ ಕರ್ಕಂಡ್ಬಾ, ಯಂಗೂ ಆರ್ತಿಂಗ್ಳು ಆಗೋಗೈತೆ. ಇನ್ನಾರ್ತಿಂಗ್ಳಿಗೆ ಐನೂರು ಸರಿವೋಗ್ತೈತೆ....." ಅಂತ ಸಲಹೆ ಕೊಟ್ಟ ವಿರೇಶಿ, "ಅಯ್ಯೋ ನನ್ತಾವೆಲ್ಲದೋ ವಿರೇಸಿ ಆಟೊಂದುಡ್ದು... ನಾನೆಲ್ಲಿಂದ ವೊಂದ್ಸಾನೇಳು.....?" ಕೆಂಚ ಗೋಳಾಡಿ, ಕಾಡಿಬೇಡಿದಾಗ ವಿರೇಶಿ ಒಂದಿನ ತಡೆದು ಮಾವನ ಕೈಗೆ ಐನೂರು ಕೊಟ್ಟು ಹೇಳಿದ, "ನೋಡ್ಮಾವ ಯೇನೋ ಸ್ನೇಹಿತ ಅಂತ ಹುಸೇನಣ್ಣ ಮೂರ್ತಿಂಗ್ಳು ಗಡುವು ಯೇಳಿ ಬಡ್ಡಿಯಿಲ್ದಂಗೆ ದುಡ್ದು ಕೊಟ್ಟವ್ನೆ....... ಆಟ್ರೋಳ್ಗೆ ನೀನೇನ ದುಡ್ದ ವೊಂದಿಸ್ಲಿಲ್ಲಾಂದ್ರೆನೂರಕ್ಕೆ ಹತ್ತರಂಗೆ ಬಡ್ಡಿಯಾಗೈತೆ ನೋಡ್ಮತ್ತೆ....... "ಇಲ್ಲಪ್ಪ ಆಟೋತ್ತಿಗೆ ಯಂಗಾನ ಮಾಡಿ ನಾನೆಲ್ಲ ವೊಂದುಸ್ತೀನಿ....." ಅಂತ ಹೇಳಿ ಊರಕಡೆಗೆ ಓಟಕಿತ್ತಿದ್ದ ಕೆಂಚ. ಅವನಿಗೆ ಕೊನೆಗೂ ತಿಳೀಲಿಲ್ಲ ಐನೂರು ವಿರೇಶಿಯ ಅಣ್ಣ ಮಾರಪ್ಪ ಕೊಟ್ಟಿದ್ದು ಅಂತ. ತನ್ನದು ಅಂತ ಹೇಳಿದರೆ ದುಡ್ಡು ವಾಪಸ್ಸು ಬರುತ್ತೋ ಇಲ್ಲವೋ ಎಂದು ಮಾರಪ್ಪನೆ ವಿರೇಶಿ ಕೈಲಿ ಹಾಗೇ ಹೇಳಿಸಿದ್ದ. ಅದಕ್ಕೆ ರತ್ನಿಯೂ ಸಮ್ಮತಿಸಿದ್ದಳು.

ಕೆಂಚ ತಿಪ್ಪನ್ನ ಕರೆದುಕೊಂಡು ಬಂದ ದಿನ ನೋಡಬೇಕಿತ್ತು ತಾಯಿ ಮಗನ ಖುಷಿ, ಆನಂದವನ್ನ. ಅವ್ವಾ....." ಅಂತ ಓಡಿಬಂದ ಮಗನನ್ನ "ತಿಪ್ಪಾ ಬಂದ್ಯಾ ಸಾಮಿ...." ಎಂದು ಎದೆಗೆ

ಅವಚಿಕೊಂಡು, ಮುಖದ ತುಂಬಾ ಮುತ್ತು ಸುರಿಸಿದ್ದಳು ಬಸ್ವಿ, ಅವಳ ಅಪ್ಪುಗೆಯಲ್ಲಿ ಕರಗಿ, ಅವಳೆದೆಯಲ್ಲಿ ಮುಖವುದುಗಿಸಿದ್ದ ತಿಪ್ಗ, ಹಿಂದಿನ ನೆನಪಿನಲ್ಲಿ ಎಲ್ಲೋ ತೇಲಿಹೋಗಿದ್ದ ಕೆಂಚನನ್ನು ಶಿವಣ್ಣನ ದನಿ ಎಚ್ಚರಿಸಿತು. "ಹೋಗಯ್ಯ ನೀನೆದ್ದು ಹೋಗಿ ಮಲ್ಕೊಹೋಗು...... ಇಲ್ಲಿ ಕುಂತ್ಕಂಡು ಏನ್ಮಾಡ್ತಿದ್ದಿ.......? ನಾನು ಮಧ್ಯಾಹ್ನವೇ ನಿನಗೆ ಹೇಳಿದ್ದೀನಿ ಈಗ ನನ್ನತ್ರ ದುಡ್ಡಿಲ್ಲ ಅಂತ....." "ಅಂಗಂದ್ರೆಂಗಣ್ಣಾ........? ಮೋಗ್ಲಿ ಐನೂರಿಲ್ಲಿ ದ್ರೋಟಿವೋತು ಒಂದಿನ್ನೂರಾನ ಕೊಡು....." ತಲೆಕೆರೆಯುತ್ತಾ ಕೇಳಿದ ಕೆಂಚ."ಏನೂ......? ಮಾತ್ಮಾತಿಗೂ ದುಡ್ಡು ದುಡ್ಡು ಅಂತೀರಲ್ಲ ನಾನೇನಿಲ್ಲಿ ದುಡ್ಡಿನ್ಮರಗಿರ ಹಾಕಿದ್ದೀನಿ ಅಂದ್ಕಂಡಿದ್ದಿರೇನೊ.....?" ಕೆರಳಿದ ಶಿವಣ್ಣ."ಅಂಗಲ್ಲಣ್ಣಾ......" ಅಂದ ಕೆಂಚನನ್ನು ಅರ್ಧಕ್ಕೆ ತಡೆದು "ನೋಡು ಕೆಂಚ ಹಂಗೂ ಇಲ್ಲ ಯಂಗೂ ಇಲ್ಲ. ಈಗ ಇಲ್ಲಾಂದ್ರೆ ಇಲ್ಲ ಅಷ್ಟೆ. ಆ ಹುಡುಗನ್ನ ಕರ್ಕಂಡು ಬಂದ ದಿನವೇ ಒಂದು ಸಾವಿರ ಇಸ್ಕಂಡೋದ್ರಿ ನೀವು. ಮತ್ತೆ ಆಫೀಸಿನತ್ರ ಒಂದಿನ ಬಂದು ಮುನ್ನೂರು ಇಸ್ಕಂಡಿದ್ದೀಯ..... ಮತ್ತೆ ಕೊಡು ಅಂದ್ರೆ ಹೆಂಗೆ.....? ಇನ್ನೇನಿದ್ರೂ ಈ ವರ್ಷದ ಕೊನೆಗೆ ಅಲ್ಲೀವರ್ಗೂ ಏನೂ ಇಲ್ಲ......" ಅಷ್ಟೇಳಿ ಶಿವಣ್ಣ ತನ್ನ ಕೋಣೆಯತ್ತ ಹೊರಟ, ಯಾಕೋ ತಾನು ಬಂದ ಕೆಲಸ ಎಡವಟ್ಟಾಗಿ ಕಾಣಿಸ್ತು ಕೆಂಚನಿಗೆ "ಯಂತಾ ಕೆಲ್ಸ ಆತಲ್ಲ......ಆ ವುಡ್ಗನ್ನಾರ ಊರಿಗೆ ಕರಂಡೋಗ್ಬಹುದಿತ್ತು......" ಕೆಂಚ ಒಬ್ಬನೆ ಒದ್ದಾಡಿಕೊಂಡ. ಅಡುಗೆ ಮನೆಯಲ್ಲಿ ನಿದ್ದೆ ಮೆತ್ತಿದಂತಿದ್ದ ಕಣ್ಣುಗಳ ರೆಪ್ಪೆಯನ್ನು ತೆರೆಯಲಾರದೆ ತೆರೆಯುತ್ತ ಕಸಗುಡಿಸುತ್ತಿದ್ದ ತಿಪ್ಗನನ್ನ ನೋಡಿದ. ಹುಡುಗ ಬಹಳ ಸೊರಗಿದ್ದ. ಕಣ್ಣು, ಗಲ್ಲ ಎಲ್ಲಾ ಒಳಕ್ಕೊಗಿ, ಗುಳಿ ಬಿದ್ದಿದ್ದವು. ಹೇಗೋ ಆಡಿಕೊಂಡು ಮಾಡಿಕೊಂಡು ಶಾಲೆಗೆ ಹೋಗುತ್ತಿದ್ದ ಅವನು. ರಾಮಣ್ಣನ ಮನೇಲಿ ಬಿಡೋಕ್ಮುಂಚೆ, ಬಿಡಿಸಿದ್ದೆ ಬಂತು ಆಮೇಲೆ ಅತ್ತ ಕಡೆ ತಲೆಹಾಕಲಿಲ್ಲ. ಅವನು ಆನಂತರ ಹಳ್ಳಿಯಲ್ಲಿ ಇದ್ದಿದ್ದಾದರೂ ಕೇವಲ ಮೂರು ತಿಂಗಳು ಅಷ್ಟೆ. ಕೆಂಚನಿಗೆ ಬಸ್ವಿಯ ಮಾತುಗಳು ನೆನಪಾದವು. "ನನ್ ಮಗಿನ ಮತ್ತೆ ದೂರ ಮಾಡ್ಬಿಟ್ಯಲ್ಲಾ.....? ನಿನಗೆಂಗೆ ಅರಿವಾದೀತೇಳು ನನ್ ವಟ್ಟೆ ಸಂಕ್ಟಾ..... ನೀನೇನ್ ವತ್ಕಂಡನಲ್ಲ;ಹಡ್ದನಲ್ಲ..." ಎಂದು ಮಗನ ನೆನಪು ಬಂದಾಗಲೆಲ್ಲ ಗೋಳಾಡುತ್ತಿದ್ದಳಾಕೆ. ಆದರೆ ಇದ್ದ ಅಲ್ಪಸ್ವಲ್ಪ ಭೂಮಿಯ ಬಗೆಗಿದ್ದ ಮಮಕಾರ, ಅದಕ್ಕೆ ಬಿತ್ತುವ ಬೀಜ, ಬೆಳೆಯುವುದಕ್ಕೆ ಗೊಬ್ಬರಕ್ಕೆ ದುಡ್ಡಾಗುವುದಲ್ಲ ಎಂಬ ಆಸೆ ಅವನನ್ನು ನಿಷ್ಠೂರನನ್ನಾಗಿ ಮಾಡಿದ್ದವು.

ರಾಮಣ್ಣನ ಮನೆಯಿಂದ ಬಂದಮೇಲೆ ಅವ್ವನ ಆರೈಕೆಯಲ್ಲಿ ತಿಪ್ಗ ಬಲು ಕಳೆಕಳೆಯಾಗಿದ್ದ. ಆಕೆ ಹಟ್ಟಿಯಲ್ಲಿ ಸಾಕಿದ್ದ ಕೋಳಿಗಳನ್ನು ವಾರಕ್ಕೊಂದರಂತೆ ತಿಪ್ಗನಿಗಾಗಿ ಕೊಯ್ದು, ಬಿಸಿಯಾದ ಮುದ್ದೆ ಇಕ್ಕಿದರೆ ಸರಿಯಾಗಿ ಹೊಡೆಯುತ್ತಿದ್ದ ಅವನು. ಬಸ್ವಿಯಾದರೂ ಮಗನಿಗೆ ಬರಿಯ ಉಣ್ಣಿಸುತ್ತ

ಸುಮ್ಮನಿರಲಿಲ್ಲ. ರಾಮಣ್ಣ ಮನೆಯಿಂದ ಬಂದೊಡನೆ ಆ ಊರಿನ ಸ್ಕೂಲಿನ ಮೇಷ್ಟರ ಬಳಿಗೆ ಕರೆದೊಯ್ದಿದ್ದಳು. ಆದರೆ ಈ ವರ್ಷ ಮುಗಿಯಲಿ ಎಂದು ಹೇಳಿದ್ದರವರು. ಅಪ್ಪ ಅವ್ವನ ಜೊತೆಯಲ್ಲಿ ಉಂಡಾಡಿಕೊಂಡು ಹೇಗೋ ಮಜವಾಗಿದ್ದ ತಿಪ್ಪ ಅವನ ಅಕ್ಕ ರತ್ನಿ ಊರಿನಿಂದ ಬಂದು ಅಪ್ಪನನ್ನು ಜೊತೆಯಲ್ಲಿ ಊರಿಗೆ ಕರೆದೊಯ್ಯುವ ತನಕ. ಅಲ್ಲಿಂದ ವಾಪಸ್ಸು ಬಂದಾಗ ಅವನು ಸುಮ್ಮನೆ ಬರಲಿಲ್ಲ, ಬದಲಾಗಿದ್ದ. ಹೆಂಗೋ ಇದ್ದ ಚೂರುಪಾರು ಹೊಲದಲ್ಲಿ ಗಂಡಹೆಂಡತಿ, ಮಗನಿಗೆ ಎರಡು ಹೊತ್ತಿನ ಊಟಕ್ಕೆ ಆಗುವಷ್ಟು ಕಾಳುಕಡ್ಡಿ ಬೆಳೆದುಕೊಂಡು ತನ್ನ ಪಾಡಿಗೆ ತಾನು ಕಾಲ ಹಾಕುತ್ತಿದ್ದ. ಆದರೆ ವಿರೇಶಿ, ಅವನ ಅಣ್ಣ ಮಾರಣ್ಣ ಇಬ್ಬರು ಸೇರಿ ಕೆಂಚನ ತಲೆಯನ್ನು ಕೆಡಿಸಿಟ್ಟಿದ್ದರು. ಮಾರಣ್ಣನ ಆಫೀಸರ್ ಶಿವಣ್ಣ ಕೆಂಚನಿಗೆ ದೂರದ ಸಂಬಂಧಿ. ಅವರ ಮನೆಯಲ್ಲಿ ಕೆಲಸಕ್ಕಾಗಿ ಒಬ್ಬ ಹುಡುಗ ಬೇಕಾಗಿದ್ದು, ಮಾರಣ್ಣನ ಕೈಲಿ ಹೇಳಿದ್ದರು. ನಮ್ಮ ಪೈಕಿನ ಯಾವುದಾದರೂ ಹುಡುಗ ಇದ್ದರೆ ನೋಡು" ಎಂದು. ಮಾರಣ್ಣ ಆ ಮಾತನ್ನ ವಿರೇಶಿ, ರತ್ನಿ ಮುಂದೆ ಹೇಳಿದಾಗ ರತ್ನಿಗೆ ತಕ್ಷಣವೇ ತಿಪ್ಪನ ನೆನಪಾಗಿ "ಸುಮ್ಮ ತಿಂದ್ತಿಂದು ತಿರುಗಾ ಬದ್ಲು, ಅವರ್ಮನೆಯಾಗೆ ಬಿದ್ದಿರ್ಲೇಳು..... ಕೈಯಾಗ್ನಾಕು ಕಾಸರ ಆಗ್ತಾವೆ....." ಅನ್ನುತ್ತ ಹಿಂದೆಯೇ ಊರಿಗೆ ಹೊರಟುಬಂದು ಅಪ್ಪನ್ನ ಜೊತೆಗೆ ಕರೆದೊಯ್ದಿದ್ದಳು. ಅಣ್ಣತಮ್ಮ ಇಬ್ಬರು ಸೇರಿ ಹೇಳಿದ್ದರು ಕೆಂಚನಿಗೆ "ನೋಡು, ಬಂಗಾರ ಬೆಳಿಯಾಂತ ಭೂಮಿ ಐತೆ, ಸುಮ್ನೆ ಯಾಕೆ ಅನ್ಯಾಯ ಮಾಡ್ಕಂತಿಯಾ......? ಶಿವಣ್ಣಗೆ ಬೇಕಾದಂಗೈತೆ, ಹೆಣ್ತಿನೂ ದುಡೀತಾಳೆ, ಇರಾನೊಬ್ಮಗ ಅವ್ರಿಗೆ, ನಿನ್ಮಗ ಅವರ ಮನ್ಯಾಗೆ ಚೂರ್ಪಾರು ಮೇಲಿನ ಕೆಲ್ಸ ಮಾಡ್ಕೊಂಡು ಬಿದ್ದಿದ್ರೆ ಸಾಕು ದುಡ್ಡಿನ ಯೋಚ್ನೇನೇ ಮಾಡ್ಬೇಡಿ ನೀವು. ಅವ್ರೇನೆಂಗೂ ಬ್ಯಾರೆಯಲ್ಲ ನಮ್ಮೋರೆ ಕಳ್ಳುಬಳ್ಳಿ..... ಮಗ ನಮ್ಮನ್ಯಾಗೆ ಇದ್ದಂಗೇ ಇರ್ತಾನೆ. ಬರ ದುಡ್ನ ವೊಲಕ್ಕೊಗ್ಗು ಬೆಳೆ ಬೆಳ್ಕಂಡು ಬಂಗಾರ್ದಂಗಿರ್ಬಹ್ದು, ಕರೆಯಾಗ್ಲು ಮಾವಯ್ಯ ನೀನಾ ಮನೆ ನೋಡ್ಬೇಕು ದಂಗಾಗೋಗ್ತಿ, ಆ ಮನ್ಯಾಗಿರಾಕೆ ನಿನ್ಮಗ ಪುಣ್ಯ ಮಾಡಿರ್ಬೇಕು ನೋಡು ಯೋಚ್ನೆ ಮಾಡು......" ಕೆಂಚ ಅವರುಗಳು ಹೇಳೋದನ್ನ ಕೇಳಿಯೇ ದಂಗಾಗಿದ್ದ. "ನಂದೇನೈತಪ್ಪ ನಾನೀಗ್ಲೆ ಬೇಕಾರೆ ಕಳುಸ್ತಿ, ಆದ್ರೆ ನಮ್ ಬಸ್ವಿನ ವೊಪ್ಸಾದೇ ಬಲು ಕಸ್ಟ....." ಅಂದ. "ನಿನಗ್ಯಾಕ ಯೋಚ್ನೆ ಬಿಡ್ಮಾವ.... ನೀನ್ಸುಮ್ನೆ ಏನೂ ಗೊತ್ತಿಲ್ದಂಗಿರು. ಅಷ್ಟರಮ್ಯಾಲೆ ಅತ್ತೆ ಯಾಕೋಗಿದ್ದೆ ಅಂತೇಳಿದ್ರೆ ವಿರೇಶಿ ದುಡ್ಡಿಗೆ ಹೇಳಿಕಳಿಸಿದ್ದ ಅಂತೇಳು. ಮುಂದಿಂದು ನಮ ಗ್ಬಿಡು....." ವಿರೇಶಿ ಹೇಳ್ತಾಗ ಕೆಂಚ ಅದಕ್ಕೆ ತಲೆಯಾಡಿಸಿದ್ದ.

ಅಂದಹಾಗೆ ಮರುದಿನವೇ ಮಾರಣ್ಣ ಊರಿಂದ ಬಂದಿಳಿದ. ಬಹಳ ವರ್ಷಕ್ಕೆ ಬಂದ ಮಾರಣ್ಣನ ನೋಡಿ ಸಡಗರಪಟ್ಟಳು ಬಸ್ವಿ, ರಾತ್ರಿಗೆ ಕೋಳಿ ಕೊಯ್ದು, ಎಸರಿಟ್ಟು ಮುದ್ದೆ ಮಾಡಿ, ಅವರಿಬ್ಬರನ್ನ

ಊಟಕ್ಕೆಬ್ಬಿಸಿದ್ಲು, ತಿಪ್ಗ ಹೊಟ್ಟೆಯ ತುಂಬ ಬರಿ ತುಂಡು ತಿಂದು ಮಲಗಿದ್ದ ಆಗಲೇ. ಮುದ್ದೆ ಮುರ್ಕಂಡು, ಸಾರಿನಲ್ಲಿ ಹೊರಳಾಡಿಸುತ್ತ ಹೇಳಿದ ಮಾರಣ್ಣ "ವಿರೇಶಿ ಬಹಳ ಬೇಜಾರ್ಮಾಡ್ಕಂಡವನೆ ಕೆಂಚ...... ಯಂಗನ ಮಾಡಿ ಆ ಸಾಬಿ ದುಡ್ಡು ಕೊಡು......""ಅಲ್ಮಾರಣ್ಣ ನೀನೂ ವಿರೇಸಿಯಂಗೇ ಮಾತಾಡ್ತಿಯಲ್ಲ......? ಆಟೊಂದುಡ್ಡು ನಾನು ಎಲ್ಲಿಂದ ವೊಂದುಸ್ಲಿಯೇಳು..... ?" ಬಾಯಿ ಜೋರಾಗೇ ಮಾಡಿದ್ದ ಕೆಂಚ "ಅಲ್ಲಪ್ಪ ಎಲ್ಲಿಂದ ತರ್ಲಿ ಅಂದ್ರೆಂಗ..... ? ಕೊಡಕಾಗಿದ್ಮಾಕೆ ಯಾಕೆ ಇಸ್ಕಂಡೆ..... ? ಇಸ್ಕಂಡ್ಯಾಕೆ ಯಂಗನ ಮಾಡಿ ಕೊಡ್ಬೇಕಪ್ಪ..... ಇಲ್ಲಾಂತಂದ್ರೆ ಯಾರ್ಕೇಳ್ತಾರೆ..... ?" ಕೆಂಚ ಮೂಳೆ ಕಟಕಟ ಕಡಿದ. "ನಾನೇನ್ಮಾಡನ ಮಾರಣ್ಣ..... ಇರಾದೀಟು ಭೂಮಿನ ಯಾರ್ತಾವನ ಅಡವಿಡ್ಬೇಕಟೆಯ....." ಈ ಮಾತು ಕೇಳಿದ್ದೆ ಮಾರಣ್ಣ ಹಲ್ಲಿಯಂಗೆ ಲೊಚುಗುಟ್ಟಿದ. "ಅಯ್ಯ ಇಷ್ಟೊಂದು ಸಣ್ಣಿಷ್ಯಕ್ಕೆ ಎಟೊಂದು ತಲೆಕೆಡ್ಸಿಕೆಂತಿಯಲ್ಲಾ ನೀನೂ......? ನೋಡ್ಕೊಂಚ ನಾನೊಂದ್ಮಾತು ಹೇಳೀನಿ ಕೇಳಿಯಾ......? ನಾನೇಳಾದು ನಿನ್ನ ಬಲಕ್ಕೆಯಾ....... ಮತ್ತೆ ನೀನು ಮನ್ಸು ಸಣ್ಣೆಗ್ಮಾಡ್ಕೆಬಾರ್ದು......." ಈ ಮಾತು ಕೇಳಿದ ತಕ್ಷಣ ಹೇಳಿದ್ದ ಕೆಂಚ "ಅಯ್ಯ ಎಲ್ಲಾದ್ರುಂಟೇನಣ್ಣಾ........? ಅದೇನ್ಯೇಳು...." ಹೇಳುತ್ತಲೇ ಹೆಂಡತಿಯನ್ನು ಕೂಗಿ ಕರೆದ "ಲೇ ಬಸ್ವಿ ಮಾರಣ್ಣನಿಗೆ ಇನ್ನೊಂದಾಕು ತುಂಡಾಕೆ...... ಅಂತ. ತಟ್ಟೆಗೆ ತುಂಡು ಬೀಳುತ್ತಲೇ ಶುರು ಮಾಡಿದ ಮಾರಣ್ಣ "ನಮ್ಮ ಆಫೀಸರ್ರು ಶಿವಣ್ಣ ಗೊತ್ತೆತಲ್ಲ ಕೆಂಚ......? ಅದೇ ನಿಮ್ ಬಸಜ್ಜನ ಮೊಮ್ಮಗ.....""ಅಲೆ ಗೊತ್ತಿಲ್ಲೇನೇಳು ಮಾರಣ್ಣ ನೋಡಿ ಭಾಳ ವರ್ಸಾತು ಅಂದ್ರೆ....." ಅವರಿಬ್ಬರ ಮಾತುಗಳನ್ನ ಆಲಿಸಿ ಬಸ್ವಿ ಕಿವಿನಿಮಿರಿಸಿ ಕೂತಳು. "ಶಿವಣ್ಣನ ಮನ್ಯಾಗೆ ಇರೋರು ಮೂರ್ಜನ, ಗಂಡಯೆಣ್ತಿ, ಮಗ. ಆಯಮ್ಮನೂ ಹೊರಗೆ ದುಡೀತೈತೆ. ಅದ್ಕೆ ಮ್ಯಾಲಿನ್ಕೆಲ್ಸಕ್ಕೆ ಒಬ್ಬ ಹುಡ್ಗ ಬೇಕಂತೆ, ಅವು ನಮ್ಮೆಪೈಕಿನ ಆದ್ರೆ ಚೆನ್ನಾಗಿರ್ತತೆ ನೋಡು ಅಂತ ಶಿವಣ್ಣ ಮೊನ್ನೆ ಆಫೀಸಿನ್ತಾವ ಯೇಳಿದ್ನೇಳು. ನನಿಗೆ ನಿಮ್ಮುಡುಗುನ್ದು ನೆಪ್ಪಾಗಿ ಯೇಳ್ದೆಆವಣ್ಣನಿಗೆ, "ದುಡ್ಡಿಗೇನು ಯೋಚ್ನೆ ಮಾಡ್ಬೇಡ್ರಿ....." ಅಂದು "ನಿನೋಗಿ ಹುಡ್ಗನ್ನ ಕರ್ಕಂಡ್ಬಾ ಅಂದ ಶಿವಣ್ಣ."ನಿನ್ಗೂ ಇಲ್ಲೋಡಿದ್ರೆ ದುಡ್ಡಿನ ತೊಂದ್ರೆ ಇದ್ದಂಗಿತ್ತು. ಅದ್ಕೆ ನೋಡು ಹೆಂಗ್ಮಾಡ್ತಿ....." ಮಾರಣ್ಣ ಮಾತು ನಿಲ್ಲಿಸಿದ್ದೆ ತಡ ಬಸ್ವಿ ದಡಕ್ಕನೆಎದ್ದು ಬಂದು "ಅಯ್ಯೋ ಅದೆಲ್ಲೆದಚ್ಚಿದಿ ಎಳಾನಮ್ಮಪ್ಪ..... ಇರಾದೊಂದು ಕೂಸಿನಮ್ಮೆಲೆ ಅದೇನ್ಕಣ್ಣು ನಿಮ್ದೂ.....? ಬ್ಯಾರೇನರ ಇದ್ರೆಯೇಳು ಇಲ್ಲಂದ್ರೆ ಸುಮ್ಕಿರು....." ಅಂದು ಕೈತೊಳೆದಿದ್ದ ತಟ್ಟೆ ಎತ್ತಿಕೊಂಡು ಹೊರಗೋದಳು. ಗಂಡಸರಿಬ್ರು ಸ್ವಲ್ಪ ಹೊತ್ತು ಮೌನವಾಗಿ ಕುಳಿತರು. "ಮನ್ಸಿಗೇನು ತಿಳ್ಕಬ್ಯಾಡ ಮಾರಣ್ಣ...." ಅಂದ ಕೆಂಚ. ಮಾರಣ್ಣ ಟವೆಲ್ ಕೊಡವಿ ಏಳುತ್ತ "ಏನೋ ನಿಮ್ಮ ಒಳ್ಳೇದಕ್ಕಂತ ಹೇಳ್ದೆ ನೋಡಪ್ಪ.... ನಮ್ಗೇನೋ ನಮ್ ಕಳ್ಳುಬಳ್ಳಿ ಉದ್ಧಾರಾಗಿ, ಒಂದು ಮಟ್ಟಕ್ಕೆ ಬರ್ಲಿ ಅಂಬ ಆಸೆ........ ನಿಮ್ಮಿಷ್ಟ ಬಂದಂಗ್ಮಾಡ್ರಿ, ಶಿವಣ್ಣನಿಗೇನ್ ಕೆಂಚ

ಬೇಕಾದಂಗೈತೆ. ನಿನ್ಮಗ ಇಲ್ದಿದ್ರೆ ಬ್ಯಾರೆ ಯಾರನ ಬರ್ತಾರೆ...." ಅಂತ ಹೊರಟು "ವಿರೇಶಿನ ಕಳುಸ್ತಿ ನಾಳೆ ನೋಡ್ರಿ ಎನ್ಮಾಡ್ತೀರಿ...." ಎಂದು ಬಸ್ಸತ್ತಿದ್ದ. ಕೆಂಚ 'ಇವತ್ತು ಇವ್ಳಿಗೆ ಸರ್ಯಾಗಿ ರಿಪೇರಿ ಮಾಡೇಬಿಡ್ತೀನಿ..... ಅಂದುಕೊಳ್ಳುತ್ತ ಮನೆ ಸೇರಿದ. ಆದರೆ ಬಸ್ವಿನ ನೋಡಿದ್ಮೇಲೆ ಮಾತೂ ಹೊರಗೆ ಬರಲಿಲ್ಲ. ಬಸ್ವಿ ಮುಖ ಊದಿತ್ತು. ಮಾರಣ್ಣನ ಮಾತು ಕೇಳಿ ಅವಳ ಹೊಟ್ಟೆಯಲ್ಲಿ ಬೆಂಕಿ ಬಿದ್ದಂಗಾಗಿತ್ತು. ಮಗನ್ನ ಗಟ್ಟಿಗೆ ತಬ್ಬಿಕೊಂಡು, ಸೆರಗಿನಲ್ಲಿ ಮುಚ್ಚಿಕೊಂಡು ಮಲಗಿದ್ದು ರಾತ್ರಿಯೆಲ್ಲಾ. ಕಣ್ಣಾಗಿನ ನೀರು ತಪ್ಪಲೇ ಇಲ್ಲ. ಕೆಂಚನಿಗೋ ಒಳ್ಳೆಯ ಪೀಕಲಾಟ. ಆ ಕಡೆ ಸಾಲಗಾರನ ಕಾಟ. ಒಂದೆಡೆ ಅವ್ವಮಗನ ಯೋಚ್ನೆ, ಇನ್ನೊಂದೆಡೆ ವಿರೇಶಿ, ಮಾರಣ್ಣನ ಮಾತುಗಳು. ಅವ್ನು ಅತ್ತ ಇತ್ತ ಹೊಯ್ದಾಡುತ್ತಿದ್ದಾಗಲೇ ವಿರೇಶಿ, ರತ್ನಿ ಬಂದಿಳಿದರು. ವಿರೇಶಿಯಂತೂ ಕೂಗಾಡುತ್ತಲೇ ಮನೆಯೊಳಗೆ ಕಾಲಿರಿಸಿದ್ದ."ಅಲ್ಮಾವ ದುಡ್ಡಿಸ್ಕಂಡು ಬಂದೋನು ಮತ್ತೆ ಆ ಕಡಿಗೆ ತಿರ್ಗಿ ನೋಡ್ದಂಗಿದ್ರೆ ಏನ್ಗತಿ..... ? ವಟ್ಟೇಗೇನ್ತಿಂತಿ ಮಾವ ನೀನೂ...... ? ಇಸ್ಕಬೇಕಾದ್ರೆ ಇರೋ ತೆವ್ಲು ಕೊಡ್ಬೇಕಾರೆ ಇರಲ್ನೋಡು..... ಅಲ್ಲಾ ಜನ ಸಾಲಸಾಲ ಅಂತ ನಮ್ಮನಿಗೆ ಅಲೆದಾಡಿದ್ರೆ ನನ್ನ ಪ್ರೆಸ್ಟೇಜೇನಾಗ್ತೈತೆ ಯೇಳು..... ? ಏಟನಾಗ್ಲಿ ಮಾನಮರ್ವಾದೆ ಇಲ್ಲದ ಜನ ನೀವೂ....." ಅಂತ ಒಂದೇಸಮನೆ ಒದರಾಡಿದ. ಇತ್ತ ರತ್ನಿ ಅವ್ವನ ಬಳಿ "ಯೇನವ್ವಾ, ಯಿಂಗೆಲ್ಲ ಮಾಡಿದ್ರೆಂಗವ್ವಾ...... ? ಅಲ್ಲಾ, ಆ ಸಾಬಿ ವತಾರೆ ಮನೆಗ್ತಾವ ಬಂದಿದ್ದೆ ಸೈ ನೋಡು, ವಳ್ಳೆ ದನಕ್ಕೆ ಬಡ್ದಂಗೆ ಬಡ್ದೂ..... ಬಾಯಿಗ್ಬಂದಂಗೆ ಬೈದು ನಿಂತು ನಿಲುವಿನ್ಯಾಗೆ ಕರ್ಕಂಡದೇ ಬಂದ್ರು....." ಅಂತ ಸೊರಸೊರ ಅಂದ್ಲು. ಕಣ್ಣು ಮೂಗು ಒರೆಸಿಕೊಂಡು "ಮಾರಣ್ಣ ಬಂದ್ರೆ ಬೈದು ಕಳ್ಸಿದ್ಯಂತೆ.......? ಅಲ್ಲವ್ವ, ಆ ಹುಡ್ಗನ್ನ ಮನ್ಯಾಗಿಟ್ಕಂಡು ಎನ್ಮಾಡ್ತಿಯೇಳವ್ವಾ......? ಇತ್ಲಾಗೆ ಓದುಬರಹ ಕಲ್ತಂಗರ ಅಲ್ಲ. ಆತ್ತಾಗೆ ವೊಲಮನಿ ಕೆಲ್ಸನರ ಕಲ್ತಂಗಲ್ಲ. ಸುಮ್ಕೆ ಪೋಲಿ ತಿರ್ಗಾಕೆ ಬಿಟ್ಟಿದಿಯಲ್ಲಾ....? ಹತ್ವೊರ್ಷದ ಕತ್ತೆ ಅದು..... ಈಗನ ದುಡ್ಕಂಡು ತಿಂಬಾದನ್ನ ಕಲ್ಸು......" ರತ್ನಿ ಮೂಗು ಮುಸುಡಿ ತಿರುವಿದ್ಲು..... "ಹೊಲನ ಅಡವಿಟ್ಟಾಗ ದುಡ್ತಂದು ಒಪ್ಪಿದ್ರೆ ಸರಿ..." ಅಂತ ಗಂಡಹೆಂಡ್ತಿ ಇಬ್ಬರು ನಿಷ್ಠೂರವಾಗಿ ಹೇಳಿ ಹೋದಾಗ ಬಸ್ವಿ ಮೆತ್ತಗಾದ್ಲು, ತಿಪ್ಗ ಶಿವಣ್ಣನ ಮನೆ ಸೇರಿದ್ದ.

"ಏಯ್ ತಿಪ್ಪೇಶಿ..... ಕಿಚನೆಲ್ಲಾ ಕ್ಲೀನ್ಮಾಡ್ದೇನೊ....?" ಕೂಗುತ್ತಲೇ ಬಂದಳು ಇಂದ್ರ."ಹೂಂನಕ್ಕ ಆತು....." ಅಂದು ಹಿತ್ತಲಕಡೆಗೆ ಓಡಿ ಕೈನಲೊಂದು ಅಲ್ಯುಮಿನಿಯಂ ತಟ್ಟೆ, ಲೋಟ ಹಿಡಿದುಕೊಂಡು ಬಂದ ತಿಪ್ಗ, ಇಂದ್ರ ಒಳಗಿನಿಂದ ಒಂದು ಪಾತ್ರೆಯಿಡದು ಬಂದು, ಅದರಲ್ಲಿನ ಅನ್ನಸಾರನ್ನು ಆ ತಟ್ಟೆಗೆ ಸುರುವಿ "ಬೇಗ ತಿಂದು ಮಲ್ಕೊ....." ಎಂದು ಅಡುಗೆ ಮನೆಯ ಬಾಗಿಲಿಕ್ಕಿ ಹೋದಳು. ತಟ್ಟೆ ಹಿಡಿದುಕೊಂಡು ಹಿತ್ತಲಿನತ್ತ ಹೋದ ತಿಪ್ಗ. ಕೆಂಚನಿಗೆ ಬಲು ಸೋಜಿಗವಾಯ್ತು. ಅವನೆಂದೂ ಇಲ್ಲಿ

ಉಳಿದಿರಲಿಲ್ಲ. ಮನೆಯ ಒಳಗಿನದೇನೂ ಅವನಿಗೆ ಗೊತ್ತಿರಲಿಲ್ಲ. “ಅದ್ಯಾಕ್ಮಗ ನಿನಿಗೆ ಬ್ಯಾರೆ ಸಿಲಾವರುದ್ದಟ್ಟೆ.....?” ಎಂದು ತಿಪ್ಪನನ್ನು ಕೇಳಿದ. “ಇಲ್ಲಂಗೆಯಾ.....” ಅಂತ ತಿಪ್ಪ, ತಟ್ಟೆಯಲ್ಲಿನ ಅನ್ನವನ್ನು ಗಬಗಬನೆ ತಿನ್ನುತ್ತಿದ್ದ. ಅವನು ಹಸಿದಿದ್ದ. “ವೋಗೋಗು ಇನ್ನೊಂದ್ಸಲ್ಲ ಅನ್ನಯಿಕ್ಕೆಂಡು ತಿನ್ನೋಗು......” ಅಂದ ಕೆಂಚ. ಇಲ್ಕಣಪ್ಪ ಎಲ್ಲಾ ಖಾಲಿ ಆಗೈತೆ. ನಾನೇ ಯಲ್ಲಾ ಕಿಲೀನ್ಮಾಡ್ದೆ.....” ಅಂದು ಸರಸರ ಎದ್ದು ತಟ್ಟೆಲೋಟ ತೊಳೆದಿಟ್ಟು, ಅಲ್ಲೇ ಮೂಲೆಯಲ್ಲಿ ನಿಲ್ಲಿಸಿದ್ದ ಚಾಪೆ, ಚಾದರ ಹಿಡಿದು “ಬಾರಪ್ಪ ಮಲ್ಗನಾ.....? ಅಂತ ಹೊರಟ ತಿಪ್ಪ. ಬಸವಿ ಮಗನ ನೆನಪಾಗಿ ಕಣ್ಣೀರು ಹಾಕಿದಾಗಲೆಲ್ಲಾ “ಯಾಕಳ್ತಿಯೇ ಬಸ್ವಿ ಸುಮ್ಕೆ..... ನಿನ್ಮಗ್ನೇನು ಬ್ಯಾರೆ ಮನ್ಯಾಗದನೇನು....... ? ನಮ್ ಕಳ್ಳುಬಳ್ಳಿಮನ್ಯಾಗಿರಾದು. ಅಲ್ಲಿ ಇಲ್ಲಿಗಪ್ಪನಂಗೆ ಉಂಡ್ಕಂಡು ತಿನ್ಕಂಡು ಇರ್ತಾನೇಳು....” ಅಂತಿದ್ದ ಕೆಂಚ. ಅವಿಗ್ಯಾಕೋ ಕಣ್ಣುಮುಚ್ಚಲು ಆಗಲೇ ಇಲ್ಲ. ಕಣ್ಣು ಮುಚ್ಚಿದೊಡನೆ ತಟ್ಟೆ ತುಂಬಾ ಸಾರು ಹಾಕಿ, ಬಿಸಿ ಮುದ್ದೆಯಿಟ್ಟು, ಪಕ್ಕದಲ್ಲಿ ಕೂತು ಮಗನಿಗೆ ಉಣ್ಣಿಸುತ್ತಿದ್ದ ಬಸ್ವಿಯ ಚಿತ್ರ ಅವನನ್ನ ಬೆಚ್ಚಿ ಬೀಳಿಸುತ್ತಿತ್ತು. ಪಕ್ಕದಲ್ಲಿ ಮಲಗಿದ್ದ ತಿಪ್ಪ“ಅಪ್ಪಾ, ಹಬ್ಬಕ್ಕೆ ಊರಿಗೆ ಕರ್ಕಂಡೋಗು.... ಅವ್ವನ್ನ ನೋಡಂಗಾಗೈತೆ....” ಅಂದಾಗ ಕೆಂಚನಿಗೆ ಸ್ವರ ಹೊರಡದಾಯ್ತು. ಮತ್ತೆ ತಿಪ್ಪನೇ ಹೇಳಿದ “ಮೊನ್ನಿನಾಗೆ ವಿರೇಶ್ಮಾವ, ಮಾರಪ್ಮಾವ ಬಂದಿದ್ರು. ಆಯಕ್ಕನ್ತಾವ ಏನೆನ ಯೇಳಿ ದುಡ್ಡಿಸ್ಕಂಡೋದ್ರು...’ ಯಾರೋ ಎದೆಗೆ ಗುದ್ದಿದ ಹಾಗಾಯ್ತು ಕೆಂಚನಿಗೆ. “ಅದ್ಕೆ ಸಿವಣ್ಣಂಗೆ ಮಾತಾಡ್ದ ಬಿಡು. ಯಂಗೋ ಇನ್ನೊಂದ್ನಕ್ದಿವ್ಸ ಇರು ಆಮ್ಯಾಕೆ ಊರಿಗೋಗನ ಅತ್ಲಾಗೆ....” ಅಂದು ನಿಟ್ಟುಸಿರಿಟ್ಟ ಕೆಂಚ.

ಮಾರನೆಯ ದಿನ ಪುರುಸೊತ್ತೆ ಇಲ್ಲದಷ್ಟು ಕೆಲಸ ಅವರಿಗೆ ಒಂದ್ಯೆವತ್ತು ಜನ ಬಂದಿದ್ದರು ಊಟಕ್ಕೆ.ತಿಪ್ಪ ಹೊರಗೆ ತಟ್ಟೆಗಳನ್ನ ತೊಳೆಯುತ್ತಿದ್ದ. ಕೆಂಚ ಎಲ್ಲರೂ ಉಂಡುಬಿಟ್ಟ ತಟ್ಟೆಗಳನ್ನು ಎತ್ತಿಕೊಂಡು ಹೋಗಿ ಮಗನಿಗೆ ಕೊಡುತ್ತಿದ್ದ. ಎಲ್ಲಾ ಮಾಂಸದಡುಗೆ, ಆದರೆ ಯಾರೂ ಸರಿಯಾಗಿ ತಿನ್ನದೆ ಎಲ್ಲಾ ಹಾಗೆಯೇ ಬಿಟ್ಟು ಕೈ ತೊಳೆದಿದ್ದರು. “ಬಲೇ ಅನ್ಯಾಯದ ಜನ ಕಣ್ಲೇತಿಪ್ಪ ಈ ಪ್ಯಾಟಿ ಜನ, ಅಲ್ಲಾ ಬರೇ ಇದ್ರೆ ಏನ್ಬಂತೇಳು ಸರ್ಯಾಗಿ ಉಣ್ಣಾಕ್ತಿನ್ನಾಕೆ ಬರ್ದಿದ್ಮ್ಯಾಕೆ....” ಅಂದು, ತಿಪ್ಪ ತೊಳೆದಿಟ್ಟಿದ್ದ ತಟ್ಟೆಗಳನ್ನ ಎತ್ತಿಕೊಂಡು ಒಳಹೋದ. ಅಡುಗೆಮನೆಯಲ್ಲಿ ಇಂದ್ರ ಇದ್ದಳೆಂದು ಬಾಗಿಲಲ್ಲಿ ನಿಂತ. ಅವಳು ಇವನನ್ನು ನೋಡಲಿಲ್ಲ. ಅಲ್ಲಿಯೇ ಕಟ್ಟೆಯ ಮೇಲೆ ನಾಲ್ಕು ಎಂಜಲು ತಟ್ಟೆಗಳಿದ್ದವು. ಆ ತಟ್ಟೆಯಲ್ಲಿ ಹಾಕಿದ್ದ ಮಾಂಸದ ತುಂಡುಗಳೆಲ್ಲಾ ಹಾಗೆಯೇ ಇದ್ದು, ಅದರಲ್ಲಿಯೇ ಕೈ ತೊಳೆದಿದ್ದರು ಯಾರೋ ಪುಣ್ಯಾತ್ಮರು. ಇಂದಿರ ಆ ತಟ್ಟೆಗಳಲ್ಲಿನ ಎಂಜಲು ನೀರನ್ನು ಬಸಿದು, ತುಂಡುಗಳನ್ನೆಲ್ಲ ಮೇಲಿಟ್ಟಿದ್ದ ಹಳೆಯದಾದ ಒಂದು ಅಲ್ಯುಮಿನಿಯಂ ಪಾತ್ರೆಯೊಳಗೆ ಹಾಕಿಟ್ಟಳು. ಎಲ್ಲವನ್ನು ನೋಡಿದ ಕೆಂಚ“ಈ ಮನೆಯ

ನಾಯಿಗಳೇ ಪುಣ್ಯದವು...." ಎಂದುಕೊಳ್ಳುತ್ತ ಮೆಲ್ಲನೆ ಒಳಗೋಗಿ ತಟ್ಟೆಗಳನ್ನಿಟ್ಟು ಹೊರಬಂದ. ಬಂದವರ ಊಟವಲ್ಲ ಮುಗಿದ ಬಳಿಕ ಕೆಂಚನಿಗೆ ತಟ್ಟೆ ಬಂತು. ತಿಪ್ಪ ಇನ್ನೂ ಹೊರಗೆ ಏನೋ ಮಾಡುತ್ತಲಿದ್ದ. ಕೆಂಚ ತಾನುಂಡ ತಟ್ಟೆಯನ್ನು ಎತ್ತಿಕೊಂಡು ಹೋಗುವ ಹೊತ್ತಿಗೆ ತಿಪ್ಪ ಕೆಲಸವನ್ನೆಲ್ಲ ಮುಗಿಸಿ, ಹಿತ್ತಲಲ್ಲಿದ್ದ ತನ್ನ ತಟ್ಟೆ, ಲೋಟ ಹಿಡುದು ಹೊರಟಿದ್ದ. ಕೆಂಚ ತಟ್ಟೆಯನ್ನು ತೊಳೆದು, ಅದನ್ನ ಅಡುಗೆಯ ಮನೆಯಲ್ಲಿಟ್ಟು ಹೊರಗೆ ಉಣ್ಣುತ್ತಿದ್ದ ತಿಪ್ಪನ ಪಕ್ಕಕ್ಕೆ ಹೋಗಿ ಕೂತ. ತಿಪ್ಪನ ತಟ್ಟೆಯಲ್ಲಿ ಅನ್ನ, ಸಾರು ಒಂದ್ನಾಲ್ಕು ಎಲುಬಿನಂತ ತುಂಡುಗಳಿದ್ದವು. "ಬೆಳಗ್ನಿಂದ ಮುಕ್ಕಿ ಮುರಿಯಂಗೆ ದುಡುದ್ರೂ ವಟ್ಟುಂಬಾ ಉಣ್ಣಾಕ್ಕೀಕಾಕೆ ಯಂಗಾಡುತಲ್ಲ ಈ ಯಂಗ್ಸೂ..... ? ಯೇಟೊಂದು ಜನ ಪುಕ್ಸಟ್ಟೇರು ಬಂದು ತಿಂದು ಬಿಸಾಕಿ ವೋದ್ರೆ ಖುಸಿ ಇವ್ರಿಗೆ.... ದುಡಿಯ ಮಕ್ಳಿಗೆ ವಟ್ಟೆ ತುಂಬ ಇಕ್ಕಾಕ್ಕೇನ್ ಧಾಡಿಯಿಕೀಗೆ......?" ಸಂಕಟದಿಂದ ಒಬ್ಬನೆ ಮಗನ ಮುಂದೆ ಒದರಾಡಿದ ಕೆಂಚ. ಅವನ ಹೊಟ್ಟೆಯಲ್ಲಿ ಉರಿ ಎದ್ದಿತ್ತು. ಆ ಹೊತ್ತಿಗೆ ಒಳಗಿಂದ ಇಂದ್ರ ತಿಪ್ಪನ್ನ ಕೂಗಿದಳು. "ಬಂದೇ....." ಎನ್ನುತ್ತ ಉಣ್ಣುವುದನ್ನು ನಿಲ್ಲಿಸಿ ಓಡಿದ ತಿಪ್ಪ, ಬರುವಾಗ ಅವನ ಕೈಯಲ್ಲಿ ಒಂದು ಸಣ್ಣ ಹಳೆಯ ಅಲ್ಯುಮಿನಿಯಂ ಪಾತ್ರೆಯಿತ್ತು. ಅದರ ತುಂಬಾ ತುಂಡುಗಳಿದ್ದು, ಅವುಗಳನ್ನು ತನ್ನ ತಟ್ಟೆಗೆ ಸುರುವಿಕೊಂಡ ತಿಪ್ಪ. ಕೆಂಚ ಕಣ್ಣು ಕೆಕ್ಕರಿಸಿ ನೋಡಿದ. ಇಂದ್ರ ಎಂಜಲು ತಟ್ಟೆಯ ನೀರು ಬಸಿದು, ಅದರಿಂದ ಆಯ್ದು ಇಟ್ಟಿದ್ದ ತುಂಡುಗಳಿದ್ದ ಪಾತ್ರೆಯದು. ಬರಿಯ ಒಗ್ಗರಣೆಯಲ್ಲಿ ಕೋಳಿಯನ್ನ ಉಪ್ಪಾಕಿ ಮೆತ್ತಗೆ ಬೇಯಿಸಿ ಮಗನ ಮುಂದೆ ಇಡುತ್ತಿದ್ದ ಬಸ್ವಿಯ ನೆನಪಾಯ್ತು. ಅವನ ಕರುಳು ಕಿವುಚಿದಂಗಾಯ್ತು, "ಉಣ್ಬೇಡ ಬಿಡಲೇ...." ಅಂತ ತಿಪ್ಪನ ತಟ್ಟೆಯನ್ನು ಕಸಿದುಕೊಂಡ. "ಅಪ್ಪಾ ಕೊಡಪ್ಪ..... ಬಾಳ ವಟ್ಟೆ ಹಸದೈತ ಕೊಡಪ್ಪಾ" ಅಂತ ತಿಪ್ಪಾ ತಟ್ಟೆಗೆ ಕೈಹಾಕುತ್ತಿದ್ದಂತೆ ಅವನಿಗೊಂದು ಎತ್ತಿ ಬಾರಿಸಿದ. ವೋಗಲೇ ಒಂದಿನ ಉಣ್ಣಿದ್ರೇನು ಸಾಯಲ್ಲ ವೋಗು...... ವೋಗಿ ಕೈಚೀಲ ವೊಂದಿಸ್ಕ........" ಅಂದವನೆ ತಟ್ಟೆಯನ್ನು ಸೀದಾ ಶಿವಣ್ಣನ ಮುಂದೆ ಎತ್ತಿಕೊಂಡು ಹೋದ. ಹಾಲ್‌ನಲ್ಲಿ ಎಲ್ಲರೂ ಕೂತು ತಾಂಬೂಲ ಮೆಲ್ಲುತ್ತ ಮಾತಿನಲ್ಲಿ ತೊಡಗಿದ್ದರು. ಅಲ್ಲಿದ್ದ ಇಂದ್ರನ್ನ ನೋಡಿ "ಯೇನವ್ವ ಯಿಂದ್ರವ್ವ ನಿನ್ನ ದೊಡ್ಡ ಗನಸ್ತೆ ಅಂದ್ಕಂಡಿದ್ನಲ್ಲವ್ವಾ..... ನನ್ ಮಗುನ್ನ ನಿನ್ ಮನೆ ಕಾಯೋ ನಾಯಿ ಅಂತ ತಿಳ್ಕೊಂಡೇನವ್ವಾ....?" ಅಂದಾಗ ಅಲ್ಲಿ ಕುಂತಿದ್ದವರೆಲ್ಲ ಒಮ್ಮೆಲೆ ಎಗರಿಬಿದ್ದರು. "ಎಯ್ ಏನೋ ಅದು ಗಲಾಟೆ....? ಏನಾಯ್ತಿಗ ?" ಶಿವಣ್ಣರೇಗಿದ. "ಯೇನಾಗೈತೆ ಅಂತ ನಿನ್ನೆಣ್ತಿನ್ಕೇಳು, ಅಲ್ಲಾ..... ಯಾರೋ ಉಂಡು, ಕೈ ತೊಳ್ಕೊಂಡು ಬಿಟ್ಟಿದ್ದ ತಟ್ಯಾಗಿಂದ ತುಂಡು ಆಯ್ದಿಟ್ಟು, ನನ್ಮಗನಿಗೆ ತಿನ್ನು ಅಂತ ಕೊಟ್ಟಿದಾಳಲ್ಲ.... ವಟ್ಟೆಗೆ ಅನ್ನ ತಿಂಬಾರ್ಮಾಡ ಕೆಲ್ಲನಾಯಿದೂ.....?" ಕೆಂಚನೂ ಆವೇಶಗೊಂಡಿದ್ದ. "ಎಯ್ ನೆಟ್ಟಗೆ ಮಾತಾಡೋ...." ಕೆಂಪಗಾಗಿದ್ಲು ಇಂದ್ರ."ಯೇನ್ ನೆಟ್ಗವ್ವ....?

ನೀನ್ಮಾಡಿರ ಬದ್ಕು ನೆಟ್ಟಗಿದ್ದಿದ್ರೆ ನನ್ಮಾತೂ ನೆಟ್ಟಗಿರಾವು.... ಅಲ್ಲವ್ವ ನನ್ಮಗನ್ಗೆ ನೀನೇನ್ ಬಿಟ್ಟಿ ಕೂಳಾಕ್ತೀಯಾ.....? ಯೇನ್ ವೊದಿದ್ರೇನ್ ಬರುದ್ರೇನ್ ವಳ್ಳೆ ಗುಣ ಇಲ್ಲಿದ್ಮಾಕೆ...." ಅಂದ ಕೆಂಚ. "ಸಾಕ್ಮಚ್ಕೋ ಬಾಯ್ನ್...." ಶಿವಣ್ಣ ಗದರಿದ. "ಅದ್ಯಾಕಪ್ಪ.....? ನಾನೇನು ನಿನ್ನ ಮನ್ಯಾಗೆ ಕಳ್ಳತನ ಮಾಡಿಲ್ಲ ಬಾಯ್ಮುಚ್ಚಾಕೆ. ನನಗೇನು ತಿಂಬಾಕೆ ಗತಿಯಿಲ್ಲ ಅಂತ ನನ್ಮಗುನ್ನ ನಿನ್ ಮನ್ಯಾಗೆ ಬಿಟ್ಟಿದಿನಿ ಅಂದ್ಕಂಡಿಯಾ.......? ಇಲ್ಲ..... ನಿನ್ದುಡ್ಡು, ದೊಡ್ಡಸ್ತಿಕೆ ನೋಡಿ ನನ್ಮಗುನ್ನ ನಿನ್ ಮನ್ಯಾಗೆ ಬಿಟ್ಟೀನಿ ಅಂದ್ಕೊಂಡಿಯಾ.....? ಯೇನೋ ನಮ್ ಜನ, ನಮ್ ಕಳ್ಳುಬಳ್ಳಿ ನಿಮ್ಗೂ ಒಂದು ಆಸರ, ನನ್ ಮಗುನ್ಗೂ ಒಂದು ಆಸರ ಅಂತ ಬಿಟ್ಟೆ. ನೀನಿವತ್ತು ಯೇಟು ದೊಡ್ಮನ್ಸ ಯಾಕೆ ಆಗಿರ್ವಲ್ಲಿ ಯೇಳು...... ನಿಮ್ಮಪ್ಪ, ನಿಮ್ಮ ಸಣ್ಣೊಯ್ಸನಾಗೆ ಗೌಡ್ರ ಮನ್ಯಾಗೆ ಸಗ್ಣಿ ಬಾಚಿ, ಎಂಜಲೆತ್ತಿ ಬದುಕ್ದಾರು. ಮರಿಬಾರ್ದಪ್ಪ ಶಿವಣ್ಣ ಮೂಲ ಮರಿಬಾರ್ದು. ಎನಿದ್ಯೆ ಬುದ್ಧಿ ಕಲ್ತು, ದೊಡ್ಡ ದೊಡ್ಡ ಜನರು ಜತೀಗೆ ಕುಂತೆದ್ರು ಸಣ್ರನ, ಸಣ್ ಬುದ್ದಿ ತನ್ನ ರಕುತದಾಗೆ ಹರೀತೈತೆ ಅಂತ ತೋರ್ಸಿದ್ಲು ನಿನ್ನೆಣ್ತಿ ಇವತ್ತು. ಬರ್ತೀನಪ್ಪ, ನಾನು ನನ್ಮಗನ್ನ ಕರಂಡು ವೋಗ್ತಿನಿ...." ಅಂತ ಹೊರಟ ಕೆಂಚ ಕಂಡು ಹೋಗೋ ಯಾರು ಬೇಡಾಂತರೆ ನಿನಗೆ..... ? ನಿಮ್ಗೆಲ್ಲಾ ಹೊರಗಡೆ ನಿಲ್ಲಿಸಿ, ಎತ್ತಿ ಕೂಳಾಕಿ ದೂರ ಸರೀತಾರಲ್ಲ ಅವ್ರೆ ಸರಿ.......ಅವ್ರೆ ಸರಿ ನಿಮ್ಗ. ಅಲ್ಲಿಗೇ ಲಾಯಕ್ಕು ನೀವೂ..." ಇಂದ್ರ ಬುಸುಗುಟ್ಟಿದಳು. ಕೆಂಚ ನಿಂತು "ಹೌದವ್ವ ನೀನು ಯೇಳಾದು ಸರಿನೇಯ, ಯೇನೋ ನಾಕು ಅಕ್ಷರ ಕಲ್ತೆ, ನಾಲ್ಕುದುಡ್ಡು ಸಂಪಾದಿಸ್ಥೆ ಅಂತ ನೀನೇ ನಮ್ಗೆ ಅನ್ನ ಎತ್ಯಾಕ್ತಿ, ಬ್ಯಾರೆ ತಟ್ಟೆಲೋಟ ಇಟ್ಟಿದಿ...... ಹೊರಗೆ ಉಣ್ಣಾಕೆ ಕುಂದ್ರುಸ್ತಿ..... ಎಂಜಲು ತಿನ್ನಾಕಾಕ್ತಿ ಅಂದ್ಮಾಕೆ ಅನಾದಿ ಕಾಲದಿಂದ ನಡೆಸ್ಕಂಡು ಬಂದಿರಾರ್ದು ಯಾವ ಲೆಕ್ಕಯೇಳು.....? ವರಾಗ್ನಿಲ್ಸಿ ಉಣ್ಣಾಕೆ ಹಾಕಾರೂ, ನಮ್ಮನ್ನ ನೋಡಿ ದೂರ ಸರ್ಕಳಾರೂ ಬ್ಯಾರರವ್ವಾ...... ಅವ್ರೆಲ್ಲ ಬ್ಯಾರೆ; ಆದ್ರೆ ನೀವೂ......? ನೀವು ನಮ್ಮರವ್ವ...... ನಮ್ ಜನ, ನಮ್ ಕಳ್ಳುಬಳ್ಳಿ ಕಣವ್ವ, ನೀವೂ ನಮ್ ಕಳ್ಳುಬಳ್ಳಿ..... ಕಣ್ಣಲ್ಲಿ ತುಂಬಿ ಬಂದ ಕಂಬನಿಯನ್ನ ತೊಡೆದುಕೊಂಡು, ಕೈಚೀಲ ಹಿಡಿದು ನಿಂತಿದ್ದ ತಿಪ್ಪನ ಕೈಯಿಡಿದುಕೊಂಡು ಹೊರಟ ಕೆಂಚ, ಮಗನನ್ನ ನೋಡಿದ ಬಸ್ವಿ ಹೇಗೆ ಖುಷಿಪಡಬಹುದು.....? ಎಷ್ಟು ಸಂಭ್ರಮಪಡಬಹುದು.....? ಎಂಬುದನ್ನು ಕಲ್ಪಿಸಿಕೊಳ್ಳುತ್ತ ತನ್ನೆದೆಯಲ್ಲಿನ ತಳಮಳ, ನೋವು, ತನ್ನ ಹೊಟ್ಟೆಯಲ್ಲಿನ ಸಂಕಟವನ್ನ ಮರೆಯುವುದಕ್ಕೆ ಪ್ರಯತ್ನಿಸಿದ.

# 3. ದೀನ ಬಂಧು ಮದರ್ ತೆರೇಸಾ

- ಡಾ. ಗೀತಾ ಶೆಣೈ

**1948ನೇ ಇಸವಿ ಸೆಪ್ಟೆಂಬರ್ 17ನೇ ತಾರೀಕು**

ಮುಂಜಾನೆಯ ಬೆಳಕಿನ ಕಿರಣಗಳು ಹರಡಿಕೊಳ್ಳಲಾರಂಭಿಸಿವೆ. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿವೆ. ಸುಮಾರು ಹದಿನೇಳು ವರ್ಷ ತನಗೆ ಆಸರೆ ನೀಡಿದ ಕಾನ್ವೆಂಟಿನ ಗೇಟು ತೆರೆದು ತಾಯಿ ತೆರೆಸಾ ಹೊರಬರುತ್ತಿದ್ದಾರೆ. ಅದುವರೆಗೆ ಅವರ ಜೊತೆಗಾತಿಯಾಗಿದ್ದವರೆಲ್ಲರೂ ಅವರನ್ನು ಬೀಳ್ಕೊಡಲು ಬಂದಿದ್ದಾರೆ. ಅವರ ಮುಖದಲ್ಲಿ ದುಃಖ, ಕಣ್ಣಿನಲ್ಲಿ ನೀರು. ತೆರೆಸಾ ತನ್ನ ಸನ್ಯಾಸಿನಿಯ ವೇಷವನ್ನು ಕಳಚಿದ್ದಾರೆ. ನೀಲಿ ಅಂಚಿನ ಬಿಳಿ ಸೀರೆಯುಟ್ಟು ತಲೆಯ ಮೇಲೆ ಸೆರಗು ಹಾಕಿಕೊಂಡು ಅವರೀಗ ಅಪ್ಪಟ ಬಂಗಾಲಿ ಹೆಣ್ಣುಮಗಳಂತೆ ಕಾಣುತ್ತಿದ್ದಾರೆ. ಅವರ ಪಾದಗಳು ಕಲ್ಕತ್ತಾದ ಮೋತಿಜೀಲ್ ಗಲ್ಲಿಯ ಕಡೆಗೆ ಹೆಜ್ಜೆ ಹಾಕುತ್ತಿವೆ.

ತಾಯಿ ತೆರೆಸಾ ಸಹಾಯದ ನಿರೀಕ್ಷೆಯಲ್ಲಿ ಇರುವವರನ್ನು ಹುಡುಕಿ ಹೋಗುತ್ತಿದ್ದಾರೆ. ಅವರ ದಯೆ ತುಂಬಿದ ಕಣ್ಣುಗಳು ಬಡವರಲ್ಲಿ ಕಡುಬಡವರನ್ನು ಅರಸುತ್ತಿವೆ. ದಾರಿಯಲ್ಲಿ ಅವರಿಗೆ ತನ್ನ ಮೈ ಹುಣ್ಣನ್ನು ಕೆರೆದುಕೊಳ್ಳುತ್ತಿರುವ ಬಾಲಕನೊಬ್ಬ ಕಣ್ಣಿಗೆ ಬೀಳುತ್ತಾನೆ. ಅವರು ಅವನನ್ನು ಪ್ರೀತಿಯಿಂದ ಹತ್ತಿರಕ್ಕೆ ಕರೆಯುತ್ತಾರೆ. ಅವನ ಹುಣ್ಣನ್ನು ಚೆನ್ನಾಗಿ ತೊಳೆದು ಔಷಧಿ ಹಚ್ಚುತ್ತಾರೆ. ಹಳೆ ಕಟ್ಟಡವೊಂದರಲ್ಲಿ ಹಸಿವಿನಿಂದ ಕಂಗಾಲಾಗಿ ಬಿದ್ದುಕೊಂಡಿರುವ ಮುದುಕನನ್ನು ನೋಡಿ ಅವನಿಗೆ ತಿನ್ನಲು ನೀಡುತ್ತಾರೆ. ಕ್ಷಯರೋಗದಿಂದ ಬಳಲಿ ಸಾವಿನಂಚನ್ನು ತಲುಪಿದ ಮಹಿಳೆಯೊಬ್ಬಳ ತಲೆಸವರಿ ಅವಳಿಗೆ ಸಾಂತ್ವನದ ಮಾತುಗಳಿಂದ ಸಮಾಧಾನಪಡಿಸುತ್ತಾರೆ. ಈ ದುಃಖಿತರು ತಾನು ನೀಡಿದ ಔಷಧಿ, ಆಹಾರಕ್ಕಿಂತ ತನ್ನ ಸಾಂತ್ವನದ, ಪ್ರೀತಿಯ ಮಾತುಗಳಿಗೆ ಸ್ಪಂದಿಸುತ್ತಿರುವುದು ತೆರೆಸಾ ಗಮನಕ್ಕೆ ಬರುತ್ತದೆ. ಅವರ ಮನಸ್ಸು ದುಃಖತಪ್ತವಾಗಿ ಕಣ್ಣಂಚಿನಲ್ಲಿ ನೀರು ಕಾಣಿಸಿಕೊಳ್ಳುತ್ತದೆ.

'ನಾನು ಅವರ ಹೊಟ್ಟೆ ಹಸಿವನ್ನು ಮಾತ್ರ ಕಂಡೆ. ಅವರಿಗೆ ತಿನ್ನಲು ಅನ್ನ, ಬ್ರೆಡ್ ನೀಡಿದರೆ ಸಾಕೆಂದುಕೊಂಡೆ. ಆದರೆ ಅವರ ಪ್ರೀತಿಯ ಹಸಿವು ಎಷ್ಟು ತೀವ್ರಸ್ವರೂಪದ್ದಾಗಿದೆ ಎಂಬುದನ್ನು ಕಾಣಲೇ ಇಲ್ಲವಲ್ಲ ! ಇನ್ನು ಮುಂದೆ ನಾನು ಜನರ ಸೇವೆಯಲ್ಲಿ ತೊಡಗಿಕೊಂಡಾಗ ಅವರನ್ನು ಪ್ರೀತಿ, ಗೌರವದಿಂದ ಕಾಣುವ ಭಾವನೆಯನ್ನು ಕೂಡ ಸೇರಿಸಬೇಕು' ಎಂದುಅವರು ಮನಸ್ಸಿನಲ್ಲಿಯೇ ನಿಶ್ಚಯಿಸಿಕೊಂಡರು.

ಹೀಗಾಗಿ ಅವರು ಕೊಳೆಗೇರಿಗಳನ್ನೇ ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿದರು. ಕಲ್ಕತ್ತಾ ನಗರದಲ್ಲಿ ಕೊಳೆಗೇರಿಗಳಿಗೆ ಬರಗಾಲವಿಲ್ಲ. ಅಲ್ಲಿ ನೆಲೆಸುವವರಿಗೆ ಯಾವುದೇ ಮೂಲಭೂತ ಸೌಕರ್ಯ ಇರುವುದಿಲ್ಲ. ನೈರ್ಮಲ್ಯವಂತೂ ಇಲ್ಲವೇ ಇಲ್ಲ. ಇಂತಹ ಪರಿಸರದಲ್ಲಿ ಕಾಲ ಕಳೆಯುವವರಿಗೆ ಅನಾರೋಗ್ಯ ಕಾಡದಿರುವುದೇ ? ತೆರೆಸಾ ಭೇಟಿ ನೀಡಿದ ಕೊಳೆಗೇರಿಗಳಲ್ಲಿ ಬಡವರು, ರೋಗಿಗಳು, ಅಂಗವಿಕಲರು ಮತ್ತು ಎಲ್ಲರಿಂದಲೂ ತ್ಯಜಿಸಲ್ಪಟ್ಟವರು ಕಿಕ್ಕಿರಿದು ತುಂಬಿಕೊಂಡಿದ್ದರು. ಅವರ ಕರುಣಾಜನಕ ಸ್ಥಿತಿ ನೋಡಿ ತೆರೆಸಾಗೆ ಸಂತಾಪವಾಯಿತು. ಬಡತನವನ್ನು ಹಣದಿಂದ ನಿವಾರಿಸಬಹುದು. ರೋಗಿಗಳನ್ನು ಚಿಕಿತ್ಸೆಯಿಂದ ಗುಣಪಡಿಸಬಹುದು. ಆದರೆ ಸಮಾಜದಿಂದ ತ್ಯಜಿಸಲ್ಪಟ್ಟವರಿಗೆ ತಾನು ಯಾವ ರೀತಿಯಲ್ಲಿ ನೆರವಾಗಬಹುದು, ಈಗ ತನ್ನಲ್ಲಿ ಜನಬಲವಿಲ್ಲ, ಹಣಬಲವೂ ಇಲ್ಲ. ಈ ಅನುಕೂಲತೆಗಳೆಲ್ಲಾ ಮುಂದೆ ಒದಗಿಬರಬಹುದು. ಆದರೆ ಈಗ ತಾನು ಬೀಜರೂಪದಲ್ಲಿ ಯಾವುದಾದರೂ ಕೆಲಸವನ್ನು ಪ್ರಾರಂಭಿಸುವುದು ಉತ್ತಮವಲ್ಲವೇ ಎಂದು ಅವರಿಗೆ ಕಂಡಿತು. ಅವರು ತಮ್ಮ ಗಮನವನ್ನು ಅನಾಥ ಮಕ್ಕಳ ಕಡೆಗೆ ಹರಿಸಿದರು.

**ಬೀದಿಗಿಳಿದ 'ಅಮ್ಮ' ಬೀದಿ ಮಕ್ಕಳ 'ಶಿಕ್ಷಕಿ'ಯಾದಳು**

ನಗರದ ಬೀದಿಬೀದಿಗಳಲ್ಲಿ ಕೊಳಕು ಬಟ್ಟೆಯುಟ್ಟ ಮಕ್ಕಳು ಮರಳಿನಲ್ಲಿ, ಧೂಳಿನಲ್ಲಿ ಹೊರಳಾಡಿ ಆಟವಾಡಿಕೊಂಡಿರುವುದು ಸಾಮಾನ್ಯ ದೃಶ್ಯ. ಅವರಿಗೆ ಬಿಸಿಲು ಮಳೆಗಳ, ಸಮಯದ ಪರಿವೆ ಇರುವುದಿಲ್ಲ. ಹಗಲು ಆಟವಾಡಿ ರಾತ್ರಿ ಹಸಿದು ಗುಡಿಸಲು ಸೇರುವ ಮಕ್ಕಳು ಇವರು. ತಾಯಿ ತೆರೆಸಾ ಬೀದಿಯಲ್ಲಿ ಆಟವಾಡಿಕೊಂಡಿರುವ ಮಕ್ಕಳನ್ನು ಹತ್ತಿರ ಕರೆದು ಒಟ್ಟು ಸೇರಿಸಿದರು. ಅವರಿಗೆ ಮೊದಲು ಮೈ ತೊಳೆದುಕೊಳ್ಳುವ, ಒಗೆದ ಬಟ್ಟೆ ತೊಡುವ ಸ್ವಚ್ಛತೆಯ ಪಾಠವನ್ನು ಹೇಳಿಕೊಟ್ಟರು. ಬಗೆಬಗೆಯ ಹಾಡುಗಳನ್ನು ಕಲಿಸಿ ಅವರ ಮನರಂಜಿಸಿದರು. ಮೊದಲು ಶಿಕ್ಷಕಿಯಾಗಿ ಇದ್ದವರಲ್ಲವೇ ತಾಯಿ ತೆರೆಸಾ , ಅವರಿಗೆ ಮಕ್ಕಳ ಮನಸ್ಸು ಚೆನ್ನಾಗಿ ಗೊತ್ತು. ಮಕ್ಕಳು ಯಾವುದನ್ನು ಇಷ್ಟಪಡುತ್ತಾರೆ ಎನ್ನುವುದೂ ಗೊತ್ತು.

ಇದೇ ರೀತಿ ಸ್ವಲ್ಪ ದಿನ ಕಳೆದವು. ಬೀದಿ ಮಕ್ಕಳಿಗೆ ತಾಯಿ ತೆರೆಸಾ ಚೆನ್ನಾಗಿ ಪರಿಚಯವಾದರು. ಈ 'ಅಮ್ಮ' ತೋರಿಸುವ ಪ್ರೀತಿ ಮತ್ತು ಕಾಳಜಿ ಅವರಿಗೆ ಇಷ್ಟವಾಗತೊಡಗಿತು. ಈಗ ತೆರೆಸಾರ ಗುಂಪಿಗೆ ಸಾಕಷ್ಟು ಮಕ್ಕಳು ಸೇರಿಕೊಂಡರು. ಇವರಿಗೆ ಓದು ಬರಹ ಕಲಿಸುವುದೆಂದು ತೆರೆಸಾ ನಿಶ್ಚಯಿಸಿದರು.

ಆದರೆ ಅಲ್ಲಿ ತರಗತಿ ಕೋಣೆಗಳು ಇರಲಿಲ್ಲ. ಕಪ್ಪು ಹಲಗೆಯಾಗಲೀ, ಸೀಮೆಸುಣ್ಣವಾಗಲೀ ಇಲ್ಲ. ಆದರೆ ಕಲಿಯುವ ಉಮೇದು ಮಕ್ಕಳಲ್ಲಿ ಇದೆ. ಅವರಿಗೆ ಕಲಿಸುವ ಉತ್ಸಾಹ ಆ ತಾಯಿಯಲ್ಲಿ ಇದೆ. ಈ ಅಮ್ಮ ಮತ್ತು ಮಕ್ಕಳು ಸೇರಿ ದೊಡ್ಡ ಮರವೊಂದರ ಬುಡದಲ್ಲಿರುವ ಜಾಗವನ್ನು ಆರಿಸಿಕೊಂಡರು. ನೆಲದ ಮಣ್ಣನ್ನು ಸವರಿ ಸ್ವಚ್ಛಗೊಳಿಸಿದರು. ಹುಡುಗನೊಬ್ಬ ಮರದ ಒಣಗಿದ ಗೆಲ್ಲನ್ನು ಮುರಿದು ತಂದುಕೊಟ್ಟ. ಅದನ್ನು ಹಿಡಿದು ತೆರೆಸಾ ಕೆಂಪು ಮಣ್ಣಿನ ಮೇಲೆ ದುಂಡನೆಯ ಅಕ್ಷರಗಳನ್ನು ಮೂಡಿಸಿದರು. ಸುತ್ತ ನೆರೆದ ಮಕ್ಕಳು ಬಗ್ಗಿ ಬಗ್ಗಿ ಆ ಅಕ್ಷರಗಳನ್ನು ಕಲಿಯುವ ಪ್ರಯತ್ನ ನಡೆಸಿದರು. ಹೀಗೆ ಅವರ ಶಾಲೆಯ ಉದ್ಘಾಟನೆ ನಡೆಯಿತು. ಹಲವು ದಿನಗಳ ಕಾಲ ಇದೇ ರೀತಿ ಬೀದಿಯಲ್ಲಿಯೇ ಅಕ್ಷರಾಭ್ಯಾಸದ ಪಾಠ ನಡೆಯಿತು. ಅಲ್ಲಿ ಓಡಾಡುವ ಜನರು ಈ ದೃಶ್ಯವನ್ನು ನೋಡಿ ಆಶ್ಚರ್ಯಪಟ್ಟುಕೊಂಡರು. ಹಿಂದೆ ಅವರು ಪಾಠ ಕಲಿಸುತ್ತಿದ್ದ ಶಾಲೆಯ ವಿದ್ಯಾರ್ಥಿನಿಯರು, ಶಿಕ್ಷಕಿಯರು ಬಂದರು. ಸುಸಜ್ಜಿತ ಕಟ್ಟಡದಲ್ಲಿ ಪ್ರಾಂಶುಪಾಲೆಯಾಗಿ ಪಾಠಪ್ರವಚನಗಳನ್ನು ನಡೆಸುತ್ತಿದ್ದ ನಮ್ಮ ಮದರ್ ಈಗ ಬೀದಿಯ ಧೂಳಿನಲ್ಲಿ ಕುಳಿತು ಹಲಗೆ, ಬಳಪ, ತರಗತಿಗಳಿಲ್ಲದೆ ಪಾಠ ಕಲಿಸುತ್ತಿರುವುದು ಅವರಿಗೆ ಕೌತುಕದ ದೃಶ್ಯವಾಯಿತು. ಅದುವರೆಗೆ ಈ ಮಕ್ಕಳ ಕಡೆಗೆ ಯಾರೂ ಗಮನವನ್ನೇ ಹರಿಸಿರಲಿಲ್ಲ. ಸರಕಾರ ಕೂಡ ಈ ನಿಟ್ಟಿನಲ್ಲಿ ಪ್ರಯತ್ನವನ್ನು ನಡೆಸಿರಲಿಲ್ಲ. ಆದರೆ ತಾಯಿ ತೆರೆಸಾರವರಿಂದ ಬೀದಿಮಕ್ಕಳ ಅಭ್ಯುದಯ ಕಾರ್ಯಕ್ಕೆ ಚಾಲನೆ ದೊರೆತಿರುವುದನ್ನು ನೋಡಿ ಪ್ರತಿಯೊಬ್ಬರೂ ತಲೆದೂಗಿದರು.

ತೆರೆಸಾರ ಪ್ರಾಮಾಣಿಕ ಪ್ರಯತ್ನ ಫಲ ನೀಡಿತು. ಮಕ್ಕಳಲ್ಲಿ ಕಲಿಯುವ ಆಸೆ ಚಿಗುರಿತು. ಅವರ ಸಂಖ್ಯೆ ಇಪ್ಪತ್ತನ್ನು ದಾಟಿತು. ಖಾಲಿ ಗುಡಿಸಲೊಂದನ್ನು ಬಾಡಿಗೆಗೆ ಪಡೆದು ಅಲ್ಲಿ ತಮ್ಮ ಶಾಲೆಯನ್ನು ಸ್ಥಳಾಂತರಗೊಳಿಸಿದರು ತೆರೆಸಾ. ಯಾರೋ ದಾನಿಗಳು ಅವರಿಗೆ ಕುರ್ಚಿ ಮತ್ತು ಮೇಜನ್ನು ತಂದು ನೀಡಿದರು. ಆಮೇಲೆ ಪ್ಲೇಟು, ಪುಸ್ತಕ ಎಲ್ಲವೂ ಕೊಡುಗೆಯ ರೂಪದಲ್ಲಿ ಬಂದವು. ಹೀಗೆ 'ಮೋತಿಜೀಲ್' ಹೆಸರಿನ ಗಲ್ಲಿಯೊಂದರಲ್ಲಿ ಮಕ್ಕಳಿಗಾಗಿ ಶಾಲೆಯನ್ನು ತೆರೆಯುವುದರ ಮೂಲಕ ತಾಯಿ ತೆರೆಸಾ ಅವರ ಸಾಧನಾಪಥಕ್ಕೆ ಚಾಲನೆ ದೊರೆಯಿತು. ಆಮೇಲೆ ಅವರಿಂದ ಇದೇ ರೀತಿಯ ಶಾಲೆಗಳು ಬೇರೆ ಬೇರೆ ಕಡೆಗಳಲ್ಲಿ ಪ್ರಾರಂಭವಾದವು.

*  *  *

ತೆರೆಸಾ ತಮ್ಮ ಪಾಡಿಗೆ ಯಾವುದಾದರೂ ಕೆಲಸ ಹಚ್ಚಿಕೊಂಡು ಮಾಡುತ್ತಿದ್ದರು. ಆದರೆ ಯಾರ ಮುಂದೆಯೂ ಸಹಾಯಕ್ಕಾಗಿ ಕೈ ಚಾಚುತ್ತಿರಲಿಲ್ಲ. ಪ್ರತಿಯೊಬ್ಬರೂ ಕಷ್ಟಪಟ್ಟು ದುಡಿಯಬೇಕು ಮತ್ತು

ಸೇವೆ ಮಾಡುವ ಇಚ್ಛೆಯನ್ನು ಹೊಂದಿರಬೇಕು ಎನ್ನುವುದು ಅವರ ದಿವ್ಯಮಂತ್ರ. ಆದರೆ ಅವರು ಮಕ್ಕಳಿಗಾಗಿ, ಬಡವರಿಗಾಗಿ ನಡೆಸುತ್ತಿರುವ ಸೇವಾಕಾರ್ಯಗಳ ಸುದ್ದಿ ಸುತ್ತಲೂ ಹರಡಿತು. ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಕೆಲವರು ಅವರಿಗೆ ಹಣ ನೀಡಿದರು. ಇನ್ನುಕೆಲವರು ತಾವು ಉಪಯೋಗಿಸದ ಆದರೆ ಸುಸ್ಥಿತಿಯಲ್ಲಿರುವ ಕಟ್ಟಡವನ್ನು ನೀಡಿದರು. ಮೈಕೇಲ್ ಗೋಮ್ಸ್ ಎಂಬವರು ತೆರೆಸಾಗೆ ತಮ್ಮ ಮನೆಯ ಮಹಡಿಯಲ್ಲಿ ಇರಲು ಅವಕಾಶ ಮಾಡಿಕೊಟ್ಟರು. ಅವರ ಊಟ ತಿಂಡಿಯ ವ್ಯವಸ್ಥೆ ನೋಡಿಕೊಂಡರು. ಅವರಿಂದ ಬಾಡಿಗೆ ಎಂದೂ ಪಡೆಯಲಿಲ್ಲ. ಕಾನ್ವೆಂಟ್ ಬಿಟ್ಟ ಬಳಿಕ ತೆರೆಸಾರ ವಾಸ್ತವ್ಯ **'ಲಿಟಲ್ ಸಿಸ್ಟರ್ ಆಫ್ ದಿ ಪುವರ್'** ಜೊತೆಯಲ್ಲಿ ಇತ್ತು. ಆದರೆ ಅವರು ಮೋತಿಜೀಲ್‌ನಲ್ಲಿ ಕೆಲಸ ಪ್ರಾರಂಭಿಸಿದ್ದರಿಂದ ಗೋಮ್ಸ್ ಮನೆಯಲ್ಲಿ ಇರುವುದು ಅವರಿಗೆ ಅನುಕೂಲಕರವಾಯಿತು. 1949ನೇ ಇಸವಿ ಫೆಬ್ರವರಿ 28ರಂದು ಪುಟ್ಟದೊಂದು ಪೆಟ್ಟಿಗೆ ಹಿಡಿದು ಗೋಮ್ಸ್ ಮನೆಗೆ ಪ್ರವೇಶಿಸಿದ ತೆರೆಸಾ ಕೆಲವು ದಿನ ಒಂಟಿಯಾಗಿಯೇ ಅಲ್ಲಿ ಕಾಲ ಕಳೆದರು. 'ತಾನು ಕೈಗೊಳ್ಳಲಿರುವ ಕಾರ್ಯಗಳು ಸಫಲಗೊಳ್ಳುವಂತೆ ಮಾಡು ತಂದೆ. ನಾನು ಇಟ್ಟ ಹೆಜ್ಜೆಯಿಂದ ಹಿಂದೆ ಸರಿಯದಂತೆ ಮಾಡು ತಂದೆ' ಎಂದು ಅವರು ಪ್ರತಿದಿನ ದೇವರಲ್ಲಿ ಬೇಡಿಕೊಳ್ಳುತ್ತಿದ್ದರು. ಕೆಲವೇ ದಿನಗಳಲ್ಲಿ ಹಿಂದೆ ಸೈಂಟ್ ಮೇರೀಸ್ ಕಾನ್ವೆಂಟಿನಲ್ಲಿ ಅವರ ಕೆಲಸ ಮಾಡಿಕೊಂಡಿರುತ್ತಿದ್ದ ವಿಧವಾ ಸ್ತ್ರೀ ಚಾರುಮಾ ಬಂದು ಅವರನ್ನು ಸೇರಿಕೊಂಡಳು. ಆಮೇಲೆ ಅವರ ಹಳೆ ವಿದ್ಯಾರ್ಥಿನಿ ಸುಭಾಷಿಣಿ ದಾಸ್ ಬಂದಳು. ಮ್ಯಾಗ್ನಲೀನ್ ಗೋಮ್ಸ್ ಸೇರಿ ಕೊಂಡಳು. ಕ್ರಮೇಣ ತೆರೆಸಾರೊಂದಿಗೆ ಕೈಜೋಡಿಸಲು ಬರುವ ಭಗಿನಿಯರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಇದನ್ನು ನೋಡಿ ತೆರೆಸಾ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಯೋಜನೆಯನ್ನು ರೂಪಿಸಿದರು. ಒಬ್ಬರೇ ಇದ್ದು ಕೆಲಸ ಮಾಡುವುದಕ್ಕಿಂತ ನಾಲ್ಕು ಜನರನ್ನು ಸೇರಿಸಿ ಕೆಲಸ ಮಾಡುವುದು ಒಳ್ಳೆಯದು. ಇದರಿಂದ ತುಂಬಾ ಜನರಿಗೆ ಸಹಾಯ ಮಾಡಬಹುದು. ಸರಕಾರದ ಬೆಂಬಲ ಕೂಡ ದೊರೆಯುವುದು. ಹೀಗೆ ಆಲೋಚಿಸುತ್ತಾ ಅವರ ಮನಸ್ಸಿನಲ್ಲಿ ಹುಟ್ಟಿಕೊಂಡ ಪರಿಕಲ್ಪನೆ **'ಮಿಶನರೀಸ್ ಆಫ್ ಚ್ಯಾರಿಟಿ.'**

ಸ್ವತಂತ್ರವಾಗಿ ಧಾರ್ಮಿಕ ಸೇವಾಪಂಥವನ್ನು ಪ್ರಾರಂಭಿಸುವ ಮೊದಲು 1948ರಲ್ಲಿಯೇ ತೆರೆಸಾ ತನ್ನ ವಿದೇಶಿ ಪೌರತ್ವವನ್ನು ತ್ಯಜಿಸಿ ಭಾರತದ ಪೌರತ್ವವನ್ನು ಸ್ವೀಕರಿಸಿದರು.

**ಸದ್ಭಾವನೆಯ ಸೇವಾವ್ರತಿಗಳು**

ತಾಯಿ ತೆರೆಸಾರ ಸೇವಾಕಾರ್ಯಗಳಿಗೆ ಹಲವರಿಂದ ಸ್ವಯಂ ಪ್ರೇರಿತ ನೆರವು, ಸಹಕಾರಗಳು ದೊರೆಯುವ ಭರವಸೆ ಕಾಣಿಸಿಕೊಂಡ ಬಳಿಕ ಅವರು ಉದಾತ್ತ ಧ್ಯೆಯಗಳನ್ನು ಹೊಂದಿರುವ ಸೇವಾವ್ರತಿಗಳ ಪಂಥವೊಂದನ್ನು ಪ್ರಾರಂಭಿಸುವ ನಿರ್ಣಯ ಕೈಗೊಂಡರು. ಅದಕ್ಕೆ ಅನುಮತಿ ಕೋರಿ ಪೋಪ್ ಅವರಿಗೆ ಪತ್ರ ಬರೆದರು. ತೆರೆಸಾ ಪ್ರಾರಂಭಿಸಲಿರುವ ಪಂಥದಿಂದ ಸಮಾಜದ ದೀನದಲಿತರಿಗೆ ಸಹಾಯ ದೊರೆಯುವುದಲ್ಲದೆ, ಯುವಜನತೆಗೆ ಸಮಾಜಕಾರ್ಯ ನಡೆಸುವ ಪ್ರೇರಣೆಯೂ ಸಿಗುವ ಸಾಧ್ಯತೆ ಇದ್ದದ್ದರಿಂದ, ಪಂಥ ಪ್ರಾರಂಭಿಸಲು ಅವರಿಗೆ ಸಮ್ಮತಿ ಬೇಗನೆ ದೊರೆಯಿತು.

ಅವರಿಂದ ಅಕ್ಟೋಬರ್ 7, 1950ರಲ್ಲಿ **'ಮಿಶನರೀಸ್ ಆಫ್ ಚಾರಿಟಿ'** ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಇದರ ಸದಸ್ಯರಾಗಿ ಕೇವಲ 12 ಭಗಿನಿಯರು ಮಾತ್ರವೇ ಇದ್ದರು. ಆಮೇಲೆ ಲೊರೆಟ್ಟಾದ ಅವರ ಶಿಷ್ಯಯರು, ಸೈಂಟ್ ಮೇರೀಸ್ ಕಾನ್ವೆಂಟಿನ ಕೆಲವು ಶಿಕ್ಷಕಿಯರು ಮತ್ತು ಹಳೆ ವಿದ್ಯಾರ್ಥಿನಿಯರು ಬಂದು ಸೇರಿದರು. ಎರಡು ವರ್ಷಗಳಲ್ಲಿ ಅವರ ಸಂಸ್ಥೆ ಬೆಳೆಯಿತು. ಭಗಿನಿ ಸದಸ್ಯರ ಸಂಖ್ಯೆ ಮೂವತ್ತಕ್ಕೇರಿತು. **'ಮಿಶನರೀಸ್ ಆಫ್ ಚಾರಿಟಿ'**ಯನ್ನು ಸೇರಲು ಬಯಸುವವರಿಗೆ ಕೆಲವು ನಿಯಮಗಳನ್ನು ರೂಪಿಸಲಾಯಿತು. ಅಲ್ಪಾವಧಿಗೆ ಬಂದು ನೋಡಿ ಹೋಗಬಯಸುವ ಯುವತಿಯರಿಗೂ ಅವಕಾಶ ನೀಡಬೇಕೆಂದು ನಿರ್ಧಾರವಾಯಿತು. ಈ ಯುವತಿಯರು ಸೇವಾಕಾರ್ಯದಲ್ಲಿ ಮುಂದುವರಿಯಲು ಇಚ್ಚಿಸಿದರೆ ಅವರಿಗೆ ಹೊಸ ಹೆಸರನ್ನು ನೀಡಿ 'ನವಶಿಷ್ಯ'ರಾಗಿ (ನೊವೀಸ್) ಪ್ರವೇಶ ನೀಡಲಾಗುತ್ತದೆ. ಇವರ ಸಮವಸ್ತ್ರ ನೀಲಿಯಂಚಿನ ಪಟ್ಟಿಯಿಲ್ಲದ ಬಿಳಿ ಸೀರೆ. ಆಮೇಲೆ ಇವರಿಗೆ ಮಿಶನ್ ಕಾರ್ಯದಲ್ಲಿ ತೊಡಗಿಕೊಳ್ಳುವ ಕ್ರಮವನ್ನು ಹೇಳಿಕೊಡಲಾಗುತ್ತದೆ. ಒಟ್ಟು ಐದು ವರ್ಷಗಳ ತರಬೇತಿ ಪಡೆದ ನಂತರ ಸೇವಾವ್ರತಿಗಳು ಪಂಥದಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸುವರು. ಅವರು ನೀಲಿ ಪಟ್ಟಿಗಳ ಬಿಳಿ ಸೀರೆ ಮತ್ತು ಲೋಹದ ಶಿಲುಬೆಯನ್ನು ಧರಿಸುವರು. ಇವರನ್ನು ಆಧ್ಯಾತ್ಮಿಕ ಬೆಳವಣಿಗೆಗಾಗಿ ರೋಮ್ ಅಥವಾ ವಾಷಿಂಗ್‌ಟನ್ ಡಿಸಿಗೂ ಕಳುಹಿಸಲಾಗುತ್ತದೆ. ಆಮೇಲೆ ಇವರ ವೃತ್ತಿ ಬದುಕು ಪ್ರಾರಂಭವಾಗುತ್ತದೆ. ಹೀಗೆ ತಾಯಿ ತೆರೆಸಾ ಅವರು ಬಹು ಶಿಸ್ತಿನಿಂದ ಮಿಶನರೀಸ್ ಆಫ್ ಚಾರಿಟಿಯ ಸ್ವರೂಪವನ್ನು ನಿರ್ಧರಿಸಿದರು.

ಮಿಶನರಿಸ್ ಆಫ್ ಚಾರಿಟಿಯ ಸದಸ್ಯರ ಜವಾಬ್ದಾರಿಯೇನೆಂದರೆ ಸಹಾಯದ ನಿರೀಕ್ಷೆಯಲ್ಲಿ ಇರುವವರನ್ನು ಗುರುತಿಸುವುದು ಮತ್ತು ಅವರ ಸೇವೆಯಲ್ಲಿ ನಿರತರಾಗುವುದು. ವಿಶೇಷವಾಗಿ ಅವರು

ರೋಗಿಗಳು, ಅಂಗವಿಕಲರು ಮತ್ತು ವೃದ್ಧರ ಕಾಳಜಿಯನ್ನು ನೋಡಿಕೊಳ್ಳಬೇಕು. ಆದರೆ ತೆರೆಸಾರ ಕಾರ್ಯಕ್ಷೇತ್ರವಾಗಿರುವ ಕಲ್ಕತ್ತಾ ಮಹಾನಗರದಲ್ಲಿ ದೀನಾವಸ್ಥೆಯಲ್ಲಿ ಬದುಕುವವರು ಸಾವಿರ ಸಾವಿರ ಸಂಖ್ಯೆಯಲ್ಲಿ ಇದ್ದಾರೆ. ಅವರು ವಾಸವಾಗಿರುವಲ್ಲಿಗೆ ಹೋಗಿ ಅವರ ಸೇವೆ ಕೈಗೊಳ್ಳುವುದು ಸೇವಾವ್ರತಿಗಳಿಗೆ ಕಷ್ಟಸಾಧ್ಯದ ಕೆಲಸ. ಈ ಕಾರಣಕ್ಕಾಗಿ ತಾಯಿ ತೆರೆಸಾ ತನ್ನ ಭಗಿನಿಯರೊಂದಿಗೆ ಫೆಬ್ರವರಿ, 1953ರಲ್ಲಿ ಮೈಕೆಲ್ ಗೋಮ್ಸ್ ಅವರ ಮನೆಯನ್ನು ಬಿಟ್ಟು ಬೇರೆ ಜಾಗಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿಕೊಂಡರು. ಈ ಹೊಸ ನೆಲೆಗೆ 'ಅಮ್ಮನ ಮನೆ' ಎಂದು ಹೆಸರಿಟ್ಟು ಕರೆಯಲಾಯಿತು. ಆಮೇಲೆ ಈ ಅಮ್ಮನ ಮನೆಯ ಸುತ್ತಮುತ್ತ ಸೇವಾಕೇಂದ್ರಗಳನ್ನು ಪ್ರಾರಂಭಿಸುವ ಕೆಲಸಕ್ಕೆ ಚಾಲನೆ ದೊರೆಯಿತು. ಹೀಗೆ ತಲೆಯೆತ್ತಿದ ಸೇವಾಕೇಂದ್ರಗಳೇ 'ನಿರ್ಮಲ ಹೃದಯ', 'ನಿರ್ಮಲ ಶಿಶುಭವನ' ಮತ್ತು 'ಪ್ರೇಮದಾನ',

**ನಿರ್ಮಲ ಹೃದಯ**

ಒಮ್ಮೆ ತೆರೆಸಾ ಮೈಕೆಲ್ ಗೋಮ್ಸ್ ಅವರೊಂದಿಗೆ ಮೋತಿಜೀಲ್‌ಗೆ ಬರುತ್ತಿರುವಾಗ ಅವರಿಗೆ ಮರದ ಕೆಳಗೆ ಬಿದ್ದುಕೊಂಡಿರುವ ಒಬ್ಬ ವ್ಯಕ್ತಿಕಾಣಿಸಿದ. ಅವನ ದೇಹ ಸೊರಗಿ ಅಸ್ಥಿಪಂಜರದ ಹಾಗಿತ್ತು. ಅವನುಉಸಿರಾಡುತ್ತಿದ್ದುದರಿಂದ ಜೀವಂತವಿರುವ ಸೂಚನೆ ಇತ್ತು. ಆದರೆ ಅವರು ಕೆಲಸ ಮುಗಿಸಿ ಬರುವಷ್ಟರಲ್ಲಿ ಅವನ ಪ್ರಾಣ ಹೋಗಿತ್ತು. ಇದನ್ನು ನೋಡಿ ತೆರೆಸಾಗೆ ತುಂಬಾ ದುಃಖವಾಯಿತು. ಇನ್ನೊಮ್ಮೆ ತೆರೆಸಾಗೆ ಕಾಲುದಾರಿಯಲ್ಲಿ ಮಲಗಿಕೊಂಡಿದ್ದ ಮಹಿಳೆಯೊಬ್ಬಳು ಕಣ್ಣಿಗೆ ಬಿದ್ದಳು. ಅವಳ ಪಾದಗಳನ್ನು ಹೆಗ್ಗಣಗಳು ತಿಂದು ಮುಗಿಸಿದ್ದವು. ಅವರು ಇತರ ಭಗಿನಿಯರ ಸಹಾಯದಿಂದ ಅವಳನ್ನು ಕಷ್ಟಪಟ್ಟು ಆಸ್ಪತ್ರೆಗೆ ಕರೆತಂದರೆ, ಅಲ್ಲಿಯ ಸಿಬ್ಬಂದಿಗಳು ಜಾಗವಿಲ್ಲವೆಂದು ಎಲ್ಲಿಂದ ಕರೆದುಕೊಂಡು ಬಂದಿದ್ದೀರಿ ಅಲ್ಲಿಗೆ ಹೋಗಿ ಬಿಟ್ಟು ಬನ್ನಿ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು ! ಇದನ್ನು ಕೇಳಿ ತಾಯಿ ತೆರೆಸಾ ಹೃದಯ ಮರುಗಿತು. ಅವರು ಅವಳನ್ನು ಅಲ್ಲಿಯೇ ನೆಲದ ಮೇಲೆ ಮಲಗಿಸಿದರು. ಸ್ವಲ್ಪ ಹೊತ್ತಿನಲ್ಲಿ ಅವಳು ತೆರೆಸಾ ಕೈಹಿಡಿದುಕೊಂಡೇ ಇಹಲೋಕ ತ್ಯಜಿಸಿದಳು. ಸಾಯುವ ಸ್ಥಿತಿಯಲ್ಲಿದ್ದಾಗ ಈ ಇಬ್ಬರು ವ್ಯಕ್ತಿಗಳು ಏನಾದರೂ ಹೇಳಲು ಬಯಸಿರಬಹುದೇ ? ಯಾರನ್ನಾದರೂ ನಿರೀಕ್ಷಿಸಿರಬಹುದೇ ? ಇನ್ನೂ ಉತ್ತಮ ಜಾಗದಲ್ಲಿ ಅವನ ಸಾವು ಸಂಭವಿಸಬಹುದಿತ್ತಲ್ಲ ? ಇಂತಹ ಅನೇಕ ಪ್ರಶ್ನೆಗಳು ಅವರನ್ನು ಸತತವಾಗಿ ಕಾಡಲಾರಂಭಿಸಿದವು.

ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಗೆ ಸಾವು ಅನಿವಾರ್ಯ. ಸಾವಿಗೆ ವಯಸ್ಸು, ಜಾತಿ, ಮತ, ದೇಶದ ಮಿತಿಯಿಲ್ಲ. ಆದರೆ ಮನುಷ್ಯನ ಅಂತ್ಯವನ್ನು ಸಾರುವ ಸಾವು ಘನತೆಯಿಂದ ಕೂಡಿರಬೇಕು. ಬಡವರಿರಲಿ, ಶ್ರೀಮಂತರಿರಲಿ ಸಾವನ್ನು ಶಾಂತಿಪೂರ್ವಕವಾಗಿ ಸ್ವಾಗತಿಸುವ ಸ್ಥಿತಿ ಇರಬೇಕು. ಹೀಗೆಂದು ಯೋಚಿಸಿದ ತಾಯಿ ತೆರೆಸಾ ನಗರಸಭೆಯ ಕಚೇರಿಗೆ ಹೋಗಿ ಅಲ್ಲಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇಷ್ಟು ದೊಡ್ಡ ನಗರದಲ್ಲಿ ಮನುಷ್ಯರು ರಸ್ತೆಯಲ್ಲಿ ಬಿದ್ದು ಸಾಯುತ್ತಿರುವುದು ನಿಜವಾಗಿಯೂ ನಾಚಿಕೆಯ ಸಂಗತಿ. ಇವರ ಕುರಿತು ಯಾರೂ ಯೋಚಿಸುತ್ತಿಲ್ಲ. ನೀವು ನಮಗೆ ಒಂದು ಕಟ್ಟಡ ನೀಡಿ, ನಾವು ಈ ಮನುಷ್ಯರಿಗೆ ಅಲ್ಲಿ ಗೌರವದ ಬದುಕು ನೀಡಿ ದೇವರಿಗೆ ಸಮರ್ಪಿಸುತ್ತೇವೆ' ಎಂದು ಹೇಳಿದರು. ಅವರಿಗೆ ಕಾಳಿಘಾಟ್‌ನಲ್ಲಿ ಕಾಳಿ ದೇವಾಲಯದ ಹತ್ತಿರವಿದ್ದ ಪಾಳುಬಿದ್ದ ಧರ್ಮಶಾಲೆಯನ್ನು ತೆರೆಸಾ ವಶಕ್ಕೆ ಒಪ್ಪಿಸಲಾಯಿತು. ಅದು ಬಹಳ ಸಮಯದಿಂದ ಖಾಲಿ ಇದ್ದಂತಹ ಕಟ್ಟಡ. ಅದರಲ್ಲಿ ತೆರೆಸಾ 1952ನೇ ಇಸವಿ ಆಗಸ್ಟ್ 22ರಂದು 'ನಿರ್ಮಲ ಹೃದಯ'ವನ್ನು ಪ್ರಾರಂಭಿಸಿದರು. ನಿರ್ಗತಿಕರಾಗಿ ಬೀದಿಯಲ್ಲಿ ಬಿದ್ದು ಸಾವಿನ ಕ್ಷಣಗಳನ್ನು ಎಣಿಸುತ್ತಿರುವವರನ್ನು ಈ ಸೇವಾಕೇಂದ್ರಕ್ಕೆ ಕರೆತಂದು, ಅವರ ದೇಹವನ್ನು ಶುದ್ಧಗೊಳಿಸಿ, ಅವರಿಗೆ ಊಟ ನೀಡಿ ಮಂಚದ ಮೇಲೆ ಮಲಗಿಸುವ ಪರಿಪಾಠವನ್ನು ಪ್ರಾರಂಭಿಸಿದರು.

ಕಲ್ಕತ್ತಾದ ಕಾಳಿ ಮಂದಿರ ಪ್ರಸಿದ್ಧ ಯಾತ್ರಾಸ್ಥಳ. ಇಲ್ಲಿ ವಿದೇಶಿ ಮಹಿಳೆಯೊಬ್ಬರು ನಿರ್ಗತಿಕರಿಗಾಗಿ ಆಶ್ರಮವನ್ನು ತೆರೆದಿರುವುದನ್ನು ನೋಡಿ ಸಂಪ್ರದಾಯವಾದಿಗಳು ಮುನಿಸಿಕೊಂಡರು. ಅದುವರೆಗೆ ಧರ್ಮಶಾಲೆಯಲ್ಲಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಂತಹ ಸಮಾಜಕಂಟಕರಲ್ಲಿ ಕ್ರೋಧ ಹುಟ್ಟಿತು. ತೆರೆಸಾರ ಆಶ್ರಮದಿಂದ ತಮ್ಮ ಕಾರ್ಯಗಳಿಗೆ ವಿಘ್ನ ಉಂಟಾಗಬಹುದೆಂಬ ಆತಂಕದಿಂದ ಅವರು ಪ್ರತಿಭಟನೆ ವ್ಯಕ್ತಪಡಿಸಿದರು. ದೇಶ ಬಿಟ್ಟು ಹೋಗುವಂತೆ ತೆರೆಸಾಗೆ ಆದೇಶ ನೀಡಲಾರಂಭಿಸಿದರು. ಅವರ ವಿರುದ್ಧ ಮತಾಂತರದ ಸುಳ್ಳು ಆರೋಪವನ್ನು ಹೊರಿಸಲಾಯಿತು. ತನಿಖೆ ನಡೆಸಲು ಸ್ವತಃ ಪೊಲೀಸ್ ಆಯುಕ್ತರು ತಮ್ಮ ಸಹಅಧಿಕಾರಿಯೊಂದಿಗೆ ಬಂದರು. ಅವರ ಭೇಟಿಯ ವಿಚಾರ ತೆರೆಸಾಗೆ ತಿಳಿದಿರಲಿಲ್ಲ. ಅಧಿಕಾರಿಗಳು ನೇರವಾಗಿ ಒಳಗೆ ಪ್ರವೇಶಿಸಿದಾಗ ತೆರೆಸಾ ಒಬ್ಬ ರೋಗಿಯ ಆರೈಕೆಯಲ್ಲಿ ತೊಡಗಿ ಕೊಂಡಿದ್ದರು. ಆ ರೋಗಿಯ ಬಾಯಿ ಹುಣ್ಣಿನಲ್ಲಿರುವ ಹುಳಗಳನ್ನು ತಾಯಿ ತೆರೆಸಾ ಹೆಕ್ಕಿ ತೆಗೆಯುತ್ತಿರುವ ದೃಶ್ಯ ಅವರ ಕಣ್ಣಿಗೆ ಬಿತ್ತು! ಪೊಲೀಸ್ ಅಧಿಕಾರಿಗಳ ಹೃದಯ ಕರಗಿ ಕಣ್ಣಿನಲ್ಲಿ ನೀರು ತುಂಬಿತು. ಅವರು ಹೊರಗೆ ಬಂದು ಪ್ರತಿಭಟನಾಕಾರರನ್ನು ಉದ್ದೇಶಿಸಿ ಹೀಗೆ ಹೇಳಿದರು, 'ಈ ಮಹಿಳೆಯನ್ನು ಎತ್ತಂಗಡಿ ಮಾಡುವಂತೆ ನೀವು ಹೇಳುತ್ತಿದ್ದೀರಿ. ನಾನು ಅದನ್ನು

ಖಂಡಿತವಾಗಿಯೂ ಪಾಲಿಸುತ್ತೇನೆ. ಆದರೆ ನಿಮ್ಮ ತಾಯಿ, ಅಥವಾ ನಿಮ್ಮ ಸೋದರಿಯರು ಇಲ್ಲಿಗೆ ಬಂದು ತಾಯಿ ತೆರೆಸಾಮಾಡುತ್ತಿರುವ ಕೆಲಸವನ್ನು ಮುಂದುವರಿಸುವ ಆಶ್ವಾಸನೆಯನ್ನು ನೀವು ನನಗೆ ನೀಡಬೇಕು.' ಪೊಲೀಸ್ ಅಧಿಕಾರಿಯ ಮಾತು ಕೇಳಿದ ಬಳಿಕ ಅಲ್ಲಿ ಪ್ರತಿಭಟನೆಯ ಯಾವುದೇ ಸೊಲ್ಲು ಕೇಳಿಬರಲಿಲ್ಲ.

ಅನಂತರ ತೆರೆಸಾರ ಈ 'ನಿರ್ಮಲ ಹೃದಯ' ಇಡೀ ಜಗತ್ತಿನಲ್ಲಿಯೇ ಅಪರೂಪದ ಉದ್ದೇಶವನ್ನು ಹೊಂದಿರುವ ಏಕಮಾತ್ರ ಸೇವಾಶ್ರಮವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಲ್ಲಿ ಬಂದು ಸೇರುವವರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಅವರಲ್ಲಿ ನಿರ್ಗತಿಕರು, ಅನಾಥರು, ರೋಗಿಗಳು ಇರುತ್ತಿದ್ದರು. ಅವರಲ್ಲಿ ಕೆಲವರು ಔಷಧೋಪಚಾರಗಳಿಂದ ಚೇತರಿಸಿ ಹೊರಬಿದ್ದ ಉದಾಹರಣೆಗಳು ಕೂಡ ಇದ್ದವು. ಒಮ್ಮೆ ಚರಂಡಿಯಲ್ಲಿ ಬಿದ್ದುಕೊಂಡಿದ್ದ ವ್ಯಕ್ತಿಯೊಬ್ಬನನ್ನು ತೆರೆಸಾ 'ನಿರ್ಮಲ ಹೃದಯ'ಕ್ಕೆ ಕರೆತಂದರು. ಅವನ ಇಡೀ ದೇಹ ಗಾಯಗಳಿಂದ ತುಂಬಿಕೊಂಡಿತ್ತು. ಭಗಿನಿಯರು ಅವನಿಗೆ ಸ್ನಾನ ಮಾಡಿಸಿ, ಅವನ ಗಾಯಗಳಿಗೆ ಔಷಧಿ ಹಚ್ಚಿದರು. ಅದುವರೆಗೆ ಮೌನವಾಗಿದ್ದ ಆ ವ್ಯಕ್ತಿ ತಾಯಿ ತೆರೆಸಾರನ್ನು ಹತ್ತಿರ ಕರೆದು ಹೇಳಿದ, 'ಇದುವರೆಗೆ ನಾನು ನನ್ನ ಇಡೀ ಜೀವನವನ್ನು ಬೀದಿಪ್ರಾಣಿಯಂತೆ ಕಳೆದೆ. ಈಗ ನಾನು ಮನುಷ್ಯನಾಗಿ ದೇವರ ಸನ್ನಿಧಿಗೆ ಹೋಗುತ್ತಿದ್ದೇನೆ.' ಅವನ ಮುಖದಲ್ಲಿ ಅರಳಿದ ಸುಂದರ ನಗುವನ್ನು ಭಗಿನಿಯರು ಮುಂದೆ ಎಂದೂ ಮರೆಯದಾದರು. ಬೀದಿಯಲ್ಲಿ ಸಾವಿನ ನಿರೀಕ್ಷೆಯಲ್ಲಿ ಬಿದ್ದುಕೊಂಡಿರುವ ಮನುಷ್ಯನ ದೇಹದ ಸ್ಥಿತಿ ಹೇಗೇ ಇರಲಿ ಅದಕ್ಕೆ ಅಸಹ್ಯ ಪಡದೆ ಅವರ ಸೇವೆ ನಡೆಸಬೇಕು ಎಂದು ತಾಯಿ ತೆರೆಸಾ ತನ್ನ ಸಹವರ್ತಿ ಭಗಿನಿಯರಿಗೆ ಹೇಳುತ್ತಿದ್ದರು.'ಇಂತಹ ದೇಹವನ್ನು ಮಮತೆಯಿಂದ ಸ್ಪರ್ಶಿಸಲು, ಅದನ್ನು ಪರಿಶುದ್ಧಗೊಳಿಸಲು ಯಾರೂ ನಾಚಿಕೆ ಪಡಬೇಕಾಗಿಲ್ಲ. ಅಂತಿಮ ಕ್ಷಣಗಳಲ್ಲಿ ಪ್ರೀತಿ ತೋರಿಸುವುದರ ಮೂಲಕ ಪಡೆಯುವ ಸಾವು ಶಾಂತಿಪೂರ್ವಕವಾಗಿರುತ್ತದೆ. ಅದು ಅದ್ಭುತ ವಾಸ್ತವ ಸಂಗತಿ' ಎಂದು ಹೇಳುವ ತಾಯಿ ತೆರೆಸಾ, 'ಕನಿಷ್ಠ ಸಾವಿನ ನಿರೀಕ್ಷೆಯಲ್ಲಿಯಾದರೂ ಅವರು ಮನುಷ್ಯರಾಗಿ ತಮ್ಮ ಘನತೆಯನ್ನು ಕಾಪಾಡುವಂತಾಗಲಿ" ಎಂಬ ಸದಾಶಯವನ್ನು ವ್ಯಕ್ತಪಡಿಸುತ್ತಿದ್ದರು.

## 4. ಒಂದು ನಾಯಿಯ ಕಥೆ  ( ಓದು ಪಠ್ಯ)

- ಓ ಹೆನ್ರಿ

**ಅನುವಾದ: ಜಿ.ಎಸ್. ರಂಗನಾಥರಾವ್**

ಪ್ರಾಣಿಯೊಂದರ ಲೇಖನವನ್ನು ಓದುವುದರಿಂದ ನಿಮ್ಮ ಉನ್ನತಸ್ಥಾನಮಾನಗಳಿಗೆ ಯಾವುದೇ ರೀತಿ ಧಕ್ಕೆ ಬಾರದೆಂದು ನಾನು ಭಾವಿಸುತ್ತೇನೆ. ಪ್ರಾಣಿಗಳೂ ಲಾಭದಾಯಕವಾದ ಇಂಗ್ಲಿಷ್ ಭಾಷೆಯಲ್ಲಿ ತಮ್ಮ ಭಾವನೆಗಳನ್ನು, ತಮ್ಮ ವಿಚಾರಗಳನ್ನು ತಿಳಿಸಬಲ್ಲವು ಎಂದು ಮಿಸ್ಟರ್ ಕಿಪ್ಲಿಂಗ್ ಮತ್ತಿತರ ಸಂಭಾವಿತರು ಈಗಾಗಲೇ ಸಿದ್ಧಪಡಿಸಿ ತೋರಿಸಿದ್ದಾರೆ. ಇತ್ತೀಚಿನ ದಿನಗಳಲ್ಲಂತೂ ಪ್ರಾಣಿಗಳ ಕಥೆ ಪ್ರಕಟಿಸದೇ ಇರುವ ಪತ್ರಿಕೆಗಳೇ ಇಲ್ಲ. ಎಲ್ಲೋ ಒಂದೆರಡು ಹಳೆಯ ಕಾಲದ ಮಾಸಪತ್ರಿಕೆಗಳು ಇದಕ್ಕೆ ಅಪವಾದವಾಗಿ ಕಾಣಬಹುದಷ್ಟೆ, ಅವು ಇನ್ನೂ ಬ್ರಿಯಾನ್ ಮಾಂಟ್ ಪೀಲೆಯ ಭಯಾನಕ ಚಿತ್ರಗಳನ್ನು ಪ್ರಕಟಿಸುತ್ತಿವೆ, ಆದರೆ ಇಲ್ಲಿ, ಈ ನನ್ನ ಬರಹದಲ್ಲಿ, ಜಂಗಲ್ ಪುಸ್ತಕಗಳಲ್ಲಿ ಕರಡಿ ಬೇರ್, ಹಾವು ಸ್ನೇಕೂ, ಹುಲಿ ಮಾತನಾಡುವಂಥ ದಿಕ್ಕುಗಾಣದ ಸಾಹಿತ್ಯವನ್ನು ಅರಸಬೇಕಾಗಿಲ್ಲ.

ನಾನು ಹುಟ್ಟಿನಿಂದ ಹಳದಿ ನಾಯಿಮರಿ, ಹುಟ್ಟಿದ ತಾರೀಖು, ಹುಟ್ಟಿದೂರು, ವಂಶಾವಳಿ, ಹುಟ್ಟಿದಾಗ ಇದ್ದ ತೂಕ ಇದಾವುದೂ ತಿಳಿಯದು. ನನಗೆ ನೆನಪಾಗುವ ಮೊದಲ ಸಂಗತಿಯೆಂದರೆ, ಮುದುಕಿಯೊಬ್ಬಳು ನನ್ನನ್ನು ಬುಟ್ಟಿಯಲ್ಲಿಟ್ಟುಕೊಂಡು ಬ್ರಾಡ್ವೆಯಲ್ಲಿ **ಠೊಣಪಿ**ಯೊಬ್ಬಳಿಗೆ ಮಾರುವ ಪ್ರಯತ್ನ ನಡೆಸಿದ್ದು, ಮುದುಕಿ ಹಬ್ಬಾರ್ಡ್, ಪೊಮೆರೇನಿಯನ್, ಹ್ಯಾಂಬ್ಲೆ ಟೋನಿಯನ್, ರೆಡ್, ಐರಿಶ್, ಕೊಚ್ಚಿನ್, ಚೈನಾ ಸ್ಟೋಕ್ ಮೊದಲಾದ ಯಾವುದೇ ಮಹಾನ್ ತಳಿಯ ನಾಯಿಗಳಿಗೆ ಯಾವುದೇ ರೀತಿ ಕಮ್ಮಿಯಲ್ಲವೆಂದು ಅತಿಶಯವಾಗಿ ನನ್ನ ಗುಣಗಾನ ಮಾಡಿದ್ದಳು.ಆನಂತರ ನಾನು ಠೊಣಪಿಯ ಮುದ್ದುಮರಿಯಾದೆ. ಪ್ರಿಯ ಓದುಗರೇ, ಎಂದಾದರೂ ನೀವು, ಇನ್ನೂರು ಪೌಂಡ್ ತೂಕದ ಮಹಿಳೆಯೊಬ್ಬಳು "ಅಕ್ಷೀ ಅಕ್ಷೀ" ಎಂದು ಸೀನುತ್ತ, ಛೀ–ಥೂ– ಹಚಾ ಎಂದು 'ರೇಗಾಡುವುದನ್ನು ಕಂಡಿದ್ದೀರ?

ಕುಲೀನ ಮನೆತನದ ಹಳದಿ ನಾಯಿಮರಿಯಾದ ನಾನು, ಅಂಗೋರಾದ ಬೆಕ್ಕು ಮತ್ತು ಗಜ ನಿಂಬೆಯ ಹಣ್ಣಿನ ಮಿಶ್ರ ತಳಿಯಂತೆ ಒಂದು ಕೀಳುಜಾತಿಯ ನಾಯಿಯಾಗಿ ಬೆಳೆಯತೊಡಗಿದೆ. ಆದರೆ ನನ್ನ ಒಡತಿ ಇದಾವುದಕ್ಕೂ ತಲೆಕೆಡೆಸಿಕೊಳ್ಳಲಿಲ್ಲ. ಪ್ರಳಯದಲ್ಲಿ 'ನೋವ' ಕೊಚ್ಚಿ ಹೋಗದಂತೆ ರಕ್ಷಿಸಿದ ತೇಲು ಬುಟ್ಟಿಯಲ್ಲಿದ್ದ ಎರಡು ಪ್ರಾಚೀನ ನಾಯಿ ಕುನ್ನಿಗಳು ನನ್ನ ಪೂರ್ವಿಕರೆಂದು ಅವಳು ನಂಬಿದ್ದಳು.

ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ನಡೆಯುವ ಸೈಬೀರಿಯನ್ ಬ್ಲಡ್ ಹೌಂಡ್ ಸ್ಪರ್ಧೆಯಿಂದ ಅವಳನ್ನು ದೂರವಿರಿಸಲು ಇಬ್ಬರು ಪೊಲೀಸರು ಹೆಣಗಾಡಬೇಕಾಯಿತು.

ನಾನೀಗ ಮೇಲಂತಸ್ತಿನ ಮನೆ ಬಗ್ಗೆ ಹೇಳುತ್ತೇನೆ. ನ್ಯೂಯಾರ್ಕಿನಲ್ಲಿ ಅದೊಂದು ಸಾಮಾನ್ಯ ಮನೆ, ಹಜಾರದ ನೆಲ ಪೇರಾಸ್ ದ್ವೀಪದ ಅಮೃತ ಶಿಲೆಯಿಂದ ಫಳಫಳಿಸುತ್ತಿತ್ತು. ನನ್ನ ಒಡತಿ ಅದನ್ನು ಮೊದಲ ಅಂತಸ್ತಿನ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದಳು. ಪೀಠೋಪಕರಣಗಳೇನೂ ಇರಲಿಲ್ಲ. 1903ರಷ್ಟು ಪ್ರಾಚೀನ ಕಾಲದ ಮನೆ.

ಮಹಾಶ್ವಾನ ನಕ್ಷತ್ರ ಪುಂಜದ ಆಣೆ ಹೇಳ್ತೀನಿ, ಅಲ್ಲೊಂದು ಎರಡು ಕಾಲಿನ ಪ್ರಾಣಿ ಇತ್ತು. ನೋಡಿದರೆ 'ಅಯ್ಯೋ ಪಾಪ' ಎಂದು ಕನಿಕರ ಹುಟ್ಟಿತ್ತು. ಕೆದರಿದ ತಲೆಗೂದಲ ನರಪೇತಲ ಕೆನ್ನೆ ಕೂದಲು, ಮೀಸೆ ಸ್ವಲ್ಪ ಹೆಚ್ಚು ಕಡಿಮೆ ನನ್ನಂತೆಯೇ, ಹೆಂಡತಿಯ ಗುಲಾಮ? ಅವನು ಪಾತ್ರೆ ತೊಳೆಯುತ್ತಿದ್ದ. ಕಸ–ಮುಸುರೆ ತೆಗೆಯುತ್ತಿದ್ದ. ನನ್ನ ಒಡತಿ, ಎರಡನೆಯ ಮಹಡಿಯಲ್ಲಿ ವಾಸವಾಗಿದ್ದವಳ ಚಿಂದಿಬಟ್ಟೆ, ಅವಳ ನಡೆನುಡಿ ಬಗ್ಗೆ ಆಡುತ್ತಿದ್ದ ಕೀಳು ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ. ಪ್ರತಿದಿನ ಸಂಜೆ ಅವಳು ಊಟಕ್ಕೆ ಕುಳಿತಾಗ ಅವನು ನನ್ನನ್ನು ಸಂಜೆಯ ವಾಯುವಿಹಾರಕ್ಕೆ ಕರೆದುಕೊಂಡು ಹೋಗುವಂತ ತಾಕೀತು ಮಾಡುತ್ತಿದ್ದಳು.

ಹೆಂಗಸರು ಒಬ್ಬರೇ ಇದ್ದಾಗ ಹೇಗೆ ಕಾಲಕಳೆಯುತ್ತಾರೆ ಎಂಬುದನ್ನು ತಿಳಿದರೆ ಗಂಡಸರು ಮದುವೆ ಮಾಡಿಕೊಳ್ಳುವುದೇ ಇಲ್ಲ. ಲಾರಾ ಲೀನ್ ಜಿಬ್ಬೆ ಕನ್ನಡಿ ಮುಂದೆ ನಿಂತು ಸ್ನೋ ಹಚ್ಚಿಕೊಳ್ಳುವುದು, ಕುತ್ತಿಗೆಗೆ ಸುಗಂಧದ ಎಣ್ಣೆ ಹಚ್ಚಿ ನೀವಿಕೊಳ್ಳುವುದು. ಪಾತ್ರೆಪಗಡಿ ಕಸ ಮುಸುರೆ ಹಾಗೇ ಬಿದ್ದಿರುತ್ತೆ. ಒಂದು ಅರ್ಧ ಗಂಟೆಕಾಲ ಮಂಜುಮಿಠಾಯಿ ಮಾರುವವನ ಜೊತೆ ಹರಟೆ ಕೊಚ್ಚುವುದು, ಹಳೆಯ ಕಾಗದಗಳನ್ನೇ ಮತ್ತೆ ಮತ್ತೆ ಓದುವುದು... ಬಾಯಿಗೆ ಒಂದಿಷ್ಟು ಖಾರದ ಕಡಲೆ ಹಾಕಿಕೊಳ್ಳುವುದು. ಒಂದೆರಡು ಲೋಟ ಮಾಲ್ಟ್ ಕುಡಿಯುವುದು, ನಂಜಿಕೊಳ್ಳಲಿಕ್ಕೆ ಮೇಲೊಂದು ಉಪ್ಪಿನಕಾಯಿ, ಒಂದೆರಡು ಗಂಟೆಕಾಲ ಕಿಟಕಿಯಲ್ಲಿ ನಿಂತು ಬೀದಿಯ ವಿದ್ಯಮಾನಗಳನ್ನು ನೋಡುತ್ತಿರುವುದು. ಇಷ್ಟೇ ಇಷ್ಟೆಲ್ಲಾ ಮುಗಿಯುವ ಹೊತ್ತಿಗೆ ಗಂಡ ಬರುವ ಸಮಯ, ಗಂಡ ಬರಲು ಇಪ್ಪತ್ತು ನಿಮಿಷ ಇದೆ ಎನ್ನುವಾಗ ಮನೆಗೆಲಸದ ಉಸಾಬರಿ, ಮುಡಿ ಕಟ್ಟಿಕೊಳ್ಳುತ್ತಾಳೆ. ಹೊಲಿಗೆ ಯಂತ್ರದ ಮುಂದೆ ಕುಳಿತು ಬಹಳ ಹೊತ್ತಿನಿಂದ ಬಟ್ಟೆ ಹೊಲೆಯುತ್ತಿರುವಂತೆ ಆಯಾಸ ನಟಿಸುತ್ತಾಳೆ.

ಇಂಥ ಮನೆಯಲ್ಲಿ ನನ್ನ ಪಾಡು ನಾಯಿಪಾಡು. ದಿನದಲ್ಲಿ ಬಹುತೇಕ ಸಮಯ ಠೊಣಪಿ ಕಾಲಕಳೆಯುವುದನ್ನು ನೋಡುತ್ತಾ ಮೂಲೆಯೊಂದರಲ್ಲಿ ಬಿದ್ದುಕೊಂಡಿರ್ತಿನಿ. ಕೆಲವೊಮ್ಮೆ ನಿದ್ದೆ ಮಾಡ್ತೀನಿ. ನಿದ್ದೆಯಲ್ಲಿ, ನೆಲಮಾಳಿಗೆಯಲ್ಲಿ ಬೆಕ್ಕುಗಳನ್ನು ಅಟ್ಟಿಸಿಕೊಂಡು ಹೋದಂತೆ, ಕಪ್ಪು ಕೈಗವಸು ತೊಟ್ಟ ಮುದುಕಿಯರನ್ನು ಕಂಡು ಬೊಗಳಿದಂತೆ ಕನಸು ಕಾಣುತ್ತೇನೆ. ಮತ್ತೆ ಸಿಂಬಳ ಸೀಟುತ್ತಾ ಹಾರಿಬಂದು ನನ್ನನ್ನು ಹಿಡಿದು ಅಪ್ಪಿಕೊಳ್ಳುತ್ತಾಳೆ. ಹರಟೆ ಕೊಚ್ಚುತ್ತಾಳೆ, ಆಮೇಲೆ ನನ್ನ ಮೂಗನ್ನು ಚುಂಬಿಸುತ್ತಾಳೆ. ಆದರೆ ನನ್ನಿಂದ ಏನು ತಾನೆ ಮಾಡಲು ಸಾಧ್ಯ?

ನನಗೆ ಅವಳ ಗಂಡನ ಬಗ್ಗೆ 'ಅಯ್ಯೋ' ಎನಿಸುತ್ತಿತ್ತು. ನಮ್ಮಿಬ್ಬರಲ್ಲಿ ಪರಸ್ಪರ ಹೋಲಿಕೆ ಇತ್ತು. ಹೆಚ್ಚು ಕಡಿಮೆ ನಾವಿಬ್ಬರೂ ಒಂದೇ ಥರಾ ಕಾಣಿಸ್ತಿದ್ದೆವು. ನಾವಿಬ್ಬರೂ ಹೊರಗೆ ಹೋದಾಗ ಬೀದಿಯಲ್ಲಿ ಓಡಾಡುವ ಜನ ಇದನ್ನು ಗಮನಿಸಿದ್ದರು.

ಒಂದು ಸಂಜೆ ವಾಯು ವಿಹಾರಕ್ಕೆ ಹೋಗಿದ್ದಾಗ ನಾನು ಬಹುಮಾನಿತ ಕುಲೀನ ನಾಯಿಯಂತೆ ವರ್ತಿಸುವ ಪ್ರಯತ್ನ ನಡೆಸಿದ್ದೆ. ಅವನು, ಮೆಂಡಲ್ಸನ್‌ನ ಮದುವೆ ಮೆರವಣಿಗೆಯಲ್ಲಿ ವಾದ್ಯನುಡಿಸಿದ ಆರ್ಗನ್ ವಾದ್ಯಗಾರನನ್ನು ಕೊಂದವನು ತಾನಲ್ಲ ಎಂಬಂತೆ ತೋರಿಸಿಕೊಳ್ಳುವ ಪ್ರಯತ್ನ ನಡೆಸಿದ್ದ.

"ಏಕೆ ಹಾಗೆ ಮುಖ ಹುಳ್ಳಗೆ ಮಾಡ್ಕೊಂಡಿದೀಯ? ಅಯ್ಯಾ ಅವಳು ನಿನಗೆ ಮುತ್ತುಕೊಡಲ್ಲ. ನೀನು ಅವಳ ತೊಡೆಮೇಲೆ ಕೂತ್ಕಂಡು ಅವಳ ಕಾಡುಹರಟೇನ ಕೇಳಿಸ್ಕೋಬೇಕಿಲ್ಲ. ನೀನು ನಿಜಕ್ಕೂ ಆಭಾರಿಯಾಗಿರಬೇಕು, ಏಕೆಂದರೆ ನೀನು ನಾಯಿಯಲ್ಲ, ಬೆನೆಡಿಕ್, ಉತ್ಸಾಹ ತಂದುಕೋ, ಹಿಂದಿನದನ್ನೆಲ್ಲ 'ಶನಿ ತೊಲಗಿತು' ಅಂತ ಮರೆತುಬಿಡು".

ವೈವಾಹಿಕ ದುರಂತದ ಆ ಬಲಿಪಶು ನಾಯಿಯ ಬುದ್ಧಿವಂತಿಕೆಯಿಂದ ನನ್ನತ್ತ ನೋಡಿತು.

"ಏಕೆ ನನ್ನ ಮುದ್ದಿನ ಮರಿಯೇ ಹಾಗೆ ನೋಡ್ತೀ? ನೀನು ನನ್ನ ಮುದ್ದಿನ ನಾಯಿ. ನಿನ್ನ ಮುಖಭಾವ ನೋಡಿದರೆ ನೀನು ಏನನ್ನೂ ಹೇಳುವ ಕಾತರದಿಂದಿರೋ ಹಾಗೆ ಕಾಣುತ್ತೆ, ಏನದು ಡಾಗಿ, ಬೆಕ್ಕುಗಳೇ?"

ಬೆಕ್ಕುಗಳು! ಬೆಕ್ಕುಗಳೂ ಮಾತಾಡಬಲ್ಲವು.

ಆದರೆ ಅವನಿಗೆ ಅರ್ಥವಾಗಲಿಲ್ಲ. ಮನುಷ್ಯರು ಮೃಗಗಳ ಭಾಷೆಯಿಂದ ವಂಚಿತರು. ಅವರಿಗೆ ಪ್ರಾಣಿಗಳ ಭಾಷೆ ಅರ್ಥವಾಗುವುದಿಲ್ಲ. ಕಾಲ್ಪನಿಕ ಕಥೆಗಳಲ್ಲಿ ಮಾತ್ರ ಮನುಷ್ಯರು ಪ್ರಾಣಿಗಳು ಪರಸ್ಪರ ಮಾತಾಡಬಹುದು. ಕಾಲ್ಪನಿಕ ಕಥಾಸಾಹಿತ್ಯವೊಂದೇ ಇವರಿಬ್ಬರ ನಡುವಣ ಸಂವಹನ ಮಾಧ್ಯಮ.

ನಮ್ಮ ಮನೆಯ ಆಚೆ ಇರುವ ಫ್ಲಾಟ್‌ನಲ್ಲಿ ಒಬ್ಬಳು ವಾಸವಾಗಿದ್ದಾಳೆ. ಅವಳು ಮೋಟುಗೂದಲ ಜಾತಿ ನಾಯಿಯೊಂದನ್ನು ಸಾಕಿದ್ದಾಳೆ. ಅದು ಟೆರಿಯರ್ ಜಾತಿಯ ನಾಯಿ ಅವಳ ಗಂಡ ಆ ನಾಯಿಯ ಕುತ್ತಿಗೆಗೆ ಬೆಲ್ಟ್ ಕಟ್ಟಿ, ಸರಪಳಿ' ಕಟ್ಟಿ ಪ್ರತಿದಿನ ಸಂಜೆ ವಾಯುವಿಹಾರಕ್ಕೆ ಕರೆದೊಯ್ಯುತ್ತಿದ್ದ. ಒಂದು ದಿನ ನಾನು ಈ ಟೆರಿಯರ್ ಜಾತಿ ನಾಯಿಯ ಮೂಗನ್ನು ಚುಂಬಿಸಿದೆ. ಅವರ ವಿಚಾರ ಹೆಚ್ಚು ತಿಳಿಯಲು ಪಂಜದಿಂದ ಒಂದು ತಪರಾಕು ಕೊಟ್ಟೆ.

"ಏಯ್ ಇಲ್ಲಿ ನೋಡು, ಸಾರ್ವಜನಿಕ ಪ್ರದೇಶದಲ್ಲಿ ಯಾವ ಗಂಡಸೂ ನಾಯಿಗೆ ಹಾಲು ಕುಡಿಸುವುದಿಲ್ಲ. ನೀನು ಕುಂಯ್ ಕುಂಯ್ ರಾಗಮಾಡಿದರೆ ನಿನ್ನೆ ಆರೈಕೆಗೆ ಧಾವಿಸಿ ಬರುವುದಿಲ್ಲ. ಆದರೆ ನಿನ್ನ ಒಡೆಯ ಪ್ರತಿದಿನ ಸ್ವಪ್ರತಿಷ್ಠೆಯಿಂದ ಬರ್ತಾನೆ. ಒಬ್ಬ ಹವ್ಯಾಸಿ ಗಾರುಡಿಗನಂತೆ ಕಣ್ಕಟ್ಟು ವಿದ್ಯೆ ತೋರಿಸೋ ಥರಾ ಮೆರೀತಾನೆ. ಅದೆಲ್ಲ ಹೇಗೆ ಮಾಡ್ತಾನೆ? ಅದೆಲ್ಲ ಅವನಿಗೆ ಪ್ರಿಯವಾದ ಕೆಲಸ ಅಂತ ನನ್ನ ಹತ್ತಿರ ರೈಲು ಬಿಡಬೇಡ."

"ಅವನಾ?"

– ಬ್ಲ್ಯಾಕ್ ಟ್ಯಾನ್ ಟೆರಿಯರ್ ನಾಯಿ ಕೇಳಿತು

"ಏಕೆ, ಅವನು ಪ್ರಕೃತಿ ಸಹಜವಾಗಿ ನಡ್ಕೊತಾನೆ. ಮೊದಲಿಗೆ ನಾವು ಹೊರಗೆ ವಿಹಾರಕ್ಕೆ ಹೊರಟಾಗ ಅವನು ನಾಚಿಕೆಯಿಂದ ಮುದುಡಿಕೊಂಡಿರ್ತಾನೆ. ಎಂಟು ತಾಣಗಳನ್ನು ದಾಟುವ ವೇಳೆಗೆ ಅವನಿಗೆ ತನ್ನೆದುರು ಇರುವುದು ನಾಯಿಯೋ ಅಥವಾ ಮೀನೋ ಎನ್ನುವ ವ್ಯತ್ಯಾಸವೇ ತಿಳಿಯದಂತಾಗಿರುತ್ತಾನೆ. ನಾನು ಆ ತಿರುಗು ಬಾಗಿಲುಗಳನ್ನು ಹಾದು ಹೋಗುವಾಗ ನನ್ನ ಬಾಲ ಕತ್ತರಿಸಿಹೋಯಿತು – ಸುಮಾರು ಎರಡು ಅಂಗುಲದಷ್ಟು." ಟೆರಿಯರ್ ಮಾತುಕೇಳಿ ನನಗೂ ಯೋಚಿಸುವಂತಾಯಿತು.

ಒಂದು ಸಂಜೆ, ಸಮಯ ಆರುಗಂಟೆ ಆಗಿರಬಹುದು. ನನ್ನ ಒಡತಿ ಗಂಡನನ್ನು ಕರೆದು ಲವ್ವಿಗೆ ಖುಷಿಪಡಿಸುವಂಥಾದನ್ನು ಏನಾದರೂ ಮಾಡು, ಅವಳಿಗೆ ಹರ್ಷ, ಉಲ್ಲಾಸ ಆಗಬೇಕು ಹಾಗೆ. ನಾನು ಇದುವರೆಗೆ ನಿಮ್ಮಿಂದ ಗುಟ್ಟಾಗಿರಿಸಿದ್ದ ಒಂದು ಮಾತನ್ನ ಹೇಳೀನಿ. ಒಡತಿ ನನ್ನನ್ನು 'ಲವ್ವೀ' ಎಂದು

ಕರೆಯುತ್ತಿದ್ದಳು. ಟೆರಿಯರ್ ನಾಯಿಗೆ 'ಚಿಲಿಪಿಲಿ' ಅಂತ ಕರೀತಿದ್ದರು. ಮೊಲವನ್ನು ಅಟ್ಟಿಸಿಕೊಂಡು ಹೋಗೋದರಲ್ಲಿ ನಾನು ಟೆರಿಯರ್‌ಗೆ ಸರಿಸಾಟಿ ಅಲ್ಲದಿರಬಹುದು. ಆದರೆ 'ಲವ್ವೀ' ಅನ್ನೋ ಹೆಸರಿದೆಯಲ್ಲ! ನಾವು ಬಾಲ ಅಲ್ಲಾಡಿಸಿ ಹಮ್ಮೆಪಡಬಹುದಾದಂಥ ಆತ್ಮಗೌರವ ತರುವ ಹೆಸರು.

ಸುರಕ್ಷಿತವಾದ ರಸ್ತೆ, ಆಕರ್ಷಕವಾದ ಅಂಗಡಿಯೊಂದರ ಮುಂದೆ ನಾನು ಒಡೆಯನಹಿಡಿತ ಸಡಿಲಿಸಿಕೊಂಡು ಮುನ್ನುಗ್ಗುವ ಪ್ರಯತ್ನ ಮಾಡಿದೆ.

"ಏಕೆ? ಎಲ್ಲ ಹೋಗ್ತಿ?"

ಎಂದು ಅವನು ಅವಡುಗಚ್ಚಿ ಸರಪಳಿಯನ್ನು ಜಗ್ಗಿ ಹಿಡಿದ.

"ನಿನಗೇನು ಬೇಕು? ನಿಂಬೆ ಪಾನಕವ? ಅಥವಾ ನಾನೊಂದು ಪೆಗ್ ಬೇಕೆಂಬುದು ನಿನ್ನ ಮನದಿಂಗಿತವೆ?

ನನಗೆ ಗೊತ್ತು, ಅವನು ಟೇಬಲ್ ಮುಂದೆ ಕುಳಿತು ಸ್ಕಾಚ್ ಹೀರುವುದು ಗಂಟೆಗೂ ಹೆಚ್ಚು ಕಾಲ ಪರಿಚಾರಕರು ಅವನ ಸುತ್ತ ಸುಳಿದಾಡಿದ್ದೇ ಸುಳಿದಾಡಿದ್ದು, ತಿಂದುಂಡ ತುಂಡು ಮಾಂಸ–ಮೂಳೆಗಳನ್ನು ಕಡಿಯುತ್ತ, ಬಾಲ ಅಲ್ಲಾಡಿಸಿಕೊಂಡು ಅವನ ಸುತ್ತ ಕುಂಯ್ ಗುಡುವುದೇ ನನ್ನ ಹಣೆಯ ಬರಹ.

ಸ್ಕಾಚ್ ಎಲ್ಲ ಮುಗಿದ ಮೇಲೆ ಮುದುಕ ನನ್ನ ಕೊರಳನ್ನು ಸರಪಳಿಯ ಸೆರೆಯಿಂದ ಬಿಡಿಸಿ ನನ್ನನ್ನು ಆಡಲಿಕ್ಕೆ ಬಿಡ್ತಾನೆ. ಒಮ್ಮೊಮ್ಮೆ ಅವನೂ ಕುಣಿದಾಡ್ತಾನೆ. ಆಟದ ಭರದಲ್ಲಿ ಕೊರಳ ಬೆಲ್ಟ್, ಸರಪಳಿಗಳನ್ನು ರಸ್ತೆಗೆ ಎಸೆದದ್ದೂ ಉಂಟು.

ಬಡಪಾಯಿ ಡಾಗಿ' ಎಂದು ಅವನು ನನ್ನ ಮುದ್ದು ಮಾಡ್ತಾನೆ.

ನೀನು ನನ್ನ ಜಾಣ, ನೀನು ನನ್ನ ಮುದ್ದುಮರಿ, ಇನ್ನು ಅವಳೆಂದಿಗೂ ನಿನ್ನ ಚುಂಬಿಸುವುದಿಲ್ಲ. ಅಷ್ಟು ಧೈರ್ಯ ಅವಳಿಗೆಲ್ಲಿ ಬಂದೀತು? ಹೋಗು ಡಾಗಿ, ನೀನು ನನ್ನ ಮುದ್ದಿನ ಮರಿ, ಹೋಗು, ಹೋಗಿ ಯಾವುದಾದರೂ ವಾಹನದಡಿ ಸಿಕ್ಕಿಬಿದ್ದು ಸಾಯಿ... ಸತ್ತು ಸಂತಸದಿಂದಿರು."

–ಅವನ ಮುದ್ದು, ಅಕ್ಕರಾಸ್ಥೆ ಇಂಥ ಅತಿರೇಕಕ್ಕೆ ಹೋಗುವುದೂ ಉಂಟು. ನಾನು ಹೋಗಲು ನಿರಾಕರಿಸಿದೆ. ನಾನು ಅವನ ಕಾಲಸುತ್ತ ಕುಣಿದು ಕುಪ್ಪಳಿಸಿದೆ. ಪ್ರೀತಿಯಿಂದ ಕುಂಯ್‌ಗುಟ್ಟಿ ಬಾಲ ಅಲ್ಲಾಡಿಸಿದೆ.

"ಅಯ್ಯೋ ಮನೆಹಾಳ ಮುದುಕ... ನಿನಗೆ ತಿಳಿಯದೇ, ನಿನ್ನನ್ನು ಬಿಟ್ಟುಹೋಗುವ ಇಷ್ಟ ನನಗಿಲ್ಲ, ಸುತರಾಂ ಇಲ್ಲ. ನಿನಗೆ ತಿಳಿಯದೇ... ಈ ಜಂಗಲ್‌ನಲ್ಲಿ ನಾವಿಬ್ಬರೂ ನಾಯಿಕುನ್ನಿಗಳು. ಮನೆಯೊಡತಿ, ಆ ದುಷ್ಟ ಹೆಂಗಸೇ ಯಜಮಾನಿ, ಅವಳ ಮುಂದೆ ನೀನು ಪಾತ್ರೆಪಗಡಿ ತೊಳೆಯಲು ಟವೆಲ್ಲು ಹಿಡಿದು ಸಿದ್ಧನಾಗಿ ನಿಂತವನು; ನಾನೋ ದುರುಗುಟ್ಟಿ ನೋಡುವ ಅವಳ ಕೆಂಗಣ್ಣಿನಿಂದ ಕಂಬಿಕೀಳಲು ಸಾಧ್ಯವೇ ಎಂದು ಪರಿತಪಿಸುತ್ತಾ ಕುಂಯ್‌ಗುಡುವ ಪ್ರಾಣಿ. ಈ ಎಲ್ಲ ಒಣ ಹಮ್ಮುಬಿಮ್ಮುಗಳನ್ನು ಬಿಟ್ಟು ನಾವು ಕಷ್ಟಸುಖಗಳಲ್ಲಿ ಒಬ್ಬರಿಗೊಬ್ಬರು ಸಹಭಾಗಿಯಾಗಿ ಸ್ನೇಹದಿಂದಿರಬಾರದೇಕೆ?

ನನ್ನ ಭಾಷೆ ಅವನಿಗರ್ಥವಾಗಿಲ್ಲ ಎಂದು ನೀವು ಹೇಳಬಹುದು. ಇದ್ದೀತು, ಅವನಿಗರ್ಥವಾಗಿಲ್ಲ. ಆದರೆ ಅವನು ಇನ್ನೊಂದು ಪೆಗ್ ಸ್ಕಾಚ್ ಗುಟುಕರಿಸುತ್ತ ಯೋಚನಾ ಮಗ್ನನಾದ.

"ಡಾಗಿ......"

ಅವನು ಆಖ್ಯೆರಾಗಿ ಹೇಳಿದ:

"ಈ ಭೂಮಿಯಲ್ಲಿ ನಮಗೆ ಹನ್ನೆರಡು ಜನ್ಮ ಇಲ್ಲ. ನಮ್ಮಲ್ಲಿ ಎಲ್ಲೋ ಕೆಲವರು ದೀರ್ಘಾಯುಗಳು. ನಾನು ಮತ್ತೆ ಆ ಫ್ಲ್ಯಾಟ್‌ನತ್ತ ತಿರುಗಿ ನೋಡುವುದಿಲ್ಲ. ನೋಡಿದರೆ ಅಪ್ಪಚ್ಚಿಯಾದಂತೆಯೇ. ನೀನೂ ಅಷ್ಟೇ. ನಿಜಕ್ಕೂ ನನ್ನ ಮಾತು ಮಿಥ್ಯೆಯಲ್ಲ. ಅಥವಾ ಮುಖಸ್ತುತಿ, ಪ್ರಶಂಸೆಗಳೂ ಅಲ್ಲ. ಒಂದಕ್ಕೆ ಆರುವತ್ತು ಪಟ್ಟು ಪಣಕಟ್ಟೇನಿ. ವೆಸ್ಟ್ ವಾರ್ಡ್ ಹೋ ಡಾಕ್ಸ್‌ಹುಂಡ್‌ಗಿಂತ ಒಂದು ಮಾರು ಅಂತರದಲ್ಲಿ ಗೆಲ್ಲುತ್ತೆ."

ನನ್ನ ಕುತ್ತಿಗೆಯಲ್ಲಿ ಸರಪಳಿಯ ಬಂಧನ ಇರಲಿಲ್ಲ. ನಾನು ಒಡೆಯನ ಸುತ್ತ ಉಲ್ಲಾಸದಿಂದ ನಲಿದಾಡಿದೆ. ಇಪ್ಪತ್ತೊ್ಮ್ಮ ್ತರನೇ ರಸ್ತೆಗುಂಟ ಕುಣಿದು ಕುಪ್ಪಳಿಸಿ ಸಂಭ್ರಮಪಟ್ಟೆ. ಎದುರಾದ ಬೆಕ್ಕು ಮೊದಲಾದ ಪ್ರಾಣಿಗಳು ಧನ್ಯವಾದ ಹೇಳಿದವು. ಬುದ್ಧಿಯುಳ್ಳ ಅವಕ್ಕೆ ತಾವು ನನಗೆ ಕೃತಜ್ಞತೆಯಿಂದಿರಬೇಕು ಎಂಬ ಜ್ಞಾನೋದಯವಾಗಿತ್ತು.

ಹಾದಿಯಲ್ಲಿ ಸಿಕ್ಕವನೊಬ್ಬನಿಗೆ ನನ್ನ ಒಡೆಯ "ನಾವು ರಾಕಿ ಪರ್ವತಕ್ಕೆ ಹೋಗ್ತಿದ್ದೇವೆ" ಎಂದು ಹೇಳಿದ.

ಆದರೆ ಮುದಿಯ ನನ್ನ ಕಿವಿ ಹಿಂಡಿ ಹೇಳಿದ್ದೆಂದರೆ:

"ಎಲೇ, ದರಿದ್ರ ಪ್ರಾಣಿಯೇ, ಮಂಗನಂಥ ಪ್ರಾಣಿಯೇ, ನನ್ನ ತೊತ್ತಿನ ಮಗನಂಥ ಪ್ರಾಣಿಯೇ, ನಾನು ನಿನ್ನ ಏನಂತ ಕರೀತೀನಿ ಅಂಬೋದು ಗೊತ್ತುಂಟಾ?"

"ಲವ್ವೀ"

ಎಂದೇ ಇರಬೇಕು ಎಂದುಕೊಂಡು ಗೋಳುಕರೆಯ ದನಿಯಲ್ಲಿ ಬವ್‌ಬವ್ ರಾಗ ಎಳೆದೆ.

"ನನ್ನ ಸೊಕ್ಕಿನ ಮುದ್ದೇ ಅಂತ ಕರೀತೀನಿ"

ಒಡೆಯ ಹೇಳಿದ.

ನನಗೆ ಐದು ಬಾಲ ಇದ್ದಿದ್ದರೂ, ಈ ಸಂದರ್ಭದಲ್ಲಿ ಗೌರವಸೂಚಿಸಿ ಅಲ್ಲಾಡಿಸುತ್ತಾ ಸಂತಸದಿಂದ ಕುಂಯ್‌ಗುಡಲು ಅವು ಸಾಕಾಗುತ್ತಿರಲಿಲ್ಲ.

## ಮಾರುಕಟ್ಟೆ

**ಆಶಯ:** **ಮುಂಬಯಿ ಜೀವನ**

**- ಶಂಕರ ಮೊಕಾಶಿ ಪುಣೇಕರ**

ಬಿಳಿ ತೊಗಲಲಿ ಬಿಳಿ ಹೆಗಲಲಿ ಬಿಳಿ ಕಾಲರದೊಳಗೆ
ಇಳಿಚಣ್ಣವು ಬಿಳಿಬಣ್ಣವು ಬಿಳಿ ಕೂದಲದೊಳಗೆ
ಬಿಳಿ ಜಾಕಿಟ್ ಬರಿ ಪಾಕಿಟ ಕೈಯಲಿ ಬಿಳಿಬತ್ತಿ
ಕಣ್ಣಿಗೆ ಬಿಳಿ ಕನ್ನಡಕವು ಮೇಲಕೆ ಬಕನೆತ್ತಿ
ಬಾಯೊಳು ಬಿಳಿ ಭಾಷೆಯ ಸುಳಿ ಹುಳಿಬಣ್ಣವ ತೊಟ್ಟು
ಅವತರಿಸಿದೆ ಭಾವ ತರಿಸಿದೆ ಬ್ಲಡಿ ಬ್ಲಡಿ ಡ್ಯಾಮಿಟ್ಟು
ಬಿಳಿಹಾಳಿಯ ಕರಿಗೊಳಿಸುವ ಕೆಲಸವು ದಿನದಿನವೂ
ಬಿಳಿತೋಳಿಗೆ ಕರಿ ಸೋಂಕದು ಅದು ನಮ್ಮಯ ಪಣವು
<u>ಚರ್ಚಸೇಟಲಿ</u> ರಮ್ಮಿಯಾಟವು ದಹಿಸಾರದ ತನಕ
ತುಸು ದೊರಕಿತು ತುಸು ಕಳೆಯಿತು; ಬಂದದ್ದೋ? ಬೆನಕ
ಕೆಲಸವು ಬೇಸರವಾದದು ಬೇಸರ ವಿಶ್ರಾಂತಿ
ವಿಶ್ರಾಂತಿಯ ನೆಪಕಾಗಿಯೆ ತುಸು ಕೆಲಸದ ಬ್ರಾಂತಿ
ಬೀದಿಯ ಮುಖ– ದರ್ಶನಸುಖ, <u>ಮದುವೆಯೆ ಒಲ್ಲವರು</u>
ಮಧುಬಾಲೆಯ ಹೊಸ ಬ್ರ್ಯಾಂಡನು ಬಲ್ಲವರು
ನಮ್ಮಂತಹದಿನ್ನೆವರು ಇಹ ಚಪ್ಪರ ಮನೆಯು
ಮರುಳುವೆವೆನೆ ಭಗಭಗ ನೆಲ; ಬೇಡವೆ ರಂಜನೆಯು?
ಸಿನೆಮಾ ಕ್ಯೂ ಬಸ್ಸಿನ ಕ್ಯೂ ಲಿಫ್ಟಿನ ಕ್ಯೂ ಉದ್ದು
ಕೈ ತದಕಲು ಮೈ ಬದುಕಿತು; ಆದ ದಿನದಾ ಜಿದ್ದು

ಹಣವಿಲ್ಲದ ಸಂಕಟದಲಿ ಹರತಾಳವು ಸಂಪು
ರಿವಿಜನ್ನಿನ ರಿವಿಜನ್ನಾಗಲಿ ಎನ್ನುವ ರಂಪು
ನಮಗಾಗದ ಕೆಲಸವು ಅದೆ ನಮಗಾದನ್ಯಾಯ
ನೌಕರಿ ಕೊಟ್ಟವರನು ಮುಳುಗಿಸುವದು ನಿಜಧ್ಯೇಯ

## 1. ಮೀನು ಪೇಟೆ

- ಸು.ರಂ. ಎಕ್ಕುಂಡಿ

–1

ಕೊಳೆತು ನಾರುತಿರುವುದಿಲ್ಲಿ
ಹಳಸಿಹೋದ ಮೀನವು
ಕುಳಿತು ಮಾರುತಿರುವದಿಲ್ಲಿ
ಜೀವ ದುಃಖಮ್ಲಾನವು
ದೈನ್ಯ ಸಾರುತಿರುವದಿಲ್ಲಿ
ಬಂಡವಲಿನ ಬುಟ್ಟಿಯಲ್ಲಿ
ಜೀತವಾಗಿ ಹುಟ್ಟಿದಲ್ಲಿ
ಬದುಕು ನಿತ್ಯದೀನವು.
ಬೆಳಗು ಬಂತು
ಸಂಜೆ ಬಂತು
ವರುಷ ವರುಷ ಕಳೆದರೂ
ಹರೆಯ ಮುಪ್ಪು ಕಳೆದರೂ
ತೆಂಗಿನ ಸಸಿ ಬೆಳೆದರೂ
ಬುಟ್ಟಿ ಮೀನ ಕೊಳೆತರೂ
ಹರುಷಗಿರುಷ ದೊರೆಯಲಿಲ್ಲ
ಇವರ ಬಾಳ ಹಂತಕೆ'
ಈ ಬದುಕಿನ ಪಂಥಕೆ.

–2

ಇಲ್ಲಿ ಸಾಲು ಕುಳಿತ ಹೆಣ್ಣು
ಎಲ್ಲೊ ಮುಗಿಲಿನತ್ತ ಕಣ್ಣು
ಕುಳಿತರಿಲ್ಲಿ ಮತ್ಸ್ಯಗಂಧಿ
ಉಟ್ಟುಕೊಂಡು ಹರಕು ಚಿಂದಿ,
ನೊಂದ ಜೀವ ನೂಲುತಿತ್ತು
ಸುಖಸ್ವಪ್ನದರ್ಶನ
ಬಯಸಿತದರ ಸ್ಪರ್ಶನ.
ಕಡಲಿನಾಚೆ ತೇಲುತಿತ್ತು
ಮಝುವೆ! ಹಾಯ ಹಿಗ್ಗಿಸಿ
ಹರಯ ಮುಪ್ಪು ತಗ್ಗಿಸಿ
ರಂಪಿಣಿ ಬಲೆ ಬೀಸಿದಲ್ಲಿ
ಒಡಲೆ ನನ್ನ ಕರೆಯಿತು.
ಗಾಳಿ ಕಡಲನೀಸಿದಲ್ಲಿ
ದುಃಖ ಲಿಪಿಯ ಬರೆಯಿತು.
ಬಂಡವಲಿನ ಬುಟ್ಟಿಯಲ್ಲಿ
ಜೀತವಾಗಿ ಹುಟ್ಟಿದಲ್ಲಿ
ಬಲೆಗೆ ಬಿದ್ದ ಮೀನದಂತೆ
ವಿಲಿವಿಲಿ ಮಣಿದಾಡಿದೆ.
ಕೊಳೆತ ಬದುಕು ಬಾಡಿದೆ

ತಂದ ಮೀನ ಕೊಳೆತರೂ

ಬಾಲ್ಯ ಹರೆಯ ತಳೆದರೂ

ಹರುಷಗಿರುಷ ದೊರೆಯಲಿಲ್ಲ

ಇವರ ಬಾಳ ಹಂತಕೆ

ಈ ಬದುಕಿನ ಪಂಥಕೆ

## 2. ಲೂಟಿ

**– ಬಿ.ಟಿ. ಲಲಿತಾನಾಯಕ್**

ಪ್ರಕೃತಿ ಕೆಂಡ ಉಗುಳಿದಂತೆ ಇಡೀ ವಾತಾವರಣವೇ ಬಿಸಿಲಿನಿಂದ ಕಾದು ಹಬೆಯಾಡತೊಡಗಿತ್ತು. ಕಣ್ಣು ಹಾಯಿಸಿದಲ್ಲೆಲ್ಲ ಬಿರುಕು ಬಿಟ್ಟ ಒಣ ನೆಲ, ಇನ್ನೇನು ಸಿಡಿದುಬಿಡಬಹುದು ಎನಿಸುವಂತೆ ಅಲ್ಲಲ್ಲಿ ಗೋಚರಿಸುವ ಕರಿಯ ಕಲ್ಲುಬಂಡೆಗಳು–ಇವುಗಳ ನಡುವೆ ತಾನೂ ಒಂದು ಉರಿವ ಕೊಳ್ಳಿಯಾಗಿ, ಎಡಹೆಗಲ ಮೇಲೆ ಕೈಗೊಡಲಿ ಇಟ್ಟು ಸರಸರನೆ ಮುನ್ನಡೆಯತೊಡಗಿದ್ದಳು ರಾಮಿ.

ಹೆಜ್ಜೆ ಇಟ್ಟಾಗೊಮ್ಮೆ ಕಾಲಂದುಗೆಯ ಕಿರುಗೆಜ್ಜೆಗಳು ಸಣ್ಣದಾಗಿ ದನಿ ಕೊಡುತ್ತಿದ್ದುವಾದರೂ ಅದರತ್ತ ಅವಳಿಗೆ ಲಕ್ಷವಿರಲಿಲ್ಲ. ತನ್ನ ಅಂದುಗೆಯ ನಾದಕ್ಕೆ ತಾನೇ ರೋಮಾಂಚಿತಳಾಗುತ್ತಿದ್ದ, ಪುಲಕಗೊಳ್ಳುತ್ತಿದ್ದ ಕಾಲವೂ ಒಂದಿತ್ತು.

ಸುಮಾರು ಹತ್ತು ವರುಷಗಳ ಹಿಂದೆ ಅವಳು ಖೀರುವಿನ ಕೈ ಹಿಡಿದಾಗ ಅಂತಹ ಸುಖವನ್ನು ಅನುಭವಿಸಿದ್ದಳು. ತೌರು ಮನೆಯವರು ಕೊಟ್ಟಿದ್ದ ಕೆಲವೇ ಬೆಳ್ಳಿ ಆಭರಣಗಳನ್ನು ಧರಿಸಿಕೊಂಡು ಹುರುಪಿನಿಂದ ಓಡಾಡುತ್ತಿದ್ದಳು. ಹರ್ಷದಾಯಕವಾಗಿದ್ದ ವರ್ತಮಾನದ ದಿನಗಳ ಹೊರತು ತಪ್ಪಿಯೂ ಭೂತ ಭವಿಷ್ಯತ್ತುಗಳ ಚಿಂತೆ ಆಗ ಅವಳ ಮನದಲ್ಲಿ ಸುಳಿಯುತ್ತಿರಲಿಲ್ಲ.

ವರುಷಗಳ ಉರುಳಿದವು. ಆಕೆ ಮೇಲೆ ಮೇಲೆ ಬಸುರಿ ಬಾಣಂತಿಯಾಗಿ ನಾಕೈದು ಮಕ್ಕಳ ತಾಯಿಯೂ ಆದಳು. ತನ್ನಲ್ಲಿ ಪುಟಿಯುತ್ತಿದ್ದ ಸುಖ–ಸಂಭ್ರಮದ ಸೆಲೆಯೊಂದು ಸುಳಿವು ಕೊಡದೆ ಬತ್ತಿ ಹೋಗಿದ್ದರ ಬಗ್ಗೆ ಯೋಚಿಸಲೂ ಅವಳಿಗೆ ಬಿಡುವಿರಲಿಲ್ಲ.

ಹೆಂಡತಿಯನ್ನು ಹೊಡೆದು ಬಡೆದು ಪೀಡಿಸುವ ಬೇರೆ ಗಂಡಸರಿಗೆ ಹೋಲಿಸಿದರೆ, ಖೀರು ಅವರುಗಳಿಗಿಂತ ಎಷ್ಟೋ ಪಾಲು ಒಳ್ಳೆಯವನು. ಭಾರಿ ಸಿಟ್ಟು ಬಂದ ಹೊರತು ಆತ ಹೆಂಡತಿಯ ಮೇಲೆ ಕೈ ಮಾಡುತ್ತಿರಲಿಲ್ಲ. ಸ್ವಂತ ಜಮೀನು ಇಲ್ಲದ್ದರಿಂದ ಕೂಲಿನಾಲಿ ಮಾಡಿ ಹೆಂಡತಿ, ಮಕ್ಕಳ ಹೊಟ್ಟೆ ತುಂಬಿಸಲು ಹೆಣಗಾಡುತ್ತಿದ್ದ.

ರಾಮಿ ಐದನೆಯ ಹೆರಿಗೆಯಲ್ಲಿ ಆಪರೇಷನ್ ಮಾಡಿಸಿಕೊಂಡ ನಂತರ ದಂಪತಿಗಳಿಗೆ ಮಕ್ಕಳಾಗುವ ಆತಂಕ ದೂರವಾಗಿತ್ತು. ಇನ್ನು ತಾವಿಬ್ಬರೂ ದುಡಿದು ಮಕ್ಕಳನ್ನು ಸಾಕಬಹುದೆಂಬ ಧೈರ್ಯ

ಉಂಟಾಗಿತ್ತು. ಆರು ತಿಂಗಳ ಕೂಸಿಗೆ ಹೊಟ್ಟೆ ತುಂಬ ಎದೆ ಹಾಲೂಡಿಸಿ, ಎಂಟೊಂಬತ್ತು ವರ್ಷದ ತನ್ನ ಹಿರಿಯ ಮಗಳ ವಶಕ್ಕೆ ಅದನ್ನು ಒಪ್ಪಿಸಿ ಆಕೆ ಗಂಡನೊ ಕೂಲಿಗೆ ಹೊರಡುತ್ತಿದ್ದಳು.....

ಆ ಕಾಲ ಕಳೆದು ಮಗು ಒಂದೂವರೆ ವರುಷದ್ದಾಗಿದೆ. ತಾಯಿಯ ಎದೆಹಾಲು ಅದಕ್ಕೇನೇನೂ ಸಾಲದು. ಉಣ್ಣುವ ಆರೇಳು ಬಾಯಿಗಳಲ್ಲಿ ಈಗ ಅದೂ ಒಂದು, ಹೀಗಾಗಿ ತಿನ್ನುವುದರಲ್ಲಿ ಕೂಡುಲೆಕ್ಕವಾದರೆ, ದುಡಿಯುವ ಕೈ ಮುರಿದು ಮೂಲೆ ಸೇರಿದೆ.

ಕಳೆದ ಮೂರು ವಾರಗಳ ಹಿಂದೆ ಖೀರು ಗೌಡರ ಹೊಲಕ್ಕೆ ಗೊಬ್ಬರ ಹೇರಲು ಒಪ್ಪಿಕೊಂಡಿದ್ದ. ತಿಪ್ಪೆಯಿಂದ ಮೈಲು ದೂರದಲ್ಲಿದ್ದ ಹೊಲಕ್ಕೆ ಹೆದ್ದಾರಿಯಿಂದಲೇ ಹೋಗಬೇಕಾಗಿತ್ತು. ಬಂಡಿ ಹೊರಳಿಸಲು ಒಂದೆರಡು ಮಾರು ದೂರ ಮಾತ್ರ ಉಳಿದಿರುವಾಗ, ಹಿಂದಿನಿಂದ ಬಂದ ಲಾರಿಯೊಂದು ಬಂಡಿಯ ಒಂದು ತುದಿಗೆ ಗುದ್ದಿ ಉರುಳಿಸಿ ಅದೇ ವೇಗದಲ್ಲಿ ಮುಂದೆ ಹೊರಟು ಹೋಗಿತ್ತು.

ಪ್ರಜ್ಞೆ ತಪ್ಪಿ ಬಿದ್ದಿದ್ದ ಖೀರುವನ್ನು ಗೌಡರು ಸರ್ಕಾರಿ ದವಾಖಾನೆಗೆ ಒಯ್ದು, ಪ್ರಥಮ ಚಿಕಿತ್ಸೆ ಕೊಡಿಸಿ, ಮನೆಗೆ ಕಳುಹಿಸಿ ಕೈ ತೊಳೆದು ಕೊಂಡರು. ಪಕ್ಕೆ ನೋವೆಂದು ಗೋಳಾಡುವ ಗಂಡನನ್ನು ರಾಮಿ ವೈದ್ಯರ ಬಳಿ ಕರೆದೊಯ್ದು ತೋರಿಸಿದಾಗ, 'ಪಕ್ಕೆಲುಬು ಮುರಿದಿರಬಹುದು. ಇಲ್ಲಿ ಗುಣ ಆಗೋದಿಲ್ಲ. ಪಟ್ಟಣದ ದೊಡ್ಡ ದವಾಖಾನೆಗೆ ಒಯ್ಯಿ' ಎಂದು ಸಲಹೆ ಮಾಡಿದರು.

ರಾಮಿ ಗೌಡರ ಪಾದ ಹಿಡಿದು ಸಹಾಯ ಕೋರಿದಳು. "ಖರೆ ಬಿಡು. ನೀ ಹೇಳೋಹಂಗ ಅಂವ ಗುಣ ಆದನಂದ್ರ ನನ್ನ ಮನಿ ಜೀತ ಗೇಯ್ದಾರೆ ಸಾಲ ತೀರಿಸ್ತಾನ. ಆದ್ರೆ ಸತ್ತನಂದ್ರ ಯಾರು ತೀರಿಸ್ತಾರ? ನೀ ಅನಕ ಮಕ್ಕಳಾಕಿ. ಅವರ ದೇಖು ರೇಖು ಮಾಡೂಧ ರಗಡಾಗ್ತದ, ಇನ್ನ ನನ ಸಾಲದ ಗತಿ?"

"ಹೆಂಗಾರ ತೀರಿಸ್ತೀನಿ ಒಡೆಯ. ಕಷ್ಟದ ಕಾಲದಾಗ್ ಕೈ ಹಿಡಿರಿ  ಧಣಿ!" ಎಂದು ರಾಮಿ ಪರಿಪರಿಯಾಗಿ ಬೇಡಿದ್ದು ವ್ಯರ್ಥ ಪ್ರಲಾಪವಾಗಿ, ಗೌಡನಿಂದ ಬೈಗುಳ ತಿಂದು ಹಿಂದಿರುಗಬೇಕಾಯಿತು...?

ತನ್ನ ಮುಂದಿನ ಹಾದಿ ಎರಡು ಕವಲಾಗಿ ಸೀಳಿದ್ದನ್ನು ಗಮನಿಸಿದ ಆಕೆ ನಡಿಗೆಯನ್ನು ನಿಧಾನಗೊಳಿಸಿ ಯೋಚಿಸತೊಡಗಿದಳು. – ಯಾವ ಹಾದಿ ಹಿಡಿಯಲಿ? ನದಿ ದಂಡೆಯದೋ, ದುರ್ಗದ್ದೋ? ಯಾವುದನ್ನೂ ಬೇಗನೆ ನಿರ್ಧರಿಸಲಾಗದೆ ಗೊಂದಲಕ್ಕೆ ಬಿದ್ದಳು.

ಇದುವರೆಗೂ ತಾನೆಂದೂ ಒಂಟಿಯಾಗಿ ದುರ್ಗದ ಅಡವಿಗೆ ಹೋಗಿಲ್ಲ. ತಾಂಡದ ಹತ್ತಾರು ಹೆಂಗಸರು–ಗಂಡಸರು ಒಟ್ಟಾಗಿ ಹೊರಡುವಾಗ ತಾನೂ ಅವರೊಂದಿಗೆ ಹೋಗಿ ಸೌದೆ ಹೊರೆ

ಕಟ್ಟಿಕೊಂಡು ಗುಂಪಿನೊಡನೆ ಹಿಂದಿರುಗುತ್ತಿದ್ದಳು. ಆದರೆ ಈ ದಿನ ಜೊತೆಗಾರ್ತಿಯರೆಲ್ಲಾ ಹೊರೆ ಕಟ್ಟಿಕೊಂಡು ಹಿಂದಿರುಗಿ ಬಿಟ್ಟಿದ್ದಾರೆ. ಕೆಲವರಾಗಲೇ ಪೇಟೆಗೆ ಹೋಗಿ ಹೊರೆ ಮಾರಾಟ ಮಾಡಿ ಮನೆ ಸೇರಿಕೊಂಡಿದ್ದೂ ಆಗಿದೆ....

ತಾಂಡದ ಕಡೆಯಿಂದ ಯಾರೋ ಗಂಡಸೊಬ್ಬ ವೇಗವಾಗಿ ಬರುತ್ತಿರುವುದು ಕಾಣಿಸಿದಾಗ, ದುರ್ಗದ ಕಡೆ ಹೊಂಟವನೇ ಇರಬಾರದೇಕೆ? ಎಂಬ ಆಶಾಭಾವದಿಂದ ಅತ್ತ ದಿಟ್ಟಿಸಿ ನೋಡಿದಳು. ಬರುತ್ತಿರುವವನು ಕಾಳು ಎಂಬುದು ತಿಳಿದು ಅವಳ ಮುಖ ಒಂದಷ್ಟು ಅರಳಿತು. ಆದರೆ ಅವನ ಕೈಲಿ ಕೊಡಲಿ ಇಲ್ಲದ್ದನ್ನು ಕಂಡು ನಿರಾಶೆಯಾಯಿತು.

"ಯಾಕೆ ಬಾಯಿ, ಒಬ್ಬಕಿನ್ಯ ಹೊಂಟೀಯಲ್ಲ ಕಟಗಿಗಿ?" ಎಂದು ಕಾಳು ವಿಚಾರಿಸಿದ.

"ಏನ್ಮಾಡಲಣ್ಣಾ, ನನ್ನ ನಸೀಬು ಅಗದಿ ಖೊಟ್ಟ ಐತಿ, ಹಿರಿಯಗಇನ್ನಾದರೂ ಆರಾಮ ಆಗೂವಲ್ದು..... ಪಕ್ಕೆ ಬ್ಯಾನೆ ಅಂತ ಒಂದೇ ಸಮನೆಒದರಾಡ್ತಾನ. ಸಣ್ಣ ಕೂಸಿಗೆ ಜ್ವರ ಬ್ಯಾರೆ ಬಂದಾವ. ಅದಕ್ಕೇ ಮುಂಜಾನೆಎಲ್ಲರ ಕೂಡ ಹೊಂಡಲಿಕ್ಕಾಗಲಿಲ್ಲ!" ಎಂದು ತನ್ನ ಸಂಕಟ ತೋಡಿಕೊಂಡಳು.

"ದುನಿಯಾದೊಳಗ ಯಾರೂ ಬಂಡಿಯಿಂದ ಬೀಳಂಗೇ ಇಲ್ಲೇನು ಬಾಯಿ?! ಚಾಲು ಇದ್ದ ಮೋಟರ್‌ಗಾಡಿಯಿಂದ ಬಿದ್ರೂ ಸೈತ ಒಂದು ವಾರಕ್ಕೆಲ್ಲ ಆರಾಮವಾಗಿ ಕುಂಟ ಹಿಡಿದು ದಗದ ಮಾಡಲಿಕ್ಕ ಹತ್ಯಾನ–ಆ ಭೀಮಪ್ಪನ ಮಗ! ಈತಗೇನಾತು ಅಂತೀನಿ!"

"ಎಂಥ ಮಾಯದ್ದು ಬಂದು ಅಮರಿಕೊಳ್ತು ಅಂತ ಹೇಳಣ್ಣಾ! ದೊಡ್ಡ ದವಾಖಾನಿಗ ಒಯ್ಯಬೇಕಂದ್ರ ಕೈಯಾಗ ರೊಕ್ಕಿಲ್ಲ. ಗೌಡ್ರ ಬಲ್ಲಿ ಬೇಡಾಕ ಹ್ವಾದ್ರೆ ಬೇದು ಕಳಿಸಿಬಿಟ್ರು!"

"ಮೈ ಮುರ್ದು ದಗದಾ ಮಾಡಿದೋರಿಗೇ ರೊಕ್ಕ ಬಿಚ್ಚಲಿಕ್ಕವಲ್ಲೆಅಂತಾನ ಆ ಮಗ. ಇನ್ನು ನಿನಗ ಹ್ಯಾಂಗ ಕೊಟ್ಟಾನು ಬಿಡು.... ಹಂಗಾರ ಇರಲಿ, ಸೇವಾಲಾಲನ ಗುಡಿಗ ಹೋಗಿ ಖೀರುಗ ಒಂದಿಷ್ಟು ಧುಳ್ತಾ (ಬೂದಿ)ಪರಸಾದ ಕೊಡ್ಸು, ನಮ್ಮಜ್ಜ ಮುತ್ತಜ್ಜೊರೆಲ್ಲಾ ಜಡ್ಡಾದ್ರ ದವಾಖಾನಿಗ'ಹೋಗ್ತಿದ್ರೇನು? ಎಷ್ಟೊತ್ತಾಗ್ಲಿ ಆ ಸ್ವಾಮಿ ಪಾದಕ್ಕೆ ಶರಣಾಗ್ತಿದ್ರು, ಹೌದಿಲ್ಲೋ?

"ಈಗ ನಾ ಆದ್ರೂ ಅದ್ನೇ ಮಾಡ್ಸೀನಲ್ಲ ಕಾಳಣ್ಣ, ಬರೋ ಅಮಾಸಿಗ ಗದ್ಯಮ್ಮಗ ಒಂದ್ ಹುಂಜ ಕೊಡ್ತೇನಿ ಅಂತ ಬೇಡಿಕೊಂಡೀನಿ; ಮಠದಯ್ಯಗ ಮುಡಿಪು ಕಟೀನಿ."

“ಬಾಬಣ್ಣನ ಹತ್ರ ಒಂದಿಷ್ಟು ಮಂತ್ರ ಹಾಕ್ಸಿಬಿಡು ಬಾಯಿ, ಗಾಳಿಗೀಳಿ ಮೆಟ್ಟಕೊಂಡ್ಯೆತೋ ಏನೋ....” ಎಂದು ಆತ ಮತ್ತೊಂದು ಹೊಸ ಸೂಚನೆನೀಡಿದಾಗ, ಆಕೆ ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ. ಈಗಾಗಲೇ ತನ್ನಮೂಗಿನಲ್ಲಿದ್ದ ಚಿನ್ನದ ಮುಕುರವನ್ನೂ ಗಂಡನ ಸಲುವಾಗಿ ಮಾರಿದ್ದಾಗಿತ್ತು.ಈಗ ಉಳಿದಿರುವುದು ಇದೊಂದೇ ಎಂದು ತನ್ನ ಕಾಲಂದುಗೆಯನ್ನು ನೋಡಿಕೊಂಡಳು.

“ರಸ್ತೆ ದಗದ ಸುರುವಾಗತೈತಿ ಅಂತ ಆವತ್ತು ನೀ ಅಂದಿದ್ಯಲ್ಲಣ್ಣಾ?” ಎಂದು ಆಕೆ ಪ್ರಶ್ನಿಸಿದಾಗ ಬರೋ ಸ್ವಾಮಾರದಿಂದ ಸುರುವಾಗತೈತಿ. ಅದರ ಸಂಬಂಧನೇ ಸುಣಕಲ್ ಮೇಸ್ತ್ರಿ ಕಡೆ ಹೊಂಟೀನಿ. ಎಷ್ಟು ಆಳು ಬೇಕಂಬೋದನ್ನ ಕೇಳಿ, ಹೆಸರು ಹಚ್ಚಿಸಿ ಬರ್ತೇನಿ” ಎಂದ ಕಾಳು.

“ಹಂಗಾದ್ರ ನಿನಗ ಪುಣ್ಯ ಬರ್ತದ, ನನದೊಂದ್ ಹೆಸರು ಹಚ್ಚಿ ಬಾಯಣ್ಣ. ನನಪಾಡು ಏನಂಬೂದು ನಿನಗ ಚಲೋತ್ತನಾಗಿ ತಿಳಿದೈತಿ!” ಎಂದು ವಿನಂತಿಸಿಕೊಂಡಳು.

“ಯದಕ್ಕಗೊತ್ತಿಲ್ಲ ಬಿಡು ಬಾಯಿ. ನಮ್ಮಂಥ ಗರೀಬರ ಹಣೆಬರವೆಲ್ಲಾ ಈಟೇ ನೋಡು. ಏಳು ಗುಡ್ಡ ಸುತ್ತಾಡಿ ತುಕಡಿ ರೊಟ್ಟಿ ಕಾಣಬೇಕಾಗೈತಿ ಎಂದು ನಿಟ್ಟುಸಿರಿಟ್ಟು, “ನೀ ಏನು ಈಗ ನದಿ ದಂಡಿಗೆ ಹೊಂಟದಿ?” ಎಂದು ವಿಚಾರಿಸಿದ.

“ಇಲ್ಲಣ್ಣ, ದುರ್ಗಕ್ಕೆ ಹೋಗಬೇಕಂತ ಮಾಡೀನಿ” ಎಂದು ಆಕೆ ಹೇಳಿದೊಡನೆ ಕಾಳು ಆತಂಕದಿಂದ ನುಡಿದ– “ಬ್ಯಾಡ ಬಾಯಿ, ಒಬ್ಬಾಕಿನೇ ಅಲ್ಲಿಗ್ ಹೋಗಬ್ಯಾಡ, ಅಡವಿಗ ತೋಳ ಬಂದಾವ, ಕಲ್ಡಿ ಬಂದಾವ, ಮನ್ನರನ್ನ ಎತ್ತಿಕೊಂಡ್ ಹೋಗಲಿಕ್ಕೆ ಹತ್ಯಾವಂತ ಮಂದಿ ಹೇಳಲಿಕ್ಕ ಹತ್ಯಾರ. ಆ ರತ್ನಿಬಾಯಿ, ಧೀರಜ್ಜಿ ಎಲ್ರು ಕಣ್ಣಾರೆ ಕಂಡು ಬಂದಾರಂತ! ಸುಮ್ನೆ ನದಿ ದಂಡಿಗ ಹೋಗು” ಎಂದು ಸಲಹೆ ನೀಡಿ ಆತ ತನ್ನ ದಾರಿ ಹಿಡಿದ.

ರಾಮಿ ಪುನಃ ಗೊಂದಲಕ್ಕೀಡಾದಳು. ಸಮೀಪದ ನದಿದಂಡೆಗೆ ಹೋದರೆ ದಪ್ಪ ಕಟ್ಟಿಗೆಯಂತೂ ಸಿಗುವುದಿಲ್ಲ. ಬರೀ ಪುರಲೇ ಕಟ್ಟಿಗೆಯಷ್ಟೇ ಆಯ್ದು ತರಬೇಕು. ಕೊಳ್ಳುವ ಗಿರಾಕಿಗಳು ಅದನ್ನು ಒಂದೆರಡು ರೂಪಾಯಿಗಿಂತಲೂ ಹೆಚ್ಚು ಬೆಲೆಗೆ ಕೇಳುವುದೇ ಇಲ್ಲ. ಅಷ್ಟು ಕಡಿಮೆ ರೊಕ್ಕದಲ್ಲಿ ಜೋಳ ಕೊಳ್ಳುವುದೆಂತು? ಉಪ್ಪು ಮೆಣಸಿಗೂ ಸಹಿತ ಸಾಲುವುದಿಲ್ಲ.... ದುರ್ಗಕ್ಕೆ ಹೋದರೆ ದಪ್ಪ ದಪ್ಪನೆಯ ಒಣ ಕಟ್ಟಿಗೆ ತರಬಹುದು. ಐದು ರೂಪಾಯಿಗಳವರೆಗೂ ಗಳಿಸಬಹುದು!.... ತೋಳ ಕರಡಿ ಅಂತ ಅಂಜಿಸುತ್ತಿದ್ದಾರಲ್ಲಾ... ಹಾಡು ಹಗಲಿನಾಗ ಅವು ತನ್ನನ್ನೇನು ಮಾಡಿಯಾವು? ಹಂಗೇನಾದರೂ ಕಾಣಿಸಿದರೆ ಓಡಿ ಬಂದು ಬಿಟ್ಟರಾಯಿತು... ರಾಮಿ ದೃಢ ನಿರ್ಧಾರ ತಳೆದು ಸರಸರನೆ ಹೆಜ್ಜೆ ಹಾಕಿದಳು.

ಚಿರಪರಿಚಿತವಾದ ಹಾದಿ ಅರ್ಧ ತಾಸಿನಲ್ಲಿ ಸವೆದು, ಕಾದು ಹೋಗಿದ್ದ ಭೂಪ್ರದೇಶ ಕೊನೆಗೊಂಡಿತೆಂಬಂತೆ ವಿರಳವಾಗಿ ಗಿಡಗಂಟೆಗಳು ಕಾಣಿಸತೊಡಗಿದುವು! ಎತ್ತೆತ್ತರಕ್ಕೆ ಬೆಳೆದು ನಿಂತ ವಿವಿಧ ಜಾತಿಯ ಮರಗಿಡ, ಮುಳ್ಳು ಬೇಲಿ, ಮಳೆ–ಪೊದೆಗಳು ದಟ್ಟೈಸುತ್ತ ಬಂದು ಆಕೆಯ ನಡಿಗೆ ನಿಧಾನಗೊಂಡಿತು. ಅಂಕುಡೊಂಕಿನ, ಏರು ತಗ್ಗಿನ ಕಠಿಣವಾದ ಮಾರ್ಗದಲ್ಲಿ ಅತಿ ಎಚ್ಚರಿಕೆಯಿಂದ ಕ್ರಮಿಸುತ್ತ ಕಟ್ಟಿಗೆ ಶೋಧೆಗೆ ತೊಡಗಿದಳು.

ಅಲ್ಲೊಂದು ಇಲ್ಲೊಂದು ಒಣ ಕಟ್ಟಿಗೆಯ ತುಂಡುಗಳು ಕಾಣಿಸಿದ್ದನ್ನೂ ಹಿಗ್ಗಿನಿಂದ ಸಂಗ್ರಹಿಸತೊಡಗಿದಳು. ದೊಡ್ಡದೊಂದು ಪೊದೆಯ ನಡುವೆ ಗೆದ್ದಲು ಹತ್ತಿದ ಒಣಮರವೊಂದನ್ನು ಕಂಡು ಲಗುಬಗೆಯಿಂದ ಅದರತ್ತ ನುಗ್ಗಿದಳು. ಕೈಗೆಟುಕುವ ರೆಂಬೆ ಟೊಂಗೆಗಳನ್ನೆಲ್ಲ ಕೊಡಲಿಯಿಂದ ಕಡಿ ಕಡಿದು ಒಂದೆಡೆ ರಾಶಿ ಹಾಕುತ್ತಿರುವಾಗ, ಪೊದೆಯಲ್ಲಿ ಯಾವುದೋ ಪ್ರಾಣಿ ಚಲಿಸಿದಂತೆ ಕಂಡುಬಂದು ಅವಳ ಎದೆಬಡಿತ ದ್ವಿಗುಣಿಸಿತು.

ಗಾಬರಿಯಿಂದ ಹಿಂದಕ್ಕೆ ಜಿಗಿದು ಕಣ್ಣಗಲಿಸಿ ನೋಡಿದಳು. ಮೈ ತುಂಬ ದಟ್ಟವಾದ ಕಪ್ಪು ಕೂದಲುಳ್ಳ ಆಳೆತ್ತರದ ಪ್ರಾಣಿಯೊಂದು ತನ್ನತ್ತಲೇ ನೋಡತೊಡಗಿದೆ! ರಾಮಿಯ ಜಂಘಾಬಲ ಉಡುಗಿತು. ಗಂಟಲ ಪಸೆ ಆರಿ, ಮೈಯಲ್ಲಾ ಬೆವತು ನೀರಾಯಿತು. ಕೂಗಿಕೊಳ್ಳಲಾಗಲಿ, ಓಡಿಹೋಗಲಾಗಲಿ ಸಾಧ್ಯವಾಗದೆ ಕಂಪಿಸುತ್ತ ನಿಂತುಬಿಟ್ಟಳು.

'ಕಲ್ಡಿ ಮನ್ಸರನ್ನ ಕಂಡ್ರೆ ಸುಮ್ಮೆ ಬಿಡೋದಿಲ್ಲ! ಅದರಾಗೂ ಗಂಡು ಕಲ್ಡಿ ಕೈಗೆ ಹೆಣ್ಣು ಮಕ್ಕಳೇನಾರ ಸಿಕ್ಕಿಹಾಕ್ಕೊಂಡ್ರೆ ಕಥೆ ಮುಗಿದೇ ಹೋಯ್ತು! ಅದು ಮಾನಭಂಗ ಮಾಡಿ ಮಾಡಿ ಸಾಯಿಸಿಬಿಡತೈತಿ!' ಎಂದು ಜನಗಳು ಹೇಳುವುದನ್ನು ಕೇಳಿದ್ದ ರಾಮಿ, ತನಗೆ ಅಪಮೃತ್ಯು ಸಮೀಪಿಸಿತೆಂದೇ ತೀರ್ಮಾನಿಸಿದಳು. ಮಂದಿ ಹೇಳಿದ್ದ ಬುದ್ಧಿ ಮಾತು ಕೇಳಬೇಕಾಗಿತ್ತು. ಉಪವಾಸ ಸತ್ತರೂ ಚಿಂತಿಲ್ಲ, ಒಬ್ಬಾಕಿನಾ ಇಲ್ಲಿಗೆ ಬರಬಾರದಾಗಿತ್ತು ಎಂದು ಒಳಗೊಳಗೇ ಪೇಚಾಡಿಕೊಂಡಳು.

ಹುಲ್ಲು ಜೋಪಡಿಯ ಮೂಲೆಯಲ್ಲಿ ಮುದುಡಿ ಮಲಗಿರುವ ಗಂಡ, ತನ್ನ ಬರುವಿಕೆಗಾಗಿ ಎದುರು ನೋಡುತ್ತ ಹಟ್ಟಿ ಬಾಗಿಲಲ್ಲಿ ಹಸಿದು ಕುಳಿತಿರಬಹುದಾದ ಬಡಕಂದಮ್ಮಗಳನ್ನು ನೆನೆದು ಅವಳ ಕಣ್ಣು ಒದ್ದೆಯಾದವು.

ಕರಡಿ ತನ್ನ ಮೇಲೆ ಆಕ್ರಮಣ ಮಾಡಲು ಸಜ್ಜಾಗುತ್ತಿರುವುದು ಸ್ಪಷ್ಟವಾದೊಡನೆ ರಾಮಿ ಜಾಗೃತಳಾದಳು. ತನ್ನ ಮಕ್ಕಳ ಆರೈಕೆಗಾಗಿಯಾದರೂ ತಾನು ಬದುಕಬೇಕು ಎಂಬ ಹಂಬಲ ಅವಳನ್ನು

ಅಲ್ಲಿಂದ ತಪ್ಪಿಸಿಕೊಂಡು ಓಡಲು ಪ್ರೇರೇಪಿಸಿತು. ಹಿಡಿತದಿಂದ ಜಾರುತ್ತಿದ್ದ ಕೊಡಲಿಯನ್ನೆತ್ತಿ ಹೆಗಲಿಗೇರಿಕೊಂಡು ಓಡಲೆಂದು ರಭಸದಿಂದ ಹಿಂದಿರುಗಿದಳು.

ಅದೇ ಸಮಯಕ್ಕೆ ಪಟ್ಟಣದ ನಾಗರಿಕನಂತೆ ಕಾಣುವ ತರುಣನೊಬ್ಬ ತೀರ ಸನಿಹದಲ್ಲೇ ಬರುತ್ತಿರುವುದನ್ನು ಕಂಡು ಅವಳಿಗೆ ತುಸು ಧೈರ್ಯ ಬಂದಂತಾಯಿತು. "ಅಯ್ಯೋಯಪ್ಪಾ! ಕಲ್ಡೀ!" ಎಂದು ಜೋರಾಗಿ ಕೂಗಿ ಕೊಂಡಳು.

ಅದನ್ನು ಕೇಳಿದ ತರುಣ ತಟ್ಟನೆ ಅಲ್ಲಿಯೇ ನಿಂತ. ಕರಡಿ ಆಕೆಯತ್ತ ನುಗ್ಗಿ ಬರುತ್ತಿರುವುದನ್ನು ಕಂಡು ಅಪ್ರತಿಭನಾದರೂ, ಕ್ಷಣದಲ್ಲಿಯೇ ಸಾವರಿಸಿಕೊಂಡು, ತನ್ನ ಪ್ಯಾಂಟಿನ ಜೇಬಿನಿಂದ ಬೆಂಕಿ ಪೊಟ್ಟಣವನ್ನು ತೆಗೆದು ಛಕ್ಕನೆ ಕಡ್ಡಿಗೀರಿದ. ಬಗಲ ಚೀಲದಿಂದ ಹೊರಗಿಣುಕುತ್ತಿದ್ದ ಪತ್ರಿಕೆಯೊಂದನ್ನು ಹೊರಗೆಳೆದು ಅದಕ್ಕೆ ಕಡ್ಡಿ ಮುಟ್ಟಿಸಿದ. ಕಾಗದ ಭರಭರನೆ ಹೊತ್ತಿಕೊಂಡಿತು.

ಕಣ್ಣಿವೆ ಮುಚ್ಚುವುದರೊಳಗಾಗಿ ಕರಡಿ ಎತ್ತಲೋ ಮಾಯವಾಯಿತು. ರಾಮಿ ಪುನರ್ಜನ್ಮ ಪಡೆದವಳಂತೆ ನಿಟ್ಟುಸಿರಿಟ್ಟಳು. "ನನ್ನ ಪಾಲಿನ ದೇವ್ರು ಬಂಧ್ಹಂಗ ಬಂದ್ರೀಯಪ್ಪಾ ಇಲ್ಲಿಕ್ಕಂದ್ರ ಈವತ್ತು ನನ ಕತಿ ಮುಗೀತಿತ್ರಿ!" ಎನ್ನುತ್ತ ತರುಣನಿಗೆ ಕೈ ಮುಗಿದಳು.

"ಒಬ್ಬಳೇ ಬಂದಿದ್ದೀಯಾ ಅಥವ ಜೊತೇಲಿ ಯಾರಾದ್ರು ಬಂದಿದ್ದಾರಾ?' ಎಂದು ಆತ ಕೇಳಿದಾಗ, ನಿಜ ಹೇಳಬೇಕೋ-ಬಾರದೋ ಎಂದು ಅವಳ ಮನಸ್ಸು ತೊಳಲಾಡಿತು. ಈತನ ಮಾರಿ ನೋಡಿದ್ರ ಚಲೋ ಮನ್ಸನ್ಹಂಗ ಕಾಣಿಸ್ತಾನ. ಖರೆ ಹೇಳಿದರಾಯ್ತು-ಎಂದುಕೊಂಡು "ಒಬ್ಬಾಕಿನೇ ಬಂದೀನ್ರಿ. ನನ್ನ ಹಿರಿಯಗ ಆರಾಮ ಇಲ್ಲದ ಸಲುವಾಗಿ ನನ್ನ ಜೋಡಿ ಬಂದಿಲ್ರಿ" ಎಂದು ಕಾರಣ ನೀಡಿದಳು.

ಆತ ನಾಲಿಗೆಯಿಂದ ಲೊಚಲೊಚನೆ ಶಬ್ದ ಹೊರಡಿಸಿ ಮರುಕ ಸೂಚಿಸುತ್ತ "ನಿನ್ನ ಗಂಡನಿಗೆ ಏನು ಖಾಯಿಲೆ?" ಎಂದು ಪ್ರಶ್ನಿಸಿದಾಗ "ನೀವು ಡಾಕುಟ್ರು ಅದಿರೇನ್ರಿ ಸಾಹೇಬ್ರೆ?" ಎಂದು ಮರುಪ್ರಶ್ನೆ ಹಾಕಿದಳು ರಾಮಿ.

"ಇಲ್ಲಮ್ಮ ನಾನು ಡಾಕ್ಟಲ್ಲ. ನಾನೊಬ್ಬ ವರದಿಗಾರ. ದುರ್ಗಾ ನೋಡಬೇಕು ಅಂತ ಬಂದಿದ್ದೆ...." ಎಂದು ತನ್ನನ್ನು ಪರಿಚಯಿಸಿಕೊಂಡ ಆತ, ರಾಮಿಯ ಒಂದೆರಡು ಫೋಟೋ ತೆಗೆದುಕೊಂಡ. "ಅದನ್ನ ಒಯ್ದು ಏನು ಮಾಡ್ತೀರಿ ಸಾಹೇಬ್ರೆ?" ಎಂದು ಆಕೆ ಕೇಳಿದಾಗ "ಪೇಪರ್‌ನಲ್ಲಿ ಹಾಕ್ತಿವಿ. ನಿಮ್ಮಂಥ ಬಡಜನಗಳ ಕಷ್ಟ-ಸುಖ ಕೇಳಿ ತಿಳ್ಕೊಂಡು ಅದನ್ನ ಪೇಪರಲ್ಲಿ ಬರೆಯೋದು ನಮ್ಮಂಥವರ ಕೆಲಸ. ಕೆಲವು

ಸಾರಿ ಇದು ಸರಕಾರದ ಗಮನಕ್ಕೆ ಬಂದು, ನಿಮಗೇನಾದ್ರು ಸೌಲತ್ತುಗಳು ಸಹ ಸಿಗಬಹುದು!" ಎಂದು ಆತ ವಿವರಿಸಿದಾಗ ರಾಮಿಗೆ ಆತನ ಬಗ್ಗೆ ಗೌರವ ಹುಟ್ಟಿತು. ತನ್ನ ಸಂಸಾರದ ಯಾವತ್ತೂ ಕಷ್ಟ–ಸಂಕಟಗಳನ್ನು ಆತನ ಮುಂದೆ ತೆರೆದಿಟ್ಟಳು.

"ನಿನ್ನ ಗಂಡ ಖೀರು–ಗೌಡನ ಹೊಲದಲ್ಲಿ ಕೆಲ್ಸ ಮಾಡ್ತಿರುವಾಗ ಅಪಘಾತಕ್ಕೊಳಗಾಗಿರುವುದರಿಂದ ಆತನೇ ಖರ್ಚು ಹಾಕಿ ಇವನನ್ನು ಬದುಕಿಸಬೇಕು. ಇಲ್ಲವಾದ್ರೆ ಕಾನೂನಿನ ಪ್ರಕಾರ ಗೌಡ ತಪ್ಪಿತಸ್ಥನಾಗ್ತಾನೆ. ಇದನ್ನೆಲ್ಲ ನಾನು ಪೇಪರಿಗೆ ಬರೀತೀನಿ. ನೀನು ಚಿಂತೆ ಮಾಡೇಡ." ಆತ ಅಭಯ ನೀಡಿದಾಗ, ಇಂದಿನಿಂದ ತನ್ನ ಕಷ್ಟ ಕೋಟಲೆಗಳೆಲ್ಲ ಕೊನೆಗೊಂಡಂತೆ ಆನ್ನಿಸಿ ರಾಮಿಯ ಮನ ಹಗುರಾಯಿತು.

ಆಕೆ ಹುರುಪಿನಿಂದ ಕಟ್ಟಿಗೆ ಸಂಗ್ರಹಿಸಿ ಭಾರಿ ಹೊರೆ ಕಟ್ಟಿದ್ದನ್ನು ವರದಿಗಾರ ಅತ್ಯಂತ ಶ್ರಮದಿಂದ ಅವಳ ತಲೆಗೆ ಹೊರಿಸಿದ. ಆಕೆ ಕೃತಜ್ಞತೆಯಿಂದ ಕೈ ಮುಗಿದು ಅವನನ್ನು ಬೀಳ್ಕೊಟ್ಟು ತನ್ನ ಹಾದಿ ಹಿಡಿದಳು.

ಎರಡಾಳು ಹೊರುವ ಹೊರೆ ಹೊತ್ತಿದ್ದರೂ ರಾಮಿಯ ಮುಖದಲ್ಲಿ ಆಯಾಸದ ಛಾಯೆ ಮೂಡಿರಲಿಲ್ಲ. 'ಆ ಕಾಗ್ದ ಬರೆಯೋ ಮನ್ಷ ಬರಲಿಲ್ಲಂದರಈ ದೆವ್ವನಂಥಾ ಹೊರೆಯನ್ನ ನಾ ಒಬ್ಬಾಕೆನೇ ಹೊತ್ತು ಕೊಳ್ಳೋದ್ ಆಗ್ತಿರಲಿಲ್ಲ. ಎತ್ತಾಗಿಂದ ಬಂದನೋ ಪುಣ್ಯಾತ್ಮ ದೇವರ ಹಂಗ.... ಅವನ ಹೆಂಡ್ತಿ ಮಕ್ಳು ತಣ್ಣಗಿರಲಿ! ಈವತ್ತು ಈ ಹೊರೆಯನ್ನ ಐದು ರೂಪಾಯಿಗೆ ಕಡಿಮೆ ಹಾಕಲೇಬಾರ್ದು. ಅಂಗಡಿಯಿಂದ ಎರಡು ಕಿಲೋ ಜ್ವಾಳ ಕೊಂಡು, ಸುಣ್ಣದಂಥ ನುಣ್ಣನೆಯ ಹಿಟ್ಟು ಮಾಡಿ, ಗಂಡ–ಮಕ್ಕಳಿಗೆ ಬೆಳ್ಳನೆಯ ಭಕ್ರಿ ತಟ್ಟಿ ಕೊಡಬೇಕು. ಪಾವ್ಲಿ ರೊಕ್ಕ ಕೊಟ್ಟು ಬೆಳ್ಳುಳ್ಳಿ ಒಯ್ಯಬೇಕು. ಹಿರಿಯಗ ಬೆಳ್ಳುಳ್ಳಿ ಕಾರ ಅಂದ್ರ ಬಲು ಪಿರೀತಿ!.... ಹಂಗೇ ರೊಕ್ಕ ಉಳುದ್ರೆ ಒಂದರ್ಧ ಮಾಪು ಸರಾಯಿಯನ್ನೂ ಒಯ್ಯುಬೇಕು. ಅದನ್ನ ಕುಡಿದು ಮೈಕ್ಕೊಂಬಿಟ್ರೆ ಮೈ ಬ್ಯಾನಿಯೆಲ್ಲಾ ಮರ್ತಂಗ ಆಗ್ತದಂತೆ. ಪಾಪ! ಹಂಗಾದ್ರು ಥ್ಯಾಡೆ ಹೊತ್ತು ಮರೀಲಿ!....

ಒಮ್ಮೆಲೆ ಅವಳಿಗೆದುರಾಗಿ ಇಬ್ಬರು ವ್ಯಕ್ತಿಗಳು ಅಡ್ಡ ನಿಂತು "ಏಯ್ ಯಾಡಿ, ಹೊರೆಯನ್ನ ಕೆಳಕ್ಕೆ ಒಗಿ!' ಎಂದು ಗಡಸು ಧ್ವನಿಯಲ್ಲಿ ಅಜ್ಞಾಪಿಸಿದಾಗ, ಆಕಾಶದಲ್ಲಿ ಗರಿಗೆದರಿ ಹಾರಾಡುತ್ತಿದ್ದ ಪಕ್ಷಿ ಕ್ಷಣಾರ್ಧದಲ್ಲಿ ರೆಕ್ಕೆ ಮುರಿದು ನೆಲಕ್ಕೆ ಬೀಳುವಂತೆ, ರಾಮಿ ಸುಂದರ ಕಾಲ್ಪನಿಕ ಲೋಕದಿಂದ ಕಟು ವಾಸ್ತವಕ್ಕೆ ಜಾರಿದಳು.

ಕತ್ತಿನವರೆಗೂ ಕೂದಲು ಬಿಟ್ಟು ಹುಲುಸಾಗಿ ಗಡ್ಡ ಮೀಸೆ ಬೆಳೆಸಿದ್ದು, ಚಿತ್ತಾರದ ಅಂಗಿ ದೊಗಳೆ ಪ್ಯಾಂಟು ಹಾಕಿಕೊಂಡಿದ್ದ ಮಧ್ಯ ವಯಸ್ಸಿನ ಆ ಗಂಡಸರಿಬ್ಬರೂ ಕುಡಿದು ಮತ್ತರಾಗಿ ತನ್ನನ್ನೇ ನುಂಗುವಂತೆ ನೋಡುತ್ತಿರುವುದನ್ನು ಕಂಡು, ಎರಡನೆಯ ಬಾರಿ ಕರಡಿಯ ದರ್ಶನವಾದಂತೆ ಅನ್ನಿಸಿ ರಾಮಿ ಬೆಚ್ಚಿದಳು.

"ಏನ್ ನೋಡ್ತಿದ್ದಿ? ಹೊರೆ ಕೆಳಕ್ಕೆ ಒಗಿ ಅಂದಿದ್ದು ಕೇಳಿಸಲಿಲ್ಲಾ?" ಎಂದು ಮತ್ತೊಮ್ಮೆ ಗದರಿಸಿದಾಗ "ಯದಕ್ಕೆ ಒಗಿಬೇಕ್ರಿಯಪ್ಪಾ? ಕತ್ತಲಾಗದ ಲಗೂ ಲಗೂ ನಾ ಮನಿಗೆ ಹೋಗಬೇಕ್ರಿ': ಎಂದಳು ಹೊರೆಯನ್ನು ಮತ್ತಷ್ಟು ಬಿಗಿಯಾಗಿ ಹಿಡಿದುಕೊಳ್ಳುತ್ತ.

"ಪುಕ್ಕಟೆ ಕಟಗಿ ಕಡಿದು, ಹೂಂ ಅಂತ ಹೊರೆ ಮಾಡ್ಕೊಂಡಿದ್ದಿ, ಲಗೂ ಮನಿಗೆ ಹೋಗಲಾರದ ಮತ್ತೇನು ಮಾಡ್ತಿದ್ದಿ...." ಎನ್ನುತ್ತ ಒಬ್ಬ ಅವಳು ಹೊತ್ತ ಹೊರೆಯನ್ನು ಎಳೆದಾಡಿ ನೆಲಕ್ಕೆ ಬೀಳಿಸಿದರೆ, ಮತ್ತೊಬ್ಬ ಅವಳ ಕೈಯ ಕೊಡಲಿಯನ್ನು ಕಸಿದುಕೊಂಡ. "ದಿನಾ ಹಿಂಗ್ ಬಂದ್ ಬಂದು ಕಳುವಿಲೆ ಕಟಗಿ ಕಡಕೊಂಡ ಹೋಗೀರಲ್ಲಾ, ಗುತ್ತಿಗೆ ತಗೊಂಡಿರೋ ನಾವೇನು ಬಾಯಾಗ್ ಮಣ್ ಹಾಕ್ಕೊಂಡ್ ಹೋಗಬೇಕಂತಿರೇನು?!" ಒಬ್ಬ ರೋಷದಿಂದ ಮೂದಲಿಸಿದ.

"ಭಾಳ ಕಡಿದಿಲ್ರಿಯಪ್ಪಾ. ಕೆಳಗೆ ಬಿದ್ದೋವನ್ನೇ ಆಡ್ಕೊಂಡೀ, ಒಬ್ರು ಕಾಗದ ಬರೆಯೋ ಸಾಹೇಬ್ರು ಇಲ್ಲೇ ಎಲ್ಲೋ ಅದಾರ; ಬೇಕಾದ್ರ ಅವರನ್ನ ಕೇಳಿ ನೋಡ್ರಿ!"

"ಯಾ ಸಾಹೇಬನ ಸಾಕ್ಷಿನೂ ಬೇಕಾಗಿಲ್ಲ ನಮಗ, ನಮ್ಮ ಪರವಾನಗಿ ಇಲ್ದ ಅಡವಿಯೊಳಗ ಕಾಲಿಟ್ಟಿದ್ದೆ. ಮತ್ತೆ ಕೈಯಾಗ ಕೊಡಲಿ ಹಿಡಿದಿದ್ದೆ. ಇದೇ ಸಾಕ್ಷಿ ಸಾಕು. ತೆಗಿ ತೆಗಿ ರೊಕ್ಕ. ಒಂದ್ ಕೊಡ್ಲಿಗೆ ಇಪ್ಪತ್ತು ರೂಪಾಯಿ ದಂಡ ತೆರಬೇಕಾಗ್ತದ. ಅಷ್ಟು ಕೊಟ್ಟು ನಡೆ ಇಲ್ಲಿಂದ!"

ರಾಮಿ ಗಾಭರಿಗೊಂಡಳು. "ಬಡವಿ; ಇಪ್ಪತ್ತು ರೂಪಾಯಿ ಎಲ್ಲಿಂದ ತಲ್ಲಿ ಧಣಿ! ಇದೊಂದ್ ಸರ್ತಿ ದೊಡ್ಡ ಮನಸ್ಸು ಮಾಡಿ ಬಿಟ್ಟುಬಿಡ್ರಿ, ಇನ್ನೊಮ್ಮೆ ಈ ಕಡೆ ಬರಂಗಿಲ್ರಿ!" ಎಂದು ದೀನಳಾಗಿ ಬೇಡಿದಳು.

"ಬಿಟ್ಟಿದೀವಿ ಹೋಗು. ಕಟಗಿ–ಕೊಡ್ಲಿ ಎರಡನ್ನೂ ದಂಡಕ್ಕೆ ಹಾಕ್ಕೊಂಡಿದೀವಿ!" ಎಂದುದನ್ನು ಕೇಳಿ ಆಕೆ ಹೌಹಾರಿದಳು. "ಅಯ್ಯಯ್ಯೋ! ನಿಮ್ಮ ದಮ್ಮಯ್ಯ, ಹಂಗ್ ಮಾಡಬ್ಯಾಡ್ರಿ ಒಡೆಯ! ಕೊಡ್ಲಿ ನನ್ನ ಬಲಗೈ ಇದ್ದಂಗ, ಕಡೇಕ ಅದೊಂದನ್ನಾದ್ರು ಕೊಟ್ಟುಬಿಡ್ರಿ. ನಾಹೊಂಟೋಗ್ತಿನಿ...."

"ಅದ್ದೆಂಗ್ ಹೊಂಟೋಗ್ತಿದ್ದಿ ನಿಂದ್ರು, ಚಲೋದೊಂದು ಮೊಲದ ಬ್ಯಾಟೆ ಸಿಕ್ಕೇತಿ, ಹೆಂಗೂ ಒಣ ಕಟಗಿ ಜಮಾಯಿಸಿದ್ದಿ–ಅದರಾಗ ಹುರಿದು ತಿಂದು ಮಜಾ ಮಾಡಾಮಂತ!"

"ಏಯ್ ಯಾಡಿ, ನಿನ್ನ ಕಾಲಾಗ ಅದಾವಲ್ಲ–ಅವು ಬೆಳ್ಳಿದೇನ?" ಇಬ್ಬರೂ ವಿಧವಿಧವಾಗಿ ಬಡಬಡಿಸಲಾರಂಭಿಸಿದಾಗ ರಾಮಿ ಭೀತಿಯಿಂದ ಕಂಪಿಸುತ್ತ ನಿಂತಳು.

"ಬಿಡ್ರಿ! ನನ್ನ ಬಿಟ್ಟುಬಿಡಿ!" ಎಂದು ಆಕೆ ಕೂಗಾಡಿ ಪ್ರತಿಭಟಿಸಿದಾಗ "ನೀ ಹಿಂಗ್ ಗದ್ಲಾ ಹಾಕಿದ್ಯಂದ್ರ ಕೊಡ್ಲಿ–ಕಟಗಿ ಎರಡನ್ನೂ ಒಯಿದು ಬಿಡ್ತೀವಿ ನೋಡು!" ಎಂದು ಬೆದರಿಸಿದರು.

"ಒಯಿದ್ರ ಒಯ್ಯುವಲ್ಲರ‍್ಯಾಕೆ, ನನ್ನನ್ನು ಬಿಟ್ಟುಬಿಡ್ರಿ, ನಾ ಹೊಂಟೋಗ್ತೀನಿ!" ಎಂದು ಕೊಸರಾಡಿದಳು ರಾಮಿ.

ಬಿಡುಹಂಗ ಇತ್ತಂದ್ರ ಹಿಡೀತಾನೇ ಇದ್ದಿಲ್ಲಬೇ! ಈ ಅಡವಿಯಾಗ ನೀ ಎಷ್ಟು ಒದರಿದರೂ ಏನೂ ಸುಖಇಲ್ಲ ಬಿಡು." ಎಂದು ಅಟ್ಟಹಾಸ ಮಾಡುತ್ತ ಅವಳ ಮೇಲೆರಗಿದರು.

ಎಷ್ಟೋ ಹೊತ್ತಿನಮೇಲೆ ರಾಮಿ ದುಷ್ಟರಿಂದ ಬಿಡುಗಡೆ ಪಡೆದು ಪ್ರಯಾಸದಿಂದ ಎದ್ದು ತನ್ನ ಕೊಡಲಿ–ಕಟ್ಟಿಗೆಗಾಗಿ ಹುಡುಕಾಡಿದಳು. ಅವೆರಡೂ ಮಾಯವಾಗುವುದರ ಜೊತೆಗೆ ತನ್ನ ಕಾಲಿನ ಗೆಜ್ಜೆಗಳೂ ಕಾಣೆಯಾಗಿದ್ದವು. ರಾಮಿಯ ಎದೆತುಂಬಿ ರೋಷ ಹೆಡೆಯಾಡಿತು. ಮುಷ್ಟಿಗಳು ಬಿಗಿದುಕೊಂಡವು.

"ನೀವು ಯಾವ ಗವಿಯಾಗ ಹೋಗಿ ಅವಿತುಕೊಂಡೂ ನಾ ಬಿಡಂಗಿಲ್ರೋ! ನನ್ನ ಕೊಡ್ಲಿ ಕಸಗೊಂಡು, ಅದರಿಂದ ನಿಮ್ಮನ್ನ ಸಣ್ಣಗ್ ಕಡಿದು ಚೂರ್‌ಚೂರ್ ಮಾಡಿದಮ್ಯಾಲೇ ನಾ ಮನಿಗೆ ಹೋಗ್ತಿನ್ರೋ!!" ಎಂದು ಕಾಡು ನಡುಗುವಂತೆ ಚೀತ್ಕರಿಸುತ್ತ ದಟ್ಟಡವಿಯಲ್ಲಿ ಓಡತೊಡಗಿದಳು...

**ಕತೆಗಾರರ ಪರಿಚಯ:**

ಬಡತನದ ಬೇಗೆ, ಹೆಣ್ಣಿನ ಮೇಲಿನ ದಬ್ಬಾಳಿಕೆಯ ಕ್ರೌರ್ಯದ ಕಟುವಾಸ್ತವವನ್ನು ಲೂಟಿ ಕತೆ ಮನನಾಟುವಂತೆ ಚಿತ್ರಿಸಿದೆ. ಬಿ.ಟಿ.ಲಲಿತಾನಾಯಕರವರ"ಹಬ್ಬ ಮತ್ತು ಬಲಿ" ಸಂಕಲನದಿಂದ ಇದನ್ನು ಆರಿಸಲಾಗಿದೆ.

ಲಂಬಾಣಿ ಜನರ ಭಾಷೆ, ಬದುಕು, ನೀತಿ ನಡಾವಳಿಗಳ ಪ್ರತೀಕದಂತಿರುವ ಬಿ.ಟಿ. ಲಲಿತಾನಾಯಕರ ಬರಹ ಲಂಬಾಣಿ ಸಂಸ್ಕೃತಿಯ ಅಂತರಾಳದಲ್ಲಿರುವ ಹೆಣ್ಣಿನ ಬವಣೆಗಳನ್ನು ಸಮರ್ಥವಾಗಿ ಚಿತ್ರಿಸುತ್ತದೆ. ಇವರ ಪ್ರಮುಖ ಕೃತಿಗಳೆಂದರೆ – ನಂರೂಪ್ಲಿ', 'ಗತಿ', 'ಇದೇಕೂಗು', 'ಮತ್ತೆ ಮತ್ತೆ' ಮೊದಲಾದವು. ರಾಜಕೀಯದಲ್ಲಿದ್ದು ಸ್ತ್ರೀಪರ ಸೂಕ್ಷ್ಮತೆಗಳನ್ನು ಕಳೆದುಕೊಳ್ಳದ ಲೇಖಕಿಯೆಂದು ಇವರು ಹೆಸರಾಗಿದ್ದಾರೆ.

## 3. ಪಣಂಬೂರು ಬಂದರು

**- ಡಾ. ಎಚ್. ನಾಗವೇಣಿ**

ಪಣಂಬೂರು ಬಂದರಿನ ನಿರ್ಮಾಣ ಕೆಲಸ ಶುರುವಾಗಿ ನಾಲ್ಕು ವರ್ಷ ಕಳೆದರೂ ನಮ್ಮ ಕೈ ಹಿಡಿದು ಅಕ್ಷರ ತಿದ್ದಿಸುತ್ತಿದ್ದ ಸೋಜ ಮಾಸ್ತ್ರ ಬೈಗಳಲ್ಲಿ ಮಾತ್ರ ಏನೇನೂ ಬದಲಾವಣೆ ಇಲ್ಲ. ಮಗ್ಗಿ ಹೇಳುವುದರಲ್ಲಿ ತಪ್ಪಿದೆವಾ 'ಏಯ್ ಬಿಕನಾಸಿ ಹೋಗು ಪಣಂಬೂರು ಅರ್ಬರಲ್ಲಿ ಮಣ್ಣು ಹೊರು' ಎಂಬ ಬೈಗಳು.'ಬಾರೆಲೆ ಹಕ್ಕಿ. ಬಣ್ಣದ ಹಕ್ಕಿ...' ಹಾಡಲ್ಲಿ ಎಡವಿದೆವೋ, ತಲೆಗೊಂದು ಠಕ್ಕನೆ ಮೊಟಕಿ 'ನಡಿ ನಡಿ.. ಈಗಲೇ ನಡಿ.. ತಗೋ ಅಲ್ಲಿದೆ ಬುಟ್ಟಿ.. ತಗೋ ಪಣಂಬೂರು ಆರ್ಬರಲ್ಲಿ ಮಣ್ಣು ಹೊರು...' ಎಂಬ ಬೈಗಳು ಸಿದ್ಧವಾಗಿರುತ್ತಿತ್ತು.

ಸೋಜ ಮಾಸ್ತ್ರು ಅನ್ನುತ್ತಿದ್ದ 'ಆರ್ಬರ್' ಎಂದರೆ ಪಣಂಬೂರು ಹಾರ್ಬರ್' ಅಥವಾ 'ನವಮಂಗಳೂರು ಸರ್ವಋತು ಆಳ ಬಂದರು' ಎಂದು ನನ್ನ ಬಲಿಯುತ್ತಿದ್ದ ಬುದ್ಧಿಗೆ ಹೊಳೆಯುವ ಹೊತ್ತಿಗೆ ಇನ್ನೇನು ತಿಂಗಳೊಂದರಲ್ಲಿ ತಲೆ ಎತ್ತಲಿರುವ ಹೊಸ ಬಂದರಿನ ಸುತ್ತಮುತ್ತಲೆಲ್ಲ ಬೃಹತ್ ಉದ್ದಿಮೆಗಳಾಗಲೇ ಆವರಿಸಿ ಎದ್ದು ಕೂತಿದ್ದವು – ಹಳೆ ಕುರು ಹುಣ್ಣುವಿನ ಸುತ್ತ ಹತ್ತಾರು ಹೊಸ ಹುಣ್ಣುಗಳು ಆಮರಿಕೊಳ್ಳುವಂತೆ.

ನಮ್ಮ ಪಣಂಬೂರಿಗೆ ಹೊಸ ಬಂದರು ಬರುತ್ತಿದೆಯಂತೆ ಎಂಬ ಸುದ್ದಿ ಬಂದದ್ದು ನಮ್ಮೂರವರು ಹದಿನಾರನೇ ಸ್ವಾತಂತ್ರ್ಯ ಹಬ್ಬವನ್ನು ಆಚರಿಸುತ್ತಿದ್ದ ದಿನದಂದು. ಮೀನುಗಾರಿಕೆ ಮತ್ತು ಕೃಷಿಯನ್ನೇ ನಂಬಿ ಬದುಕುತ್ತಿದ್ದ ನಮ್ಮೂರಿಗರಿಗೆ ಈ ಸುದ್ದಿ ಕೇಳಿ ಫಕ್ಕನೆ ಮಿಂಚು ಹೊಡೆದಂತಾಗಿತ್ತು. ಕೆಲವರಿಗೆ ಸಂತೋಷ ಮತ್ತೆ ಕೆಲವರಿಗೆ ದುಃಖ.

'ನಮಗೆ ಈ ಹೊಸ ಬಂದರಾಕೆ? ಏನಾಗಿದೆ ನಮ್ಮ ಹಳೆ ಬಂದರಿಗೆ! ಆ ಹಳೆ ಬಂದರೆಷ್ಟು ಮಂದಿಯನ್ನು ಇಲ್ಲಿಂದ ಮುಂಬೈ ಸೇರಿಸಿಲ್ಲ. ಹಾಗೆ ನಮ್ಹುಡುಗರು ಮುಂಬೈ ಸೇರಿ ಪ್ಲೇಟು–ಗ್ಲಾಸು ತೊಳೆಯದಿದ್ದರೆ, ಟಾಟಾ–ಬಿಲ್ಲನ ಕಂಪನಿಯಲ್ಲಿ 'ಪ್ಯೂನ್'ಗಳಾಗದಿರುತ್ತಿದ್ದರೆ, ಬರೀ ಈ ಮೀನುಗಾರಿಕೆ, ಕೃಷಿ ಕಸುಬು ನಮ್ಮನ್ನು ಬದುಕಿಸುತ್ತಿತ್ತ' ಎಂದು ಹಲವರು ತಟ್ಟನೆ ಹೊಸಬಂದರು ನಿರ್ಮಾಣಕ್ಕೆ ತಮ್ಮ ತೀರಾ ಅಸಮಾಧಾನ ನಾಕುಸಿ ತೋರಿಸಿಬಿಟ್ಟಿದ್ದರು.

'ಬಂದರು ಬರುತ್ತಂತಾ... ಬರ್ಲಿಬಿಡು. ಬಾಳ ಒಳ್ಳೆದಾಯ್ತು, ಈ ಬೈಲಾರೆ ಗದ್ದೆಗಳನ್ನು, ಹೊಳೆಯ ಬಾಯಿಯ ಬೈಲುಗದ್ದೆಗಳನ್ನು ಕಟ್ಟಿಕೊಂಡು ನಾನು ಸಾಗುವಳಿ ಮಾಡುವುದು ಅಷ್ಟರಲ್ಲೇ ಇದೆ.

ಕಾರ್ತೆಲ್–ಆಟಿ ತಿಂಗಳಲ್ಲಿ ಜೇರಿಗಟ್ಟಿ ಎರಡೇ ಎರಡು ಜಡಿಮಳೆ ಹೊಡೆದರೆ ಸಾಕು. ಆ ಗುರುಪುರ ನದಿಗೆ ಹುಚ್ಚು ಶುರುವಾಗುತ್ತೆ. ನಮ್ಮ ಗದ್ದೆ ತೋಟ ಮನೆಯೊಳಗೆಲ್ಲ ಮತ್ತೆ ಅದರದ್ದೇ ಕಾರುಬಾರು. ನೆಟ್ಟ ನೇಜಿಯನ್ನೆಲ್ಲ ಕೊಳೆಸಿಬಿಟ್ಟೆ ಆ ಹೊಳೆನೀರು ಮತ್ತೆ ಇಳಿದು ಹೋಗುವುದಲ್ವಾ...! ಅಂತಹ ಪುಸ್ಕು ಗದ್ದೆ ಯಾರಿಗೆ ಬೇಕಾಗಿದೆ' ಎಂದು ನದಿ ಸೆರಗಲ್ಲಿರುವ ದೊಡ್ಡಗಂಟಲಿನ ದೊಡ್ಡಣ ಶೆಟ್ಟರು ಸಂತೋಷಪಟ್ರೆ, ಅವರ ಭಾವ ಗಂಗಯ್ಯಶೆಟ್ಟರಂತು ಬಂದರಿನ ಆಗಮನದ ಸುದ್ದಿ ಕೇಳಿದವರೆ ಸಂತೋಷದಿಂದ ಕುಣಿದು ಕುಪ್ಪಳಿಸುವುದೊಂದು ಬಾಕಿ. 'ದೊಡ್ಡ ಮಗಳಿಗೊಂದು ಐದು ಸಾವಿರ ಬದಿ (ವರದಕ್ಷಿಣೆ) ಕೊಟ್ಟು ಮದುವೆ ಮಾಡಿ ಭಾರ ಇಳಿಸಿಕೊಂಡೆ. ಎರಡನೆಯವಳಿಗಂತು ಕೊಟ್ಟುಕೊಳ್ಳುವ ಪಗರ್ ಸಾಟೆ ಮದುವೆಯಾಯ್ತು. ಇನ್ನು ಮೂರನೆಯವಳ ಕತೆ ಏನು ಅಂತಾ ಯೋಚನೆಗೆ ಬಿದ್ದಿದ್ದೆ ಮಾರಾಯಾ... ಈಗ ಶುಂಠಿರಸ ಇಲ್ಲದೆಯೆ ಗಂಟಲ ಕಫ ಜಾರುತ್ತಿದೆ ನೋಡು. ಈ ನನ್ನ ಪಡೀಲು (ಬೆಳೆ ತೆಗೆಯಲಾಗದ) ಬಿದ್ದ ಗದ್ದೆಗಳನ್ನು ಇಟ್ಟು ನಾನೇನು ಪೂಜೆ ಮಾಡ್ಬೇಕಾ? ಅದು ಗವರ್ಮೆಂಟಿಗೆ ಹೋದ್ರೆ ಒಂದಷ್ಟು ಸಾವಿರ ಹಣವಾದ್ರೂ ಬಂದೀತು. ಕಡೀರ (ಕೊನೆ) ಮಗಳ ಮದುವೆಯನ್ನಾದರೂ ಸ್ವಲ್ಪ ಗಡದ್ದಾಗಿಯೇ ಮಾಡಿ ಮುಗಿಸ್ತೇನೆ. ಬಂದರಿನವರು ಕೊಡುವ ಕೆಲ ಕಾಸು ನನ್ನ ಕಡೇ ಮಗನಿಗಾಯ್ತು. ಅವರು ಅದೆಲ್ಲೋ ಕೊಡುವ ಜಾಗದಲ್ಲಿ ಒಂದು ಸಣ್ಣ ಮನೆ ಕಟ್ಟಿಸಿಕೊಂಡ್ರಾಯ್ತು. ಎಲ್ಲಿದ್ದರೇನು ಬದುಕುವುದಕ್ಕೆ ನಾವೇನು ಸಾಯುವಾಗ ಈ ಜಾಗವನ್ನು ಅಲ್ಲಿಗೆ ಕೊಂಡೊಗ್ಲಿಕ್ಕಿದೆಯಾ?' ಎಂಬ ಅಭಿಪ್ರಾಯವನ್ನು ಗಂಗಯ್ಯಶೆಟ್ಟರು ಎಲ್ಲರೆದುರು ಕಾರಿಕೊಂಡು ಬಿಟ್ಟಿದ್ದರು.

ಹೊಸ ಬಂದರು ಯೋಜನೆಯಿಂದ ಸ್ಥಳಾಂತರಕ್ಕೊಳಪಡುವ ಕುಟುಂಬದವರು ಅವರವರ ಭಾವ, ಭಾರ, ಅನುಕೂಲಕ್ಕೆ ತಕ್ಕಂತೆ ತಮ್ಮ ಅಭಿಪ್ರಾಯ–ಅನಿಸಿಕೆಗಳನ್ನು ವ್ಯಕ್ತಪಡಿಸುತ್ತ ಯೋಜನೆಯನ್ನು ಎದುರು ನೋಡತೊಡಗಿದ್ದರು.

ಹಾಗೆ ನೋಡಿದರೆ ಮಂಗಳೂರಿನ ಹಳೆ ಬಂದರೇನು ಖಂಡಿತ ಕೆಲಸಕ್ಕೆ ಬಾರದ, ನಿನ್ನೆ ಮೊನ್ನೆ ಕಣ್ಣುಬಿಟ್ಟ ಪಡ್ಪೋಸಿ ಬಂದರಲ್ಲ. 7ನೇ ಶತಮಾನದಲ್ಲೇ ಈಜಿಪ್ಟ್ ದೇಶದ ಅಲೆಕ್ಸಾಂಡ್ರಿಯಾದ ಭೂಗೋಳಜ್ಞ ಟಾಲೆಮಿಯು ತನ್ನ ಕೃತಿ 'ಭೂಗೋಳ ವಿಜ್ಞಾನದ ಕೈಪಿಡಿ'ಯಲ್ಲಿ ಈ ಬಂದರಿನ ಬಗ್ಗೆ ಉಲ್ಲೇಖಿಸಿದ್ದಾನೆ. ಹದಿನೈದನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಭೇಟಿಗಾಗಿ ಬಂದ ಪರ್ಷಿಯಾದ ರಾಯಭಾರಿ ಅಬ್ದುಲ್ ರಜಾಕ್ ಕೂಡಾ ಈ ಬಂದರಿನ ವಹಿವಾಟು ಕಾರುಭಾರಿನ ಬಗ್ಗೆ ತನ್ನ ಪ್ರವಾಸಕಥನದಲ್ಲಿ ವರ್ಣಿಸಿದ್ದಾನೆ. ಹದಿನಾರನೇ ಶತಮಾನದ ಆದಿಯಲ್ಲಿ ಪೋರ್ಚುಗೀಸ್ ನೌಕರ ಬಾರ್ಬೋಸ್ ಹಾಗೂ 16ನೇ ಶತಮಾನದ ಅಂತರದಲ್ಲಿ ಬಂದ ಇಟಲಿ ದೇಶದ ಪ್ರವಾಸಿ ಪಿಯೆತ್

ದೆಲ್ಲಾವೆಲ್ಲೆ ಕೂಡಾ ಈ ಬಂದರಿನ ಬಗ್ಗೆ ಹಾಗು ಬಂದರಲ್ಲಿ ನಡೆಯುತ್ತಿದ್ದ ವ್ಯಾಪಾರಗಳ ಬಗ್ಗೆ ತಮ್ಮ ಪ್ರವಾಸ ಕಥನದಲ್ಲಿ ವಿವರವಾಗಿ ಬರೆದಿದ್ದಾರೆ.

ಆ ನಮ್ಮ ಭೂಗೋಳಜ್ಞ ಟಾಲೆಮಿ ಈ ಬಂದರಿಗೆ ಕಾಲಿಟ್ಟ ನಂತರದಿಂದಲೇ ಈ ಬಂದರಿನಿಂದ ಪರವೂರು ಪರದೇಶಗಳಿಗೆ ಸಾಗಿ ಹೋದ ದೊಡ್ಡ ಟೋಪಿ–ಸಣ್ಣ ಟೋಪಿಯ ಮಂದಿ ಹಾಗೂ ಸರಕು ಸಾಮಗ್ರಿಗಳಿಗೇನು ಲೆಕ್ಕವಿದೆಯೆ? ಅಬ್ಬಕ್ಕರಾಣಿ, ಪೋರ್ಚುಗೀಸರನ್ನು ಒಳಗೊಂಡಂತೆ ಹೈದರಾಲಿ ಟಿಪ್ಪುಸುಲ್ತಾನರ ಸತತ ಸಖ್ಯವನ್ನುಂಡ ಈ ಬಂದರಿಗೆ ಕನ್ನಡ ಜಿಲ್ಲೆಯ ಪ್ರಥಮ ಕಲೆಕ್ಟರ್ ಕ್ಯಾಪ್ಟನ್ ವುಡ್ರೋವನ್ನು ಸ್ವಾಗತಿಸಿದ ಕೀರ್ತಿಯೂ ಸಲ್ಲುತ್ತದೆ.

ಇಂತಹ ತೀರಾ ಹಳೆತಲೆ, ಹಳೇ ಇತಿಹಾಸವನ್ನು ಕಂಡಿರುವ ಈ ಹಳೆಬಂದರನ್ನು ಸಂಪೂರ್ಣ ಮೂಲೆಗುಂಪು ಮಾಡುವಂತಹ ಹೊಸ ಪಣಂಬೂರು ಬಂದರು ನಿರ್ಮಾಣವಾಗುವ ಸುದ್ದಿ ಬಂದೆರಗಿದಾಗ ನಾನಿನ್ನು ಅಮ್ಮನ ಸೊಂಟದಿಂದಿಳಿದು ಓಡಾಡುವ ಹಂತದಲ್ಲಿದ್ದೆ. ಸದ್ಯದಲ್ಲಿ ತಣ್ಣೀರುಬಾವಿ ಪಣಂಬೂರು, ಬೈಕಂಪಾಡಿಯವರೆಲ್ಲ ಎತ್ತಂಗಡಿಯಾಗುತ್ತಾರಂತೆ! ಆ ಹಳ್ಳಿಗಳೆಲ್ಲ ಕಡಲೊಳಗೆ ಮುಳುಗುತ್ತಾವಂತೆ. ಆ ಇಡೀ ಊರನ್ನೇ ತೊರೆದ ನಂದನೇಶ್ವರನ ದೇವಸ್ಥಾನವೂ, ವಿಷ್ಣುಮೂರ್ತಿಯ ಗುಡಿ, ಕಾವೇರಿ ಸ್ಥಾನದೊಳಗಿನ ಜುಮಾದಿ ದೈವದ ಜತೆಗೆ ಕಡಲಪಾಲಾಗುತ್ತದಂತೆ! ಈಚೆ ಬದಿ ಬಸ್ಸು ನಿಲ್ಲುವುದಂತೆ, ಆಚೆ ಬದಿ ಹಡಗು ನಿಲ್ಲುವುದಂತೆ. ಹಡಗೆಂದರೆ ಒಂದು ಊರಿನಷ್ಟು ದೊಡ್ಡದಂತೆ, ಅದರ ಮೇಲೆ ವಿಮಾನ ಇಳಿಯುತ್ತಂತೆ.. ನಾವೆಲ್ಲ ಆ ಹಡಗಲ್ಲೇ ದುಡ್ಡಿಲ್ಲದೆ ಪರ್ದೇಶ ಸುತ್ತಿ ಬರಬಹುದಂತೆ...' ಹೀಗೆ ಬೆಟ್ಟದನೆಲ್ಲಿಯಂತೆ ಹುಳಿ–ಸಿಹಿ–ಕಹಿ–ಒಗರು ಎಲ್ಲವೂ ಮಿಶ್ರಿತವಾದಂತಹ ಭಾವದ ಸುದ್ದಿ ಬಂದು ನಮ್ಮವರ ಭಾವವಲಯವನ್ನು ತಲುಪಿದ ವರುಷದೊಳಗಡೆ ಕಡತದಲ್ಲಿದ್ದ ಬಂದರು ಯೋಜನೆ ಕಾರ್ಯಗತಕ್ಕೆ ಬಂದೇಬಿಟ್ಟಿತ್ತು.

ಮಳೆಗಾಲದಲ್ಲಿ ತೆಂಕಣದಿಂದ ಬೀಸಿ ಬರುವ ಮಾರುತಕ್ಕೆ ಮುನ್ನ ಕೊಲಂಬೋದಿಂದ ಹಾರಿ ಬರುವ ಹಕ್ಕಿಗಳಂತೆ, ಎಲ್ಲೆಲ್ಲಿಂದಲೋ 'ದೊಡ್ಡ ಟೋಪಿ'ಯವರು ಬಂದಿಳಿದರು. ಹಾಗೆ ಬಂದವರು ನೇರ ಒಕ್ಕಲೆಬ್ಬಿಸುವ ಕಾರ್ಯಕ್ಕೆ ಕೈ ಇಟ್ಟರು. ಸುತ್ತಮುತ್ತಲ ಕುಟುಂಬಗಳು ತಮ್ಮ ನೆಲೆಯಿಂದ ಬೇರು ಕಳಚಿಕೊಳ್ಳುವ ಸಂದರ್ಭದಲ್ಲಿ ಹರಿಸಿದ್ದ ಕಣ್ಣೀರಧಾರೆಯಲ್ಲಿ ಮತ್ತೊಂದು ಕಡಲೇ ನಿರ್ಮಾಣಗೊಳ್ಳುವ ಸ್ಥಿತಿ ಉಂಟಾಯಿತು.

ಹಲವಾರು ತಲೆಮಾರುಗಳಿಂದ ಆ ಹೊಳೆ ಈ ಕಡಲತಾಯಿಯ ಸೆರಗಂಚಲ್ಲಿ ಕಷ್ಟವೋ ಸುಖವೋ ಹಂಚಿಕೊಂಡು ಬದುಕಿ ಬಾಳಿದ್ದ, ಆ ಹುಟ್ಟುಪರಿಸರ–ನೆಲ–ಜಲದೊಂದಿಗೆ ಭಾವನಾತ್ಮಕ ಸಂಬಂಧವನ್ನು ಬೆಸೆದುಕೊಂಡಿದ್ದ ಆ ಹಳ್ಳಿಗರ ಮನೋ ವಿಪ್ಲವವನ್ನು ಅರ್ಥೈಸಿಕೊಳ್ಳಲು ಸರಕಾರಕ್ಕೆಲ್ಲಿದೆ ಸಮಯ? ಹಾಗೆ ತಾಳ್ಮೆ–ಸಂಯಮ–ಕರುಣೆ–ಅನುಕಂಪ ತೋರುತ್ತ ಕೂತಲ್ಲಿ ದೇಶದ ಪ್ರಗತಿಯ ರಥದ ಗಾಲಿ ಹೇಗೆ ಉರುಳೀತು ಎಂಬುದನ್ನೂ ನಾವು ಯೋಚಿಸಬೇಕಾಗುತ್ತದೆ ನಿಜ, ಇಲ್ಲಿ ನೆಲೆ ಕಳೆದುಕೊಳ್ಳುವ ಕುಟುಂಬಕ್ಕೊಬ್ಬರಿಗೆ ಉದ್ಯೋಗ ಪುನರ್ವಸತಿಯ ಜತೆಗೆ ಪರಿಹಾರಧನವೂ ಲಭ್ಯ ಎಂಬಆಶ್ವಾಸನೆಯೊಂದು ಮೊದಲೇ ಸಿಕ್ಕಿದ್ದರಿಂದ ನೆಲೆ ಕಳೆದುಕೊಳ್ಳುವವರಿಂದ ಹೆಚ್ಚು ವಿರೋಧವಿಲ್ಲದೆ ಭೂಮಿ ವಶಪಡಿಸಿಕೊಳ್ಳುವ ಕ್ರಿಯೆ ಮುಂದುವರಿಯಿತು.

ಈಗಿನಂತೆ ಆಗಿನ್ನೂ ಪರಿಸರವಾದಿಗಳು ನಮ್ಮಲ್ಲಿ ಹುಟ್ಟಿಕೊಂಡಿರಲಿಲ್ಲ. ಅದುವರೆಗೂ ಪರಿಸರ ಮಲಿನಗೊಳ್ಳುವ ಅಥವಾ ನಾಶವಾಗುವ ಯಾವುದೇ ಉದ್ಯಮಗಳು ಆ ಕಡಲ ಜಿಲ್ಲೆಯನ್ನು ಇನ್ನೂ ಹೊಕ್ಕಿರದಿದ್ದರಿಂದ ಪರಿಸರದ ಬಗ್ಗೆ ಎಚ್ಚೆತ್ತುಕೊಳ್ಳುವ ಅಗತ್ಯವೂ ಆಗ ಹುಟ್ಟಿರಲಿಲ್ಲ. ಬಂದರು ನಿರ್ಮಾಣದ ಸುದ್ದಿ ಬಂದಾಗಲೂ ಅದು ಮುಂದೊಂದು ದಿನ ಪರೋಕ್ಷವಾಗಿ ನಾವು ಹುಟ್ಟಿ ಬೆಳೆದಿರುವ ಜೈವಿಕ ಪರಿಸರವನ್ನು ಹಾಗು ನಾವು ಪಾರಂಪರಿಕವಾಗಿ ಕಟ್ಟಿಕೊಂಡು ಬಂದಿರುವ ಸಾಂಸ್ಕೃತಿಕ ಪರಿಸರವನ್ನು ಕುಲಗೆಡಿಸಬಹುದು ಎಂಬ ಕಲ್ಪನೆಯ ಸಣ್ಣ ಎಳೆಯೂ ಅಲ್ಲಿನ ಯಾರೊಬ್ಬರನ್ನೂ ಅವುಚಿಕೊಂಡಿರಲಿಲ್ಲ.

'ಸ್ವಾತಂತ್ರಾನಂತರದಲ್ಲಿ ನವಭಾರತವನ್ನು ಕಟ್ಟುವ ತುರ್ತು ನಮ್ಮ ದೇಶಕ್ಕಿರುವ ಕಾರಣ ಪಂಚವಾರ್ಷಿಕ ಯೋಜನೆಯಡಿ ದೇಶದ ಸರ್ವತೋಮುಖ ಸಾಧನೆಯನ್ನು ಗಮನದಲ್ಲಿರಿಸಿಕೊಂಡು ಈ ಹೊಸ ಬಂದರು ಯೋಜನೆ'ಯನ್ನು ಬಹಳಷ್ಟು ಹೋರಾಟ ನಡೆಸಿಯೇ ಇಲ್ಲಿಗೆ ತರಲಾಗಿದೆ. ಹಾಗೆಯೇ ಸರಕಾರವೂ ನಿಮ್ಮನೇನು ಬೀದಿಪಾಲು ಮಾಡುವುದಿಲ್ಲ –ವಸತಿ, ಉದ್ಯೋಗ, ಪರಿಹಾರಧನ ಎಲ್ಲವನ್ನೂನೀಡುತ್ತದೆ' ಎಂದು ಕಡಲ ಜಿಲ್ಲೆಯ ರಾಜಕೀಯ ಧುರೀಣರು ಈ ಊರವರಿಗೆಲ್ಲ ಸಮಜಾಯಿಷಿ ನೀಡಿದ್ದು ಕೂಡಾ ಅವರೆಲ್ಲರ ಮೌನ ಒಪ್ಪಿಗೆಗೆ ಒಂದು ಕಾರಣವಿರಬಹುದು.

ಎಲ್ಲವೂ ನಿಜ, ಒಕ್ಕಲೆಬ್ಬಿಸುವಾಗ ಸರಕಾರ ನಮ್ಮ ಜನರಿಗೆ ಬದುಕಲು ಅಗತ್ಯವಾದ ಎಲ್ಲವನ್ನೂ ಕೊಡುತ್ತದೆ. ಅವೆಲ್ಲವೂ ಬಂದರೆ ಆ ಕ್ಷಣಕ್ಕೆ ಆಕರ್ಷಣೀಯ ಕೊಡುಗೆಯಂತೆ ನಮಗೆ ಕಾಣಿಸುವುದು ನಿಜ. ಆದರೆ ಒಂದು ನಿರ್ದಿಷ್ಟ ಜೈವಿಕ ಪರಿಸರದಲ್ಲಿ ಹುಟ್ಟಿ ಸುದೀರ್ಘ ಕಾಲ ಪರಿಸರದ ಏಳುಬೀಳುಗಳಿಗೆಲ್ಲ

ಸ್ಪಂದಿಸುತ್ತಾ... ಅದರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಬದುಕನ್ನಲ್ಲೇ ರೂಪಿಸಿಕೊಂಡು, ಆ ಪರಿಸರದ ಅವಿಭಾಜ್ಯ ಅಂಗವೆಂದೇ ಪರಿಗಣಿಸಿಕೊಂಡ ಕುಟುಂಬಗಳನ್ನು ಹೀಗೆ ಸ್ಥಳಾಂತರಗೊಳಿಸಿ ಅವರನ್ನು ಹೊಸ ಪರಿಸರಕ್ಕೆ ದಬ್ಬುವಾಗ, ಆ ಕುಟುಂಬಗಳು ಹೊಸ ಜೈವಿಕ ಪರಿಸರಕ್ಕೆ ಒಗ್ಗಲಾರದೆ ಬದುಕನ್ನು ತೀರಾ ಯಾತನಾಮಯವಾಗಿ ಕಳೆಯಬೇಕಾಗುತ್ತದೆ.

ಇತ್ತ ಒಕ್ಕಲೆಬ್ಬಿಸುವ ಪ್ರಕ್ರಿಯೆ ಚುರುಕಾಗುತ್ತಿದ್ದಂತೆ ನೆಲೆ ಕಳೆದುಕೊಳ್ಳುತ್ತಿರುವವರ ಮಾನಸಿಕ ತುಮುಲವೂ ಹೆಚ್ಚತೊಡಗಿತ್ತು. "ತಾವು ಹುಟ್ಟಿ ಬೆಳೆದು ಅನುಭವಿಸಿದ ಈ ಪ್ರಕೃತಿ. ತಮ್ಮ ಬದುಕಿನೊಂದಿಗೆ ಬೆಸೆದುಕೊಂಡಿರುವ ಮನೆ ಮುಂದಿನ ಆ ಕಡಲು, ಈ ಹೊಳೆ, ಆ ಬೆಟ್ಟ, ಬಾಲ್ಯದ ಕುಣಿತ ಕುಪ್ಪಳಿಕೆಗೆ ರಂಗಸ್ಥಳವಾಗಿದ್ದ ಮನೆ ಅಂಗಳ, ಬೈಲು, ತೋಟ, ಬೈಲಾರೆಗಳು... ಅಲ್ಲಿರುವ ಅಸಂಖ್ಯ ಜೀವಜಾಲಗಳು. ಇವೆಲ್ಲವನ್ನೂ ತೊರೆದು ಬೇರೊಂದು ನಿರ್ಜೀವ ಪರಿಸರಕ್ಕೆ ಇಲ್ಲಿನ ಬೇರುಗಳನ್ನು ಶಾಶ್ವತವಾಗಿ ಕಳಚಿಕೊಂಡು ಸಾಗಬೇಕೆ? ಈ ದಟ್ಟ ಪ್ರಕೃತಿಯ ಮಧ್ಯೆ ಕ್ರಿಯಾಶೀಲರಾಗಿದ್ದ ನಾವು ಆ ನರಪ್ರಾಣಿ ಸುಳಿಯದ ಬೋಳುಗುಡ್ಡದಲ್ಲಿ 'ನಮ್ಮದಲ್ಲದ ನೆಲವಿದು' ಎಂಬ ಭಾವ ತಾಳಿ ಪರಕೀಯರಂತೆ ಬದುಕು ಸಾಗಿಸಬೇಕೆ?" ಬಂದರಿಗಾಗಿ ಒಕ್ಕಲೇಳಬೇಕಾದ ಕುಟುಂಬಗಳು ಇಂತಹ ಭಾವ ತಾಳಿ ಕಣ್ಣೀರುಗರೆದಾಗ ಆ ಕುಟುಂಬಗಳ ನಡುವೆ ಆಪ್ತ ಒಡನಾಟವನ್ನು ಬೆಸೆದುಕೊಂಡಿದ್ದ ಅಕ್ಕಪಕ್ಕದ ಕುಟುಂಬಗಳೂ ಕಣ್ಣೀರು ಸುರಿಸಿದ್ದವು. ಹೊಸ ಬಂದರಿಗಷ್ಟೇ ಭೂಮಿ ವಶಪಡಿಸಿಕೊಂಡು ಉಳಿದ ಕುಟುಂಬಗಳ ಸ್ಥಳಾಂತರವನ್ನು ನಿಲ್ಲಿಸಲಾಗದೇ ಎಂದು ಹಲವು ಕುಟುಂಬಗಳು ಸರಕಾರವನ್ನು ಕೋರಿಕೊಂಡವು. ಆಗ ಸರಕಾರ ಮೌನ ತಾಳಿತು. ಅದಕ್ಕೂ ಕಾರಣವಿಲ್ಲದಿಲ್ಲ. ನಮ್ಮ ಸರಕಾರವು ಕೇವಲ ಬಂದರಿನ ನಿರ್ಮಾಣಕ್ಕೆ ಮಾತ್ರವೇ ಹೊರಟಿಲ್ಲ. ಆ ಬಂದರಿನ ಸರಹದ್ದಲ್ಲಿ ಇನ್ನೂ ಅನೇಕ ಉದ್ಯಮಗಳ ಸ್ಥಾಪನೆಗೂ ಅವಕಾಶ ನೀಡುವ ಕೆಲವು ಯೋಜನೆಗಳನ್ನು ಪೂರ್ವಾಲೋಚನೆಯಿಂದಲೆ ತಾನು ಆಗಲೇ ಅದು ರೂಪಿಸಿಕೊಂಡಿತ್ತು. ಸರಕಾರ ಇಂತಿಷ್ಟು ಭೌಗೋಳಿಕ ಪ್ರದೇಶವನ್ನು ವಶಪಡಿಸಿಕೊಳ್ಳುತ್ತಿದ್ದೇನೆ ಎಂಬಅಧಿಸೂಚನೆಯನ್ನು ಮೊದಲೇ ಹೊರಡಿಸಿದ್ದರಿಂದ ಎಲ್ಲ ಕುಟುಂಬಗಳಿಗೆ ಸ್ಥಳಾಂತರವೀಗ ಅನಿವಾರ್ಯವಾಯಿತು.

ತಾನು ಒಂದು ಭೌಗೋಳಿಕ ಪ್ರದೇಶವನ್ನು ವಶಪಡಿಸಿಕೊಳ್ಳುತ್ತಿದ್ದೇನೆ ಎಂದು ಸರಕಾರ ವಾದಿಸಿದರೂ ಅದು ಇಡೀ ಒಂದು ಸಾಂಸ್ಕೃತಿಕ ಪ್ರದೇಶದ ವಶಪಡಿಸಿಕೊಳ್ಳುವಿಕೆ ಎಂಬ ಸತ್ಯವನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ. ತಾನು ಬದುಕಿ ಬಾಳಿದ ಇಂತಿಷ್ಟು ವಿಸ್ತೀರ್ಣದ ನಿಸರ್ಗದಲ್ಲಿ ಯಾವುದೇ ಒಂದು ಕುಟುಂಬ ತನ್ನದೇ ಆದ ಜೈವಿಕ ಪರಿಸರ ಹಾಗೂ ಸಾಂಸ್ಕೃತಿಕ ಪರಿಸರವನ್ನು ಮಾನಸಿಕವಾಗಿ ಒಪ್ಪಿಕೊಂಡು ಬದುಕು ಸಾಗಿಸುತ್ತಿರುವಾಗ ಹೊಸ ಪರಿಸರವೊಂದಕ್ಕೆ ಶಾಶ್ವತವಾಗಿ

ಸ್ಥಳಾಂತರಗೊಳ್ಳಬೇಕಾದ ಅನಿವಾರ್ಯತೆ ಉಂಟಾದಾಗ ಆ ಕುಟುಂಬ ಅನುಭವಿಸುವಂತಹ ಮಾನಸಿಕ ಕ್ಲೇಶ ಯಾವುದೇ ವಿವರಣೆಗೆ ದಕ್ಕುವಂತದ್ದಲ್ಲ. ಹೊಸಬಂದರು ಯೋಜನೆ ನಮ್ಮೂರಿಗೆ ಬರುತ್ತದಂತೆ ಎಂಬ ಸುದ್ದಿ ಬಂದಾಗ ತಮ್ಮದೇ ಆದ ಹತ್ತಾರು ಸಾಂಸಾರಿಕ, ಆರ್ಥಿಕ ಸಮಸ್ಯೆಗಳಲ್ಲಿ ತೊಳಲಾಡುತ್ತಿದ್ದ ನಮ್ಮ ದೊಡ್ಡಣ್ಣ ಶೆಟ್ಟು ಮತ್ತು ಗಂಗಯ್ಯಶೆಟ್ರು ಆ ಕ್ಷಣದಲ್ಲಿ ವೈಯಕ್ತಿಕ ಸಂಸಾರ ತಾಪತ್ರಯದ ಕಾರಣಕ್ಕಾಗಿ ಯಾವುದೇ ಪೂರ್ವಾಲೋಚನೆಯಿಲ್ಲದೆ ಹೊಸ ಬಂದರು ಯೋಜನೆಯನ್ನು ಮುಕ್ತಕಂಠದಲ್ಲಿ ಸ್ವಾಗತಿಸಿದ್ದವರು, ಇದೀಗ ಒಕ್ಕಲೇಳಬೇಕಾದ ಕ್ಷಣದಲ್ಲಿ ಅನುಭವಿಸಿದ ವೇದನೆಯಂತೂ ಅಷ್ಟಿಷ್ಟಲ್ಲ. ತಮ್ಮ ಸಾಂಸ್ಕೃತಿಕ ಬೇರನ್ನು ಕಳಚಿಕೊಂಡು ಬದಲಾದ ಜೈವಿಕ ಪರಿಸರದಲ್ಲಿ ಅದರಲ್ಲೂ ನಿರ್ವಸಿತರಿಗೆ ನೀಡುವ ನಿರ್ಜೀವ ಬರಡು ಭೂಮಿಯಲ್ಲಿ ಬದುಕು ಸಾಗಿಸಬೇಕಾದ ಅನಿವಾರ್ಯತೆ ಅವರಿಗೆ ಎದುರಾದಾಗ ಅವರು ಬಾಯ್ಕೊಟ್ಟೇ ಅತ್ತುಬಿಟ್ಟಿದ್ದರು.

ದಿನನಿತ್ಯದ ತಮ್ಮ ಬದುಕಲ್ಲಿ ಹಾಸುಹೊಕ್ಕಾಗಿದ್ದ ತಮ್ಮ ಸುತ್ತಲಿನ ಹೊಳೆ-ಕಡಲು-ಗುಡ್ಡ-ಬೈಲು-ಬೈಲಾರೆ ತೋಟಗಳ ನಡುವೆ ಅವರಿಗಿದ್ದ ಪರಸ್ಪರ ಸಂಬಂಧ ಮತ್ತು ಅವಲಂಬನೆ ಇದೀಗ ಅವರು ಹೊಸ ಪರಿಸರಕ್ಕೆ ಬಂದಾಗ ಅವರನ್ನು ತೀವ್ರವಾಗಿ ಕಾಡತೊಡಗಿತ್ತು. ನನ್ನ ಮಗಳ ಮದುವೆ ಹೇಗಾದರೂ ಮಾಡಿಯೇನು; ಸರಕಾರದ ಹಣವೂ ಬೇಡ – ಮಗನಿಗೆ ಕೆಲಸವೂ ಬೇಡ, ನನ್ನ ಮನೆ-ನನ್ನ ಅಂಗಳ, ನನ್ನ ಹಿತ್ತಿಲು-ತೋಟ ನನಗಿದ್ದರೆ ಸಾಕು' ಎಂದು ಗಂಗಯ್ಯಶೆಟ್ಟರು ಈಗ ಹಠ ಮಾಡಿದರೆ ಸರಕಾರವೇನು ಪಡೆದದ್ದನ್ನು ಬಿಟ್ಟು ಕೊಡುತ್ತದೆಯೇ? ಪುನರ್ವಸತಿ ಪಡೆದ ಆ ಬರಡು ಪ್ರದೇಶದಲ್ಲಿ ಅವರು ಮುಂದೆಂದಾದರೂ ಹೊಳೆ ಮುಖ ಕಾಣಲಿಕ್ಕಿದೆಯೇ, ಕಡಲ ಸೆರಗು ನೋಡಲಿಕ್ಕಿದೆಯೇ? ಅವರ ಒಡೆತನದಲ್ಲಿದ್ದ ಬೈಲುಗದ್ದೆ-ಬೈಲಾರೆ ಗದ್ದೆಗಳು ಅಸಂಖ್ಯ ಜೀವಿಗಳಿಗೆ – ಪ್ರಾಣಿ ಪಕ್ಷಿಗಳಿಗೆ ತೊಟ್ಟಿಲಾಗಿದ್ದಂತಹ ತಾಣ. ನೆರೆ ಬರುತ್ತೆ. ಹೊಳೆ ನೀರು ನುಗ್ಗುತ್ತೆ ಎಂಬುದೊಂದು ಆರೋಪ ಬಿಟ್ಟರೆ, ಇಂದಿಗೂ – ಅವರು ಹನಿಗಣ್ಣಾಗಿ ನೆನಪಿಸಿಕೊಳ್ಳುವುದು – ಈ ಹೊಸಬಂದರುನುಂಗಿ ನೊಣೆದುಹಾಕಿರುವ ಅವರಬೈಲುಗದ್ದೆಗಳನ್ನೇ.

ನಮ್ಮ ದೊಡ್ಡಣ್ಣಶೆಟ್ರು-ಗಂಗಯ್ಯಶೆಟ್ರಂತೆ ಇಲ್ಲಿ ನೆಲೆ ಕಳೆದುಕೊಂಡವರೆಲ್ಲ ಅಲ್ಲಿಗೆ ತಮ್ಮ ಹೊಸ ಪುನರ್ವಸತಿ ಪರಿಸರಕ್ಕೆ ಹೊರಟಾಗ ತಮ್ಮನ್ನು ತಾಯಿಯಂತೆ ಹೊರೆದ ತಮ್ಮ ಊರನ್ನು ಮನೆ ತೋಟ ನಿಸರ್ಗವನ್ನು ಮತ್ತೊಮ್ಮೆ ಹಿಂತಿರುಗಿ ಕಣ್ತುಂಬ ನೋಡುತ್ತ,

“ಅದು ನನ್ನಪ್ಪ ನೆಟ್ಟಿರುವ ಮಾವಿನಮರ... ಒಳ್ಳೆ ಜಾತಿಯದ್ದು; ಇದು ಕಿಟ್ಟು ಮಾವ ಪೆರುವಾಯಿಯಿಂದ ತಮ್ಮ ಹೆಂಡತಿ ಊರಿಂದ ತಂದು ಹಾಕಿರುವ ತುಳುವ ಹಲಸಿನ ಮರ; ಅಲ್ಲಿದೆಯಲ್ಲಾ.. ಅದು ನನ್ನ ಹೆಂಡತಿ ನೆನಪಿಗೆ ನಾನೇ ಅವಳು ಸತ್ತಾಗ ಈ ಕೈಯಾರೆ ನೆಟ್ಟಿರುವ ಕೆಂಡಸಂಪಿಗೆ ಮರ; ಇಲ್ಲೇ ಇದೆ ನೋಡು... ಅಪರೂಪದ ರಾಮಫಲದ ಗಿಡ... ನನ್ನ ದೊಡ್ಡಮಗಳ ಗಂಡನ ಮನೆಯದ್ದು...! ಇವೆಲ್ಲವನ್ನೂ ಹೇಗೆ ಬಿಟ್ಟು ಹೋಗುವುದೋ ಮಾರಾಯ ?’

‘ನನ್ನ ತೋಟದಲ್ಲಿ ನೋಡನಾ... ಎಷ್ಟಿದೆ ಕೆಂದಾಳೆ ಮರಗಳು! ಎಲ್ಲವೂ ನನ್ನಪ್ಪ ಇಟ್ಟಿದ್ದು... ನನ್ನ ಮಗನಿಗಿರಲಿ ಅಂತಾ; ನೋಡಲ್ಲಿ ನಮ್ಮ ಅಂಗಳದಲ್ಲಿ ನಾನೇ ಸ್ವತಹ ಕಟ್ಟಿರುವ ತುಳಸೀ ಕಟ್ಟೆ.., ಅದು ಎದುರಿಗಿರುವ ಸ್ಥಾನ ಇದೆಯಲ್ವಾ.. ಅದು ನಮ್ಮ ಕುಟುಂಬದವರೆಲ್ಲ ಸೇರಿ ಕಟ್ಟಿಸಿದ್ದು ದೈವ ವಾರ್ತೆ – ಪಂಜುರ್ಲಿಯದ್ದು...’

‘ನೋಡಲ್ಲಿ ನಮ್ಮ ನಂದನೇಶ್ವರನ ದೇವಸ್ಥಾನ, ಒಳ್ಳೆ ಕಾರ್ಣಿಕದ ದೇವ್ರು. ಆದರೆ ನಮ್ಮನ್ನೆಲ್ಲ ಊರು ಬಿಡಿಸಿ, ತಾನು ಮಾತ್ರ ಆ ಸರಕಾರದ ಅಧಿಕಾರಿಗಳನ್ನೆಲ್ಲ ಬೆದರಿಸಿ ತನ್ನ ದೇವಸ್ಥಾನವನ್ನು ಮಾತ್ರ ಉಳಿಸಿಕೊಂಡು ಬಿಟ್ಟು ನೋಡಾತನ ಧ್ವಜಸ್ತಂಭ... ಗರ್ಭಗುಡಿ; ನಿನ್ನೆದುರಿಗಿರುವ ಕಾವೇರಿಸ್ಥಾನದ ಜುಮಾದಿದೈವ ಕೂಡಾ ಎತ್ತಂಗಡಿಯಂತೆ! ವಾರದೊಳಗೆತೋರ್ತಲ್‌ಗೆ(ಸುರತ್ಕಲ್‌ಗೆ) ಹೋಗುತ್ತಂತೆ. ನೋಡು ಮಾರಾಯ. ನಮ್ಮನ್ನೆಲ್ಲ ಕಾಪಾಡಿದ ಈ ಕಾವೇರಿಸ್ಥಾನದ ದೈವದ ಸ್ಥಿತಿಯನ್ನು’ –

ಅರೆ! ಒಂದೇ ಎರಡೇ. ನೆನಪಿನಲ್ಲಿ ಒತ್ತಿಕೊಳ್ಳಬೇಕಾದುದು? ಪ್ರತಿಯೊಬ್ಬ ನೆಲೆ ಕಳೆದುಕೊಳ್ಳುವವನೂ ಕೊನೆಯದಾಗಿ ತನ್ನ ಚಿತ್ತದಲ್ಲಿ ಒತ್ತಿಕೊಳ್ಳಬೇಕಾದ ನೆನಪಿನ ಸ್ಮಾರಕಗಳು ಅದೆಷ್ಟೋ! ಮನೆಯ ತುಳಸಿಕಟ್ಟೆಯಿಂದ ಹಿಡಿದು ಇದುವರೆಗೂ ತಮಗೆ ನೆರಳು–ಗಾಳಿ–ಫಲಕೊಟ್ಟ ಮರ–ಗಿಡ–ಬಳ್ಳಿಗಳನ್ನು, ಅನ್ನ ಕೊಟ್ಟ ಮಜಲು, ಬೈಲು, ತೋಟಗಳನ್ನು... ಹಾಗೆಯೇ ಬಿಟ್ಟು ಹೊರಡುವುದೆಂದರೆ...! ಶಕುಂತಲೆ, ಪತಿ ದುಷ್ಯಂತನನ್ನು ಸೇರ ಹೊರಟಾಗ ಕಣ್ವಾಶ್ರಮವನ್ನು ಅದರ ಸುತ್ತಲ ಜೀವ ಪರಿಸರವನ್ನು ಅಗಲಲಾಗದೆ ಹೇಗೆ ಪರಿತಪಿಸಿ ಅತ್ತಳೋ.. ಅದಕ್ಕಿಂತ ನೂರುಪಟ್ಟು ಮಿಗಿಲಾಗಿತ್ತು. ನೆಲೆ ಕಳೆದುಕೊಂಡವರ ಅಗಲುವಿಕೆಯ ಪರಿತಾಪ ದುಃಖ, ಶಕುಂತಲೆಗಾದರೂ ಮರಳಿಬಂದರೆ ತಂದೆಯ ಕಣ್ವಾಶ್ರಮದಲ್ಲಿ ಹಕ್ಕಿನ ಆಶ್ರಯವಿತ್ತು. ಆದರೆ ಇಲ್ಲಿ ನೆಲೆ ಕಳೆದುಕೊಂಡು ಹೊರಟವರಿಗೆ? ಅವರ ಸಮಸ್ತ ನೆನಪಿನ ಸ್ಮಾರಕಗಳೆಲ್ಲ ನಿಧಾನಕ್ಕೆ ಕಡಲ ಒಡಲಿಗೆ ಸೇರಿ ಮುಳುಗಲಿವೆ ಎಂಬ ಕಾರಣಕ್ಕಾಗಿ ಅವರು ಕರುಳು ಕಿತ್ತುಕೊಳ್ಳುವಂತೆ ಕಣ್ಣೀರು ಹಾಕುವುದೊಂದೇ ಅವರಿಗೆ ಉಳಿದ ದಾರಿಯಾಗಿತ್ತು.

ಅಂತೂ ಒಕ್ಕಲೆಬ್ಬಿಸುವ ಕೆಲಸ ಪೂರ್ತಿಯಾಯಿತು. ತಕ್ಷಣವೆ ಬಂದರಿನ ನಿರ್ಮಾಣಕಾರ್ಯ ಬಿರುಸಿನಿಂದ ಆರಂಭಗೊಂಡಿತ್ತು. ಪಣಂಬೂರು ಸೀಮೆಯ ಕಡಲಂಚನ್ನು ಆಳಗೊಳಿಸಿ ಕಡಲನ್ನು ಒಂದಿಷ್ಟು ಇತ್ತ ಎಳೆತಂದು, ಕಡಲ ಒಡಲಿಂದ ಮರಳು ಬಗೆದು ಅತ್ತ ಒಗೆವ ಕೆಲಸಕ್ಕೆ ದೇಶ–ಪರದೇಶದ ಯಂತ್ರ ಸಾಮಗ್ರಿ ಜತೆಗೆ ತಂತ್ರಜ್ಞರು ಇಲ್ಲಿಗೆ ಹಾರಿಬಂದರು. ಕೆಲವು ಅಮಾವಾಸ್ಯೆ ಕಳೆಯುವಷ್ಟರಲ್ಲಿ ಬಂದರು ಪ್ರದೇಶಕ್ಕೆ ತಾಗಿಕೊಂಡಂತಿದ್ದ ನಮ್ಮೂರು ಬರೀ ಪರವೂರು–ಪರದೇಶಿಗರಿಂದ ತುಂಬಿ ತುಳುಕತೊಡಗಿ ನಾವೇ ಎಲ್ಲಾದರೂ ಪರವೂರಲ್ಲಿದ್ದೇವೇನೋ ಅಥವಾ ನಾವೇ ಪರದೇಶಿಗಳಾಗುತ್ತಿದ್ದೇವೇನೋ ಎಂಬ ಭಾವ ನಮ್ಮನ್ನು ಕಾಡತೊಡಗಿತ್ತು. ಊರು, ದೇಶದ ಇಪ್ಪತ್ತೇಳನೇ ಸ್ವಾತಂತ್ರ್ಯ ಹಬ್ಬವನ್ನು ಆಚರಿಸುವ ವೇಳೆಗೆಲ್ಲ ಬಂದರಿನ ನಿರ್ಮಾಣ ಕಾರ್ಯವೆಲ್ಲ ಮುಗಿದು ಮುಂದಿನ ಐದು ತಿಂಗಳಲ್ಲದು ಪ್ರಧಾನಿ ಇಂದಿರಾಗಾಂಧಿಯವರಿಂದ ಉದ್ಘಾಟಿಸಲ್ಪಟ್ಟಿತು.

ಅತ್ತ ಬಂದರು ನಿರ್ಮಾಣವಾಗುತ್ತಿದ್ದಂತೆ ಇತ್ತ ನಮ್ಮೂರ ನಸೀಬು ಒಮ್ಮಿಂದೊಮ್ಮೆಗೇ ಬದಲಾಗತೊಡಗಿತ್ತು. ಬಂದರಿನ ಹೊಸ 'ಗಾಳಿಗೆ' ಊರು ಸಿಕ್ಕಾಪಟ್ಟೆ ಬೆಳೆಯತೊಡಗಿತ್ತು. ಬಂದರು ಕಾರ್ಮಿಕರಿಗಾಗಿ ನೌಕರರಿಗಾಗಿ ಊರಲ್ಲಿ ಹೊಟೇಲು ಅಂಗಡಿಗಳು ತೆರೆಯಲ್ಪಟ್ಟವು. ಬಾಡಿಗೆ ಮನೆಗಳೂ ದಿಢೀರನೆ ಸಿದ್ಧವಾದವು. ದನದ ಕೊಟ್ಟಿಗೆ, ಬಚ್ಚಲುಮನೆಗಳೆಲ್ಲವೂ ಬಾಡಿಗೆ ಮನೆಗಳಾಗಿ ರೂಪಾಂತರಗೊಂಡವು, ಊರಿಗದು ಭೂಷಣವೆಂಬಂತೆ ಸಾರಾಯಿ ಸೇಂದಿ ಅಂಗಡಿಗಳ ಸಂಖ್ಯೆಯೂ ವೃದ್ಧಿಗೊಂಡಿತು. ಯಾವ ಹೊಸ ವ್ಯಾಪಾರ ಹಾಕಿ ಪರವೂರ ಮಂದಿಯಿಂದ ಎಷ್ಟು ದೋಚಬಹುದು ಎಂಬ ಆಲೋಚನೆಯಲ್ಲೇ ನಮ್ಮ ಊರಮಂದಿ ಸುಸ್ತಾದರು.

ಆ ಸುಸ್ತಿನ ಜತೆಗೆ ಪರವೂರಿಂದ ಬಂದವರು ನಡೆಸುತ್ತಿದ್ದ ದಾಂಧಲೆ, ಅನೀತಿಯ ಬದುಕಿನ ಪರಿಯೂ ಈ ಊರಮಂದಿಗೆ ಇನ್ನಷ್ಟು ಸುಸ್ತು ಬರಿಸಿತಲ್ಲದೆ ದೊಡ್ಡ ತಲೆನೋವಾಗಿಯೂ ಪರಿಣಮಿಸತೊಡಗಿತ್ತು. ಹೆಣ್ಣು ಹೆತ್ತವರೆಲ್ಲ ತಮ್ಮ ತಮ್ಮ ಹೆಣ್ಣು ಮಕ್ಕಳನ್ನು ರಕ್ಷಿಸುವ ಚಿಂತೆಯ ಜತೆಗೆ ತಮ್ಮ ಹೆಣ್ಮಕ್ಕಳ ಕೊರಳಿಗೊಂದು ಸುರಕ್ಷಿತವಾಗಿ ತಾಳಿ ಬಿಗಿಸಿ ಮರ್ಯಾದೆಯಿಂದ ಗಂಡನ ಮನೆಗೆ ಕಳುಹಿಸಿಕೊಡುವ ಯೋಚನೆಯಲ್ಲೇ ಅವರು ಹೆಚ್ಚು ಕಾಲ ಮಗ್ನರಾಗಬೇಕಾಯಿತು. ಪರವೂರಿಗರಿಂದ ಊರು ಬೆಳೆದಂತೆ ಕಳ್ಳತನ ದರೋಡೆಗಳೂ ಅಲ್ಲಲ್ಲಿ ನಡೆಯತೊಡಗಿದವು. ಆ ಪುಂಡರನ್ನು ಹಿಡಿಯಲು ಪೊಲೀಸ್ ಠಾಣೆಗಳೂ ಹುಟ್ಟಿಕೊಂಡವು.

ಹೀಗೆ ಪರವೂರ ಕಳ್ಳರ ಜತೆ ಊರ ಸುಭಗರ ಮಕ್ಕಳೂ ಸೇರಿಕೊಂಡು ಕಳ್ಳತನಕ್ಕಿಳಿದಾಗ ಊರಿನ ಮಾನ ಹೋಗಿ ಪೊಲೀಸ್ ಠಾಣೆಯಲ್ಲಿ ಕೂರುವ ಸಂದರ್ಭವೇ ಅಧಿಕವಾಯ್ತು. ಊರು ಬೆಳೆಯುವಾಗ ಇದು ಮಾಮೂಲು ಎಂದು ಹೇಳಿದರು – ಪರವೂರಿಂದ ಬಂದವರು. ಹೊಸ ಬಂದರಿನ ನಿರ್ಮಾಣ ಕಾರ್ಯವಾದೊಡನೆ ಅದರ ಮುಂಭಾಗದಲ್ಲೇ ಸ್ಥಾಪನೆಯಾದ ಬೃಹತ್ ಉದ್ಯಮ ಮಂಗಳೂರು ರಾಸಾಯನಿಕ ಮತ್ತು ರಸಗೊಬ್ಬರದ ಕಾರ್ಖಾನೆ. ಅದರ ಪಕ್ಕದಲ್ಲೇ ತಲೆ ಎತ್ತತೊಡಗಿದ ಭಾರತೀಯ ತೈಲ ನಿಗಮದ ತೈಲಸಂಗ್ರಹಣಾ ಘಟಕ, ಬಲಭಾಗದಲ್ಲಿ ಸ್ಥಾಪನೆಗೊಂಡ ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆಯ 'ಸ್ಲರಿ ಸಂಗ್ರಹಣಾ ಘಟಕ' ಕೇವಲ ಒಂದು ಕಿ.ಮೀ. ದೂರದಲ್ಲಿ ಎದ್ದು ಕೂತ ಕೈಗಾರಿಕಾ ಎಸ್ಟೇಟ್.... ಹೀಗೆ ಬಂದರಿನ ಸುತ್ತಮುತ್ತ ಎದ್ದು ಕೂತ ಉದ್ಯಮಗಳು ಒಂದೇ ಎರಡೇ.... ಹಲವು.

ಇವೆಲ್ಲ ಉದ್ಯಮಗಳು ನಮ್ಮೂರಿಗೆ ತೀರಾ ಭಾರವಾಗುವಷ್ಟು ಉದ್ಯೋಗಿಗಳನ್ನು ನೆಲೆಗೊಳಿಸಲಾರಂಭಿಸಿದಂತೆ ಮೊದಲೇ ಊರಲ್ಲಿದ್ದ ಸಮಸ್ಯೆ ಮತ್ತಷ್ಟು ಉಲ್ಬಣವಾಗತೊಡಗಿತ್ತು. ಊರ ಜನಸಂಖ್ಯೆ – ಬಾಡಿಗೆಮನೆ ಹೆಚ್ಚಿದಂತೆ ಊರಿನ ವ್ಯಾಪಾರ ವಹಿವಾಟೂ ವಿಪರೀತವಾಗಿ ಹೆಚ್ಚಿತು. ಈ ವಹಿವಾಟಿನಿಂದ ಕೈಯಲ್ಲಿ ಕಾಸಿನ ಚಲಾವಣೆ ಹೆಚ್ಚಿದಂತಾಗಿ ಮನಸ್ಸು ಕೂಡಾ ನಿಧಾನಕ್ಕೆ ವ್ಯಾವಹಾರಿಕವಾಗತೊಡಗಿತ್ತು. ಮನುಷ್ಯರ ಸಂಬಂಧಗಳು ಕೂಡಾ ಅದೇ ದಾರಿ ಹಿಡಿದವು. ದಿಢೀರನೆ ಹಣ ಮಾಡುವ ದಾರಿಗಳು ಸ್ಪಷ್ಟವಾಗುತ್ತಿದ್ದಂತೆ ಎಳೆತಲೆಗಳಿಗೆ ಕೃಷಿ ಭೂಮಿಯಲ್ಲಿ ದುಡಿಯುವುದು ತೀರಾ ಮೂರ್ಖತನವೆಂದೆನಿಸತೊಡಗಿತ್ತು. ಕೃಷಿಯಲ್ಲಿ ಏನು ಸಿಗುತ್ತೆ ಬರೀ ಮಣ್ಣು ಎಂದು ಹೀಗಳೆದ ಎಳೆತಲೆಗಳು ಅವುಗಳನ್ನು ಪಾಳು ಬೀಳಿಸತೊಡಗಿ, ನಿಧಾನಕ್ಕೆ ಆ ಭೂಮಿಯನ್ನು ಬಾಡಿಗೆ ಮನೆ, ಸೈಟುಗಳನ್ನಾಗಿ ಮಾರ್ಪಡಿಸಿಕೊಂಡವು.

ಅಲ್ಲಿಂದಲೇ ಹಚ್ಚ ಹಸುರಾದ ನಮ್ಮ ಕೃಷಿ ಭೂಮಿ ತೋಟಗಳೆಲ್ಲ ಬಾಡಿಗೆ ಮನೆಗಳ ಕಾಡಾಗತೊಡಗಿದ್ದವು. ಇವೆಲ್ಲವೂ ಹೊಸಬಂದರಿನ ಮಹಿಮೆ ಎಂದು ಅಲ್ಲಿ ಭೂಮಿ ಕಳೆದುಕೊಂಡಿದ್ದ ದೊಡ್ಡಣ್ಣಶೆಟ್ಟರು, ಗಂಗಯ್ಯಶೆಟ್ರಂತ ಹಳೆ ತಲೆಗಳು ಹೊಸ ಬಂದರಿನ ಬಗ್ಗೆ ಕಿಡಿ ಕಾರತೊಡಗಿದರೆ ಎಳೆತಲೆಗಳು ಅದನ್ನು ಒಪ್ಪಲು ಸಿದ್ಧವಿಲ್ಲ. ಹೊಸ ಬಂದರಿನ ಬಗ್ಗೆ ಕಿಡಿ ಕಾರುತ್ತಿದ್ದ ದೊಡ್ಡಣ್ಣಶೆಟ್ರು ಸಿಡಿದೇಳುವಂತಹ ಭೀಕರ ದುರಂತವೊಂದು ಅವರು ಬದುಕಿ ಬಾಳಿದ್ದ ಕೂಳೂರು ನದಿಯ ಪಕ್ಕದಲ್ಲೇ ನಡೆದು ಹೋಯ್ತು. ಆಗಷ್ಟೇ ಬಂದರಿನ ಮುಂದೆಯೇ ಎದ್ದ ಮಂಗಳೂರು ಗೊಬ್ಬರ ಕಾರ್ಖಾನೆಯು ಆರಂಭಗೊಂಡ ವರ್ಷದಲ್ಲಿ (1976) ತನ್ನ ತ್ಯಾಜ್ಯ ವಸ್ತುಗಳನ್ನು ಪಕ್ಕದಲ್ಲೇ ಹರಿಯುತ್ತಿದ್ದ ಕೂಳೂರು ನದಿಗೆ ಬಿಟ್ಟು ಸುಮಾರು 12 ಟನ್‌ಗಳಷ್ಟು ಕಡಲ ಮೀನುಗಳ ಸಾವಿಗೆ ಕಾರಣವಾಯ್ತು! ಆ ಕಡಲ

ಸೆರಗಲ್ಲಿ ಮೀನುಗಾರಿಕೆಯನ್ನೇ ಆಶ್ರಯಿಸಿ ಬದುಕುತ್ತಿದ್ದ ಮೀನುಗಾರರೆಲ್ಲ ಕಂಗಾಲಾಗಿ ಸಣ್ಣ ಪ್ರತಿಭಟನೆ ನಡೆಸಿದಾಗ, ಆ ಪ್ರತಿಭಟನೆಯಲ್ಲಿ ದೊಡ್ಡ ಗಂಟಲಿನ ಈ ದೊಡ್ಡಣ್ಣ ಶೆಟ್ಟರೂ ಸೇರಿಕೊಂಡು ಪ್ರತಿಭಟನೆ ನಡೆಸಿ ತಮ್ಮ ಚಿತ್ತಕ್ಕಷ್ಟು ಶಾಂತಿಯನ್ನು ಪ್ರಾಪ್ತಿಮಾಡಿಕೊಂಡಿದ್ದರು.

ಪಣಂಬೂರು ಬಂದರು ನಿರ್ಮಾಣವಾದ ನಂತರ ಎದ್ದ ಎಲ್ಲ ಉದ್ಯಮಗಳು ನಮ್ಮೂರ ಪ್ರಾಕೃತಿಕ ಪರಿಸರ, ಜೀವ ಪರಿಸರವನ್ನು ಹದಗೆಡಿಸತೊಡಗಿತಲ್ಲದೆ, ಊರಿನ ಸಾಂಸ್ಕೃತಿಕ ಪರಿಸರವನ್ನೂ ಕೆಡಿಸತೊಡಗಿದ್ದು, ಇನ್ನೊಂದು ದುರಂತ. ಅಂದು ಕಿಂಚಿತ್ತು ಪರಿಸರ ಪ್ರಜ್ಞೆಯಿಲ್ಲದೆ ನಾವು ಔದ್ಯಮೀಕರಣದ ಬಲೆಗೆ ನಮ್ಮೂರನ್ನು ಸಿಲುಕಿಸಿಕೊಟ್ಟ ನಂತರ ಇಂದು ಸಾಂಸ್ಕೃತಿಕ ಪರಿಸರ ಕಲುಷಿತಗೊಂಡಿತು ಅಥವಾ ಕೆಟ್ಟಿತು ಎಂದು ಹಲುಬುವುದು ಮೂರ್ಖತನವೇ ನಿಜ.

ನಮ್ಮೂರಿಗೆ ಹೊಸ ಬಂದರು ಬಂದು ಇಂದಿಗೆ ಮೂವತ್ತು ವರ್ಷಗಳಾಗುತ್ತಿವೆ. ಯಾವತ್ತಾದರೂ ತವರುಮನೆ ಕಡ ತಲೆ ಹಾಕಿದರೆ ಅಲ್ಲಿ ಬರೀ ಪರವೂರಿಗರದ್ದೇ ಮುಖದರ್ಶನ! ಆ ಕ್ಷಣ ಅದು ನನ್ನ ತವರೂರು ಎಂದು ಅನಿಸುವುದೇ ಇಲ್ಲ. ಆ ಹೊಳೆಯೂ ನಮ್ಮದಲ್ಲ. ಆ ಕಡಲೂ ನಮ್ಮದಲ್ಲ... ಆ ಗಾಳಿಯೂ ನಮ್ಮದಲ್ಲ ಎಂಬ ಭಾವನೆಯೇ ತುಂಬಿಕೊಳ್ಳುತ್ತದೆ. ರಾತ್ರಿಯೇನಾದರೂ ಅಪ್ಪಿತಪ್ಪಿ ಮಹಡಿಯೇರಿ ಮುಗಿಲು ದಿಟ್ಟಿಸಿದರೆ ಸಾಕು, ಆ ಬಾನೂ ನಮ್ಮದಲ್ಲ ಎಂದೇ ಅನಿಸಿಬಿಡುತ್ತದೆ. ಬಾಲ್ಯದಲ್ಲಿ, ಗೋಧೂಳಿ ಕಾಲ ಕಳೆದೊಡನೆ ನಾವು ಮಹಡಿ ಏರಿ ನಿಂತು ಬಾನು ದಿಟ್ಟಿಸಿದರೆ ಸಾಕು ಬಾನಲ್ಲಿ ನಮಗೆ ಕಾಣಿಸುತ್ತಿದ್ದ ಬೆಳಕಿನ ಹನಿಗಳು ಎಷ್ಟು ಅಸಂಖ್ಯ. ಆದರೆ ಇಂದು ನಮ್ಮೂರ ಕಡಲಸೆರಗಲ್ಲಿ ಹಲವು ಉದ್ಯಮಗಳು ಹುಟ್ಟಿಕೊಂಡ ನಂತರ ನಾವು ಚುಕ್ಕಿ ಎಣಿಸಲು ಮಹಡಿ ಏರಿದರೆ ನಮಗೀಗ ಕಾಣುವುದು, ಆಕಾಶಕ್ಕೆ ಹಗಲಿರುಳು ವಿಷ ಉಗುಳುವ ದಟ್ಟ ಹೊಗೆಯ 'ವೈಭವ' ಮಾತ್ರ!

******

## 4. ಕೃಷಿ ಉತ್ಪನ್ನಕ್ಕೂ ಆನ್‌ಲೈನ್ ಸ್ಪರ್ಶ ( ಓದುಪಠ್ಯ)

**– ಸಚ್ಚಿದಾನಂದ ಕುರಗುಂದ**

**ಆಶಯ :**

ಕೃಷಿಯನ್ನು ಭಾರತದ ಬೆನ್ನೆಲುಬು ಎನ್ನುತ್ತೇವೆ. ಆದರೆ ರೈತನಿಗೆ ಆತ ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ಎಷ್ಟೋ ಸಲ ಪರದಾಡುತ್ತಾನೆ. ಮಧ್ಯವರ್ತಿಗಳು ಲಾಭ ಪಡೆದು ರೈತ ಬಡವನಾಗಿಯೇ ಉಳಿಯುತ್ತಾನೆ. ಇದಕ್ಕೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ರಾಜ್ಯ ಕೃಷಿ ಉತ್ಪನ್ನ ಆನ್‌ಲೈನ್ ಮಾರುಕಟ್ಟೆ ಆರಂಭಿಸಲಾಗಿದೆ. ಇಲ್ಲಿ ರೈತರು ವರ್ತಕರ ಅಥವಾ ದಲ್ಲಾಳಿಗಳ ಬೆನ್ನು ಹತ್ತಿ ಹಣಕ್ಕಾಗಿ ಅಲೆದಾಡಬೇಕಾಗಿಲ್ಲ. ನೇರವಾಗಿ ರೈತನ ಖಾತೆಗೆ ಹಣ ಪಾವತಿಸುವ ವ್ಯವಸ್ಥೆ ಇಲ್ಲಿದೆ. ಜೊತೆಗೆ ಸ್ಪರ್ಧಾತ್ಮಕ ದರದಲ್ಲಿ ಕೃಷಿ ಉತ್ಪನ್ನಗಳಿಗೆ ಬೆಲೆ ದೊರಕಿಸಿಕೊಡುವ ಪ್ರಯತ್ನ ಈ ಮಾರುಕಟ್ಟೆಯ ಉದ್ದೇಶಗಳಲ್ಲೊಂದಾಗಿದೆ. ಆ ಕುರಿತು ಒಂದು ಚಿಕ್ಕ ಮಾಹಿತಿಯೂ ಇಲ್ಲಿ ಸೇರಿದೆ.

ಕಿರಿದಾಗಿರುವ ಜಗತ್ತಿನಲ್ಲಿ ವ್ಯಾಪಾರ ವಹಿವಾಟು ಗಡಿಗಳನ್ನು ಮೀರಿ ಬೆಳೆದಿದೆ. ಬೆರಳ ತುದಿಯ ಸ್ಪರ್ಶದಲ್ಲೇ ನಡೆಯಲು ಆರಂಭವಾಗಿರುವ ವಹಿವಾಟು ಮಣ್ಣಿನ ಮಕ್ಕಳು ನಿಬ್ಬೆರಗಾಗುವಂತೆ ಮಾಡಿದೆ.

ಅಂತರ್ಜಾಲದ ನಂಟು ಬೆಸೆದುಕೊಂಡು ಕ್ಷಣ ಮಾತ್ರದಲ್ಲೇ ವಸ್ತುಗಳನ್ನು ಖರೀದಿಸಬಹುದಾದ ಅಥವಾ ಮಾರಾಟ ಮಾಡಬಹುದಾದ ಆನ್‌ಲೈನ್ ವ್ಯವಸ್ಥೆ ಈಗ ಮಾರುಕಟ್ಟೆಯ ಅವಿಭಾಜ್ಯ ಅಂಗ, ರಾಜ್ಯದಲ್ಲಿನ ಕೃಷಿ ಭೂಮಿಯಲ್ಲಿ ಬೆಳೆಯುವ ಉತ್ಪನ್ನಗಳೂ ಸಹ ಈಗ ಆನ್‌ಲೈನ್ ಮಾರಾಟ ವಹಿವಾಟಿಗೆ ಸೇರ್ಪಡೆಯಾಗುವ ಮೂಲಕ ಬದಲಾವಣೆಯ ಶಕೆ ಆರಂಭವಾಗಿದೆ. ಇಡೀ ರಾಜ್ಯದ ಮಾರುಕಟ್ಟೆಯನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ಬೆಲೆ ಕುಸಿತವನ್ನು ಸಹ ನಿಯಂತ್ರಿಸಬಲ್ಲದು.

ಗುಲ್ಬರ್ಗದ ವರ್ತಕ ಅಲ್ಲಿಂದಲೇ ತಿಪಟೂರಿನಲ್ಲಿರುವ ಕೊಬ್ಬರಿಯನ್ನು ಖರೀದಿಸಬಹುದು. ಬೆಂಗಳೂರಿನ ಖರೀದಿದಾರ ಚಿತ್ರದುರ್ಗದ ಮೆಕ್ಕೆಜೋಳವನ್ನು ರಾಜಧಾನಿಯಲ್ಲಿದ್ದುಕೊಂಡೇ ಆನ್‌ಲೈನ್‌ನಲ್ಲೇ ಖರೀದಿಸಬಹುದು. ಒಟ್ಟಾರೆಯಾಗಿ ದೇಶದೆಲ್ಲೆಡೆಯ ವರ್ತಕರಿಗೂ ರಾಜ್ಯದ ಕೃಷಿ ಮಾರುಕಟ್ಟೆಯಲ್ಲಿ ಮಾರಾಟಕ್ಕಿಡಲಾಗಿರುವ ಕೃಷಿ ಉತ್ಪನ್ನಗಳ ಮಾಹಿತಿ ಸುಲಭದಲ್ಲಿ ಅಂತರ್ಜಾಲದಲ್ಲಿ ಲಭ್ಯವಾಗುತ್ತದೆ. ಕೃಷಿ ಉತ್ಪನ್ನ ಖರೀದಿಯಲ್ಲಿ ಸ್ಪರ್ಧೆ ಏರ್ಪಟ್ಟರೆ ಅತ್ಯುತ್ತಮ ಬೆಲೆಯೂ ರೈತರಿಗೆ ದೊರೆಯಲು ಅವಕಾಶವಾಗುತ್ತದೆ.

ರೈತರು ಸಹ ವರ್ತಕರ ಅಥವಾ ದಲ್ಲಾಳರ ಬೆನ್ನುಹತ್ತಿ ಹಣಕ್ಕಾಗಿ ಅಲೆದಾಡಬೇಕಾಗಿಲ್ಲ. ಕೃಷಿ ಉತ್ಪನ್ನಗಳು ಮಾರಾಟವಾದ ತಕ್ಷಣ ನೇರವಾಗಿ ರೈತರ ಖಾತೆಗೆ ಹಣ ಪಾವತಿಸುವ ವ್ಯವಸ್ಥೆಯೂ ಇಲ್ಲಿದೆ. ಕೃಷಿ ಮಾರಾಟ ಇಲಾಖೆ ಇಂತಹ ಪ್ರಯೋಗ ಜಾರಿಗೊಳಿಸುವ ಮೂಲಕ ರೈತರಿಗೆ ಸ್ಪರ್ಧಾತ್ಮಕ ದರದಲ್ಲಿ ಕೃಷಿ ಉತ್ಪನ್ನಗಳಿಗೆ ಬೆಲೆ ದೊರಕಿಸಿಕೊಡುವ ಪ್ರಯತ್ನ ಆರಂಭಿಸಿದೆ. ಜತೆಗೆ ದೇಶದ ಎಲ್ಲ ಮಾರುಕಟ್ಟೆಗಳ ಜೊತೆಗೂ ರಾಜ್ಯದ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಅಂತರ್ಜಾಲದ ಮೂಲಕ ಜೋಡಿಸುವ ಪ್ರಯತ್ನವೂ ಇದಾಗಿದೆ.

ಪ್ರಥಮವಾಗಿ ರಾಜ್ಯದಲ್ಲಿ ಜಾರಿಗೆ ಬಂದಿರುವ ಆನ್‌ಲೈನ್ ಮಾರಾಟ ವ್ಯವಸ್ಥೆ ಕೃಷಿ ಕ್ಷೇತ್ರದಲ್ಲಿ ಮತ್ತು ರೈತರ ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದೆ ಎಂದೇ ಆಶಿಸಲಾಗಿದೆ. ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಸರಳ ಪ್ರಕ್ರಿಯೆ, ನಿಖರತೆ, ಪಾರದರ್ಶಕತೆ ತರುವ ಮೂಲಕ ಮಾರಾಟ ವ್ಯವಸ್ಥೆಯನ್ನು ಸುಗಮ ಹಾಗೂ ಸುವ್ಯವಸ್ಥಿತಗೊಳಿಸುವ ಸದುದ್ದೇಶದಿಂದ ರಾಜ್ಯ ಸರ್ಕಾರ **'ಕೃಷಿ ಮಾರಾಟ ನೀತಿ–2013'** ಜಾರಿಗೊಳಿಸಿದೆ. ನಿಗದಿತ ಸಮಯದಲ್ಲಿ ಸ್ಪರ್ಧಾತ್ಮಕ ಪೈಪೋಟಿಯೊಂದಿಗೆ ರೈತರ ಉತ್ಪನ್ನಗಳಿಗೆ ಗುಣಮಟ್ಟಕ್ಕೆ ತಕ್ಕ ಬೆಲೆ ಒದಗಿಸುವುದರ ಜೊತೆಗೆ ರೈತರಿಗೆ ತಮ್ಮ ಉತ್ಪನ್ನಗಳು ಮಾರಾಟವಾದ ತಕ್ಷಣ ಹಣ ಸಂದಾಯವಾಗುವಂತೆ ಪೂರಕ ವ್ಯವಸ್ಥೆ ಕಲ್ಪಿಸುವುದು ನೀತಿಯ ಉದ್ದೇಶ.

ರೈತರು ಬೆಳೆದ ಬೆಳೆಗಳ ಗುಣಮಟ್ಟಕ್ಕೆ ತಕ್ಕ ಬೆಲೆ ದೊರೆಯುವಂತಾಗಲು ಸ್ಪರ್ಧಾತ್ಮಕ ಪೈಪೋಟಿ ಬಹುಮುಖ್ಯ. ಒಂದು ಪ್ರದೇಶದಲ್ಲಿ ರೈತರು ಮಾರಾಟಕ್ಕಾಗಿ ತಂದ ಉತ್ಪನ್ನಗಳನ್ನುವಿದ್ಯುನ್ಮಾನ ವೇದಿಕೆ ಮೂಲಕ ಅಂತರ್ಜಾಲದಲ್ಲಿ ಪ್ರಸಾರ ಮಾಡಿದರೆ ಹೆಚ್ಚಿನ ಸಂಖ್ಯೆಯಲ್ಲಿ ಖರೀದಿದಾರರು ಪೈಪೋಟಿ ನಡೆಸುವುದರಿಂದ ಯೋಗ್ಯ ಬೆಲೆ ದೊರೆಯಲು ಸಹಕಾರಿಯಾಗುವುದು ಹಾಗೂ ಮಾರುಕಟ್ಟೆಯ ಕಾರ್ಯಕ್ಷಮತೆ ಹೆಚ್ಚಾಗುವುದು. ಈ ನಿಟ್ಟಿನಲ್ಲಿ ಕೃಷಿ ಮಾರಾಟ ಇಲಾಖೆ ಇಂತಹ ವೇದಿಕೆಯನ್ನು ನಿರ್ಮಿಸಿದೆ.

ರೈತರು ತಮ್ಮ ಉತ್ಪನ್ನದ ಗುಣಮಟ್ಟ, ವರ್ಗ ಹಾಗೂ ಇತರೆಗುಣಲಕ್ಷಣಗಳ ಮಾಹಿತಿಯನ್ನು ಅಂತರ್ಜಾಲದಲ್ಲಿ ನೀಡಿದ ನಂತರ ಕೃಷಿಮಾರಾಟ ಇಲಾಖೆಯ ನಿರ್ದೇಶಕರಿಂದ ಲೈಸನ್ಸ್ ಪಡೆದ ಯಾವುದೇ ಭಾಗದ ವರ್ತಕರು ತಾವಿರುವ ಸ್ಥಳದಿಂದಲೇ ಆನ್‌ಲೈನ್ ವೇದಿಕೆಯಲ್ಲಿಉತ್ಪನ್ನಗಳಿಗೆ ಬೆಲೆ ನಮೂದಿಸಿ ಖರೀದಿಸಬಹುದಾಗಿದೆ.

ಆನ್‌ಲೈನ್ ಮೂಲಕ ಕೃಷಿ ಉತ್ಪನ್ನಗಳ ಮಾರಾಟದಿಂದ ಅನಧಿಕೃತ ಮಾರುಕಟ್ಟೆ ವ್ಯವಸ್ಥೆಗೆ ಕಡಿವಾಣ ಬೀಳುವುದರ ಜೊತೆಗೆ ರೈತರಿಗೆ ಸಮಯದ ಉಳಿತಾಯ ಹಾಗೂ ಪಾರದರ್ಶಕ ಮಾರಾಟ ವ್ಯವಸ್ಥೆ ಅನುಕೂಲ ದೊರೆಯುತ್ತದೆ.

**ಶುಭಾರಂಭ**

ಆರಂಭದಲ್ಲಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯನ್ನು ತಿಪಟೂರು ಮತ್ತು ಅರಸಿಕೆರೆಯ ಕೊಬ್ಬರಿ ಹಾಗೂ ಚಾಮರಾಜನಗರದಲ್ಲಿ ಅರಿಶಿಣ ಮಾರಾಟಕ್ಕೆ ಜಾರಿ ಮಾಡಲಾಗಿದೆ. ರಾಜ್ಯದ ಇತರ ಮಾರುಕಟ್ಟೆಗಳಲ್ಲಿಯೂ ಹಂತ ಹಂತವಾಗಿ ಈ ವ್ಯವಸ್ಥೆ ಜಾರಿಗೆ ಬರಲಿದೆ. ಆನ್‌ಲೈನ್ ವ್ಯವಸ್ಥೆ ಆರಂಭವಾದ ಫೆ.22ರಂದು ಕೊಬ್ಬರಿಗೆ ಬಂಪರ್ ಬೆಲೆ ದೊರೆಯಿತು. ಇತಿಹಾಸದಲ್ಲೇ ಪ್ರಥಮ ಬಾರಿಗೆ ಕೊಬ್ಬರಿಗೆ ಆನ್‌ಲೈನ್ ಹರಾಜಿನಲ್ಲಿ ಕ್ವಿಂಟಲ್‌ಗೆ ರೂ.9,106 ಧಾರಣೆ ಸಿಕ್ಕಿತು.

**ಉಗ್ರಾಣ ಮೂಲಕ ಮಾರಾಟ!**

ರೈತರು ಕೃಷಿ ಉತ್ಪನ್ನಗಳನ್ನು ತಮ್ಮ ಊರಿಗೆ ಹತ್ತಿರದ ವೈಜ್ಞಾನಿಕವಾದ ಉಗ್ರಾಣಗಳಲ್ಲಿಟ್ಟು ಮಾರಾಟ ಮಾಡಲು ಸಹ ಈ ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಉಗ್ರಾಣಗಳಲ್ಲಿ ದಾಸ್ತಾನಿಟ್ಟ ಉತ್ಪನ್ನಗಳನ್ನು ವರ್ಗೀಕರಿಸಿ ಅದರ ಗುಣ ಲಕ್ಷಣಗಳ ವಿವರಗಳನ್ನು ಆನ್‌ಲೈನ್ ಮಾರುಕಟ್ಟೆಯ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ವರ್ತಕರು ವೀಕ್ಷಿಸಲು ಅನುವು ಮಾಡಿಕೊಟ್ಟು ಮಾರಾಟ ಮಾಡುವ ಅವಕಾಶವೂ ರೈತರಿಗಿದೆ.

**ಹತಾಶರಾಗಬೇಕಿಲ್ಲ.**

ಒಂದೊಮ್ಮೆ ವರ್ತಕ ಅಥವಾ ಖರೀದಿ ಸಂಸ್ಥೆ ಸೂಚಿಸಿದ ಬೆಲೆ ರೈತರಿಗೆ ಒಪ್ಪಿಗೆ ಆಗದೇ ಮಾರಾಟ ಮಾಡದೇ ಇರಲು ನಿರ್ಧರಿಸುವ ಹಕ್ಕು ರೈತರಿಗೆ ಇದೆ. ಹಾಗೆಂದು ಬಹಳ ಕಷ್ಟಪಟ್ಟು ಬೆಳೆದ ಕೃಷಿ ಉತ್ಪನ್ನಕ್ಕೆ ಒಳ್ಳೆ ಬೆಲೆ ಸಿಗಲಿಲ್ಲ ಅಥವಾ ಮಾರಾಟವೇ ಆಗಲಿಲ್ಲ ಎಂದು ರೈತರುಹತಾಶರಾಗಬೇಕಿಲ್ಲ. ಇನ್ನೂ ಕೆಲಕಾಲ ಅಥವಾ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಬರುವವರೆಗೂ ಕೃಷಿ ಉತ್ಪನ್ನವನ್ನು ಉಗ್ರಾಣದಲ್ಲಿಯೇ ಮತ್ತಷ್ಟು ದಿನ ಇಡಬಹುದು.

**ತುರ್ತಿಗೆ ಹಣ ಲಭ್ಯ**

ತುರ್ತಾಗಿ ಹಣವೇನಾದರೂ ಬೇಕಿದ್ದರೆ ಗೋದಾಮಿನಲ್ಲಿರುವ ಕೃಷಿ ಉತ್ಪನ್ನಗಳನ್ನೇ ಖಾತರಿಯಾಗಿ ನೀಡಿ ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದು. ನಂತರ ಸೂಕ್ತ ಸಮಯದಲ್ಲಿ ಬೆಲೆ ಏರಿಕೆಯಾಗಿದ್ದನ್ನು ನೋಡಿಕೊಂಡು ಮಾರಾಟ ಮಾಡಬಹುದು. ಇದರ ಹಣ ರೈತರ ಖಾತೆಗೆ ಜಮಾ ಆಗುವಾಗಲೇ ಈ ಕೃಷಿ ಉತ್ಪನ್ನ ಆಧರಿಸಿ ಪಡೆದಿದ್ದ ಸಾಲ ಮತ್ತು ಬಡ್ಡಿ ಬ್ಯಾಂಕ್‌ಗೆ ಜಮಾ ಆಗುತ್ತದೆ.

**ವಿವಾದ ಇತ್ಯರ್ಥ ಹೇಗೆ?**

ಆನ್‌ಲೈನ್ ಮಾರಾಟ ವೇದಿಕೆಯ ಮೂಲಕ ಉತ್ಪನ್ನಗಳು ಮಾರಾಟವಾಗುವ ಹಂತದಲ್ಲಿ ದರ ನಿಗದಿಪಡಿಸುವುದು, ಉತ್ಪನ್ನಗಳ ಗುಣಮಟ್ಟ, ತೂಕ, ಹಣ ಪಾವತಿ ಮುಂತಾದ ವಿಷಯಗಳ ಬಗ್ಗೆ ಉದ್ಭವವಾಗುವ ವಿವಾದಗಳನ್ನು ಮಾರುಕಟ್ಟೆ ಸಮಿತಿ ಹಂತದಲ್ಲಿಯೇ ಇತ್ಯರ್ಥಗೊಳಿಸಲು 'ವಿವಾದ ಇತ್ಯರ್ಥ ಸಮಿತಿ'ಯನ್ನೂ ರಚಿಸಲಾಗಿದೆ. ರೈತರು ಅಥವಾ ವರ್ತಕರು ಸಮಸ್ಯೆಗಳ ಬಗ್ಗೆ ಸಮಿತಿಗೆ ದೂರು ನೀಡಿ ಸಮರ್ಪಕ ಪರಿಹಾರ ಪಡೆದುಕೊಳ್ಳಬಹುದು.

**ವರ್ತಕರಿಗೆ ಒಂದೇ ಲೈಸನ್ಸ್**

ವರ್ತಕರು ಒಂದೇ ಲೈಸನ್ಸ್ ಪಡೆದು ರಾಜ್ಯದ ಎಲ್ಲ ಕೃಷಿ ಉತ್ಪನ್ನ ಮಾರುಕಟ್ಟೆಗಳ ಖರೀದಿಯಲ್ಲಿ ಭಾಗವಹಿಸಲೂ ಈಗ ಅವಕಾಶ ಕಲ್ಪಿಸಲಾಗಿದೆ.

ಕೃಷಿ ಮಾರಾಟ ಇಲಾಖೆಯ ನಿರ್ದೇಶಕರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿ ವರ್ತಕರಿಗೆ ಲೈಸನ್ಸ್ ನೀಡಲು ಅವಕಾಶ ಕಲ್ಪಿಸಿ ಶಾಸನಕ್ಕೆ ತಿದ್ದುಪಡಿಯನ್ನೂ ಮಾಡಲಾಗಿದೆ.

ಆನ್‌ಲೈನ್ ಮಾರುಕಟ್ಟೆ ವೇದಿಕೆಯ ನಿರ್ವಹಣೆಗಾಗಿ ರಾಜ್ಯ ಸರ್ಕಾರ ಹಾಗೂ 'ಎನ್‌ಸ್ಪಾಟ್' ಪಾಲುದಾರಿಕೆಯಲ್ಲಿ 'ರಾಷ್ಟ್ರೀಯ ಇ–ಮಾರ್ಕೆಟ್ ಸರ್ವಿಸಸ್ ಸಂಸ್ಥೆ'ಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯಲ್ಲಿ ವರ್ತಕರು ತಮ್ಮ ಹೆಸರು ನೋಂದಾಯಿಸಬಹುದು. ಆನ್‌ಲೈನ್ ಮಾರಾಟ ವೇದಿಕೆಯಲ್ಲಿ ವರ್ತಕರು ತಾವಿರುವ ಸ್ಥಳದಿಂದಲೇ ಉತ್ಪನ್ನಗಳ ಗುಣಲಕ್ಷಣಗಳಮಾಹಿತಿಯನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಬೆಲೆ ನಮೂದಿಸಬಹುದು. ನಿಗದಿತ ಸಮಯದ ನಂತರ ಉತ್ಪನ್ನಕ್ಕೆ ನೀಡಿರುವ ಅತಿ ಹೆಚ್ಚಿನ ಬೆಲೆ ಹಾಗೂ ವರ್ತಕರ ವಿವರಗಳು ಆನ್‌ಲೈನ್ ವೇದಿಕೆಯಲ್ಲಿ ದೊರೆಯುವ ವ್ಯವಸ್ಥೆ ಮಾಡಲಾಗಿದೆ.

ಒಂದು ವೇಳೆ ಆನ್‌ಲೈನ್ ಮಾರಾಟ ಫಲಕದಲ್ಲಿ ನೀಡಿದ ಗುಣಲಕ್ಷಣಗಳಿಗೂ, ಭೌತಿಕವಾಗಿ ಉತ್ಪನ್ನಗಳನ್ನು ಹಸ್ತಾಂತರ ಮಾಡುವಾಗ ಗುಣಮಟ್ಟದ ವ್ಯತ್ಯಾಸಗಳು ಕಂಡು ಬಂದರೆ ಸಂಬಂಧಪಟ್ಟವರು ನಷ್ಟವನ್ನು ತುಂಬಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಉತ್ಪನ್ನಗಳು ವಿಲೇವಾರಿಯಾಗುವವರೆಗೂ ದಲ್ಲಾಳಿಗಳು ಅಥವಾ ಉಗ್ರಾಣ ನಿರ್ವಹಣಾ ಸಂಸ್ಥೆಗಳು ಸಂದರ್ಭಕ್ಕೆ ಅನುಸಾರವಾಗಿ ಸಂರಕ್ಷಣೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ.

**ಉತ್ಪನ್ನ ಸ್ವೀಕಾರ ಹೇಗೆ?**

ದರ ನಿಗದಿಪಡಿಸುವ ಪ್ರಕ್ರಿಯೆ ಬಳಿಕ ರೈತರಿಗೆ ಹಣ ಪಾವತಿಯಾಗಿರುವ ವಿಷಯ ಖಚಿತಪಡಿಸಿಕೊಂಡ ನಂತರವೇ ದಲ್ಲಾಳರು ಖರೀದಿದಾರರಿಗೆ ಉತ್ಪನ್ನಗಳನ್ನು ಹಸ್ತಾಂತರಿಸುತ್ತಾರೆ. ಈ ಸಂದರ್ಭದಲ್ಲಿ ಖರೀದಿದಾರರು ಇಚ್ಚಿಸಿದರೆ ಉತ್ಪನ್ನಗಳ ತೂಕವನ್ನು ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳಬಹುದು. ಇಲ್ಲದಿದ್ದರೆ ಮಾರಾಟ ಪೂರ್ವದ ತೂಕದಂತೆಯೇ ಉತ್ಪನ್ನಗಳನ್ನು ಖರೀದಿದಾರರು ಪಡೆಯಬಹುದು.

ಉತ್ಪನ್ನಗಳ ಖರೀದಿ ನಂತರ ವರ್ತಕರು ತಮ್ಮ ಲೈಸನ್ಸ್ ದಾಖಲಾತಿಯೊಂದಿಗೆ ದಲ್ಲಾಳರ ಅಂಗಡಿಯಲ್ಲಿ ಉತ್ಪನ್ನಗಳನ್ನು ಪರಿಶೀಲಿಸಿ ಪಡೆದುಕೊಳ್ಳಬಹುದು ಅಥವಾ ತಮ್ಮ ಏಜೆಂಟರಿಗೆ ಅಧಿಕಾರ ಪತ್ರ ನೀಡಿ ದಲ್ಲಾಳರಿಂದ ಉತ್ಪನ್ನಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನೂ ಮಾಡಿಕೊಳ್ಳಬಹುದು.

**ಆನ್‌ಲೈನ್ ವಹಿವಾಟು ವೈಖರಿ**


* ರೈತರು ಮಾರಾಟಕ್ಕಿಡಲಿರುವ ಕೃಷಿ ಉತ್ಪನ್ನಗಳ ವಿವರಗಳನ್ನು ಎಪಿಎಂಸಿ ಪ್ರವೇಶ ದ್ವಾರದಲ್ಲಿಯೇ
  ಪ್ರತ್ಯೇಕವಾಗಿ ದಾಖಲಿಸಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆದುಕೊಳ್ಳುವುದು.
* ದಲ್ಲಾಳರ ಅಂಗಡಿ ಮುಂದೆ ಕೃಷಿ ಉತ್ಪನ್ನವನ್ನು ಇಳಿಸುವುದು. ದಲ್ಲಾಳರು ಆ ಕೃಷಿ ಉತ್ಪನ್ನಗಳು ಸಂಗ್ರಹವಾಗಿದ್ದನ್ನು ದಾಖಲಿಸಿಕೊಳ್ಳುವುದು.
* ಕೃಷಿ ಉತ್ಪನ್ನಗಳನ್ನು ಪ್ರಾಂಗಣದಲ್ಲಿ ರಾಶಿ ಹಾಕುವುದು ಮತ್ತು ಉತ್ಪನ್ನದ ಸ್ಯಾಂಪಲ್ (ಮಾದರಿ) ಪ್ರದರ್ಶಿಸುವುದು.


* ಪ್ರವೇಶ ದ್ವಾರದಲ್ಲಿ ನೀಡಿದ ವಿಶಿಷ್ಟ ಗುರುತಿನ ಸಂಖ್ಯೆಗೆ ಅನುಗುಣವಾಗಿ ಕೃಷಿ ಉತ್ಪನ್ನಗಳ ನಿರೀಕ್ಷಿತ ಧಾರಣೆಯನ್ನು ವಿದ್ಯುನ್ಮಾನ ವ್ಯವಸ್ಥೆ ಮೂಲಕ ಆನ್‌ಲೈನ್ ಮಾರುಕಟ್ಟೆಗೆ ದಾಖಲಿಸುವುದು.
* ಮಾರಾಟಕ್ಕಿಟ್ಟ ಕೃಷಿ ಉತ್ಪನ್ನಕ್ಕೆ ಆನ್‌ಲೈನ್ ವ್ಯವಸ್ಥೆಯಡಿ ವರ್ತಕರಿಂದ ನಮೂದಾದ ಅತಿ ಹೆಚ್ಚಿನ ಧಾರಣೆಯ ಮಾಹಿತಿ ಪ್ರಕಟಣೆ, ರೈತರ ಮೊಬೈಲ್ ಫೋನ್‌ಗೆ ಎಸ್‌ಎಂಎಸ್ ರವಾನೆ.
* ನಂತರ ವಿದ್ಯುನ್ಮಾನ ವ್ಯವಸ್ಥೆಯಡಿ ಕೃಷಿ ಉತ್ಪನ್ನವನ್ನು ತೂಕ ಮಾಡುವುದು.
* ಆನ್‌ಲೈನ್‌ನಲ್ಲಿ ನಿಗದಿಯಾದ ಗರಿಷ್ಠ ಬೆಲೆ ರೈತರಿಗೆ ಒಪ್ಪಿಗೆಯಾದರೆ ಮಾರಾಟದ ರಶೀದಿ ಸಿದ್ಧಪಡಿಸುವುದು.
* ನಂತರ ಖರೀದಿದಾರರು ಅಥವಾ ಅವರ ಪ್ರತಿನಿಧಿಯಾದ ದಲ್ಲಾಳರಿಂದ ಮಾರುಕಟ್ಟೆ ಸಮಿತಿಗೆ ಹಣ ಪಾವತಿ.
* ರೈತರ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆ.
* ಹಣ ಪಾವತಿಯಾಗಿದ್ದಕ್ಕೆ ರೈತರಿಂದ ರಶೀದಿ/ಸ್ವೀಕೃತಿ ಪತ್ರ ಪಡೆಯುವುದು.
* ಅಂತಿಮವಾಗಿ ಮಾರಾಟವಾದ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಹೊರ ಹೋಗಿದ್ದನ್ನು ದಾಖಲಿಸಿಕೊಂಡು ಒಟ್ಟು ಮಾರಾಟ ಪ್ರಕ್ರಿಯೆ ಪೂರ್ಣಗೊಳಿಸುವುದು.

**ವ್ಯವಸ್ಥೆಯಲ್ಲಿ ಭಾಗೀದಾರರು**

ಕರ್ನಾಟಕ ಸರ್ಕಾರದ ಕೃಷಿ ಮಾರುಕಟ್ಟೆ ಸಚಿವಾಲಯದ ಮಾರ್ಗದರ್ಶನದಲ್ಲಿ ಆರಂಭಗೊಂಡಿರುವ 'ಕೃಷಿ ಉತ್ಪನ್ನಗಳ ಆನ್‌ಲೈನ್ ಮಾರುಕಟ್ಟೆ' ವ್ಯವಸ್ಥೆಯಲ್ಲಿ ಇನ್ನೂ ಎರಡು ಸಂಸ್ಥೆಗಳು ಭಾಗಿಯಾಗಿವೆ. ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಮತ್ತು ರಾಷ್ಟ್ರೀಯ ಇ ಮಾರ್ಕೆಟ್ ಸರ್ವಿಸಸ್ (ಆರ್‌ಇಎಂಎಸ್).

ಒಂದೇ ಸೂರಿನಡಿಯಲ್ಲಿ ಮಾರುಕಟ್ಟೆ ಜೋಡಣೆಯಾಗಿರುವ ಮಾದರಿಯನ್ನು ಈ ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.






**ಬದಲಾವಣೆಯ ಪರ್ವಕ್ಕೆ ನಾಂದಿ**

ಮಾರುಕಟ್ಟೆಯ ಸಾಮರ್ಥ್ಯ, ದಕ್ಷತೆ ಹೆಚ್ಚಿಸುವುದು ಏಕೀಕೃತ(ಆನ್‌ಲೈನ್) ಮಾರುಕಟ್ಟೆ ಉದ್ದೇಶ. ಏಕೀಕೃತ ಮಾರುಕಟ್ಟೆಯಲ್ಲಿ ಹೆಚ್ಚಿನ ಸಂಖ್ಯೆಯ ವರ್ತಕರಿಗೆ ಪಾಲ್ಗೊಳ್ಳಲು ಅವಕಾಶವಾಗಲಿದೆ. ಜೊತೆಗೆ ಗುಣಮಟ್ಟದ ಉತ್ಪನ್ನಗಳನ್ನು ಪಡೆಯಲೂ ಸಾಧ್ಯವಾಗುತ್ತದೆ. ಇಡೀ ಪ್ರಕ್ರಿಯೆಯಲ್ಲಿ ರೈತರು, ವರ್ತಕರು, ಗ್ರಾಹಕರು ಸೇರಿದಂತೆ ಪ್ರತಿಯೊಬ್ಬರಿಗೂ ಲಾಭವಾಗುತ್ತದೆ.

ಮಾರಾಟ ಮಾಡಿದ ಕೃಷಿ ಉತ್ಪನ್ನದ ಹಣ ಬ್ಯಾಂಕ್ ಖಾತೆಗೆ ನೇರ ಜಮಾ ಆಗುವುದರಿಂದ ರೈತರನ್ನು ಆದಾಯ ತೆರಿಗೆ ವ್ಯಾಪ್ತಿಗೆ ಸೇರಿಸಲಾಗುತ್ತದೆ ಎನ್ನುವ ಮಾಹಿತಿ ತಪ್ಪು. ಕೃಷಿ ಆದಾಯಕ್ಕೆ ತೆರಿಗೆಯಿಂದ ವಿನಾಯಿತಿ ಇದೆ ಎಂದು ಆದಾಯ ತೆರಿಗೆ ಇಲಾಖೆಯೇ ಸ್ಪಷ್ಟಪಡಿಸಿದೆ. ಆದ್ದರಿಂದ ರೈತರು ಆತಂಕ ಪಡಬೇಕಾಗಿಲ್ಲ. ಪ್ರಸಕ್ತ ಸಾಲಿನ ಅಂತ್ಯಕ್ಕೆ ರಾಜ್ಯದ ಕನಿಷ್ಠ 30 ಮಾರುಕಟ್ಟೆಗಳಲ್ಲಿ ಆನ್‌ಲೈನ್ ಮಾರುಕಟ್ಟೆ' ವ್ಯವಸ್ಥೆ ಜಾರಿಯಾಗಲಿದೆ. ರೈತರ ಸಬಲೀಕರಣ ಆಶಯದ ಈ ವ್ಯವಸ್ಥೆ ಈಗಿನ ಮಾರುಕಟ್ಟೆಯಲ್ಲಿ ತೀವ್ರಗತಿಯ ಬದಲಾವಣೆಗಳನ್ನು ತರಲಿದೆ.

**ನೇರ ಹಣ ಪಾವತಿ**

ಕೃಷಿ ಉತ್ಪನ್ನಗಳ ಖರೀದಿ ಪ್ರಕ್ರಿಯೆ ಮುಗಿದ ತಕ್ಷಣವೇ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಪಾವತಿಸುವುದು ಆನ್‌ಲೈನ್ ಮಾರುಕಟ್ಟೆಯ ಮತ್ತೊಂದು ವಿಶೇಷ. ಮಾರುಕಟ್ಟೆಗೆ ಉತ್ಪನ್ನಗಳನ್ನು ತಂದಾಗ ಪ್ರವೇಶ ದ್ವಾರದಲ್ಲಿ ರೈತರ ಹೆಸರು, ವಿಳಾಸ, ಮೊಬೈಲ್, ದೂರವಾಣಿ ಸಂಖ್ಯೆ ಬ್ಯಾಂಕ್ ಖಾತೆಸಂಖ್ಯೆ ಮತ್ತು ಬ್ಯಾಂಕ್ ಶಾಖೆಯ 'ಐಎಫ್‌ಎಸ್‌ಸಿ ಕೋಡ್' ಕೃಷಿ ಉತ್ಪನ್ನದ ಹೆಸರು ಮತ್ತು ಪ್ರಮಾಣ ಮೊದಲಾದ ವಿವರಗಳನ್ನು ಪೂರ್ಣವಾಗಿ ದಾಖಲಿಸಿಕೊಂಡು ವಿಶೇಷ ಸಂಕೇತದ 'ಲಾಟ್' ಸಂಖ್ಯೆ ನೀಡಲಾಗುತ್ತದೆ.

ರೈತರು ವಿಶೇಷ ಸಂಕೇತದ 'ಲಾಟ್' ಸಂಖ್ಯೆಯ ಚೀಟಿಯೊಂದಿಗೆ ದಲ್ಲಾಳರ ಅಂಗಡಿಗೆ ಹೋಗಿ ಅಥವಾ ನೇರ ಖರೀದಿ ವ್ಯವಸ್ಥೆಯಲ್ಲಿ ಉತ್ಪನ್ನಗಳನ್ನು ಮಾರಾಟಕ್ಕೆ ಇಡಬಹುದು. ಇಂತಹ ಸಂದರ್ಭಗಳಲ್ಲಿ ಉತ್ಪನ್ನಗಳ ವಿಶ್ಲೇಷಣೆ ಮಾಡಿ ಅದರ ಎಲ್ಲ ಗುಣ ಲಕ್ಷಣಗಳ ವಿವರಗಳನ್ನು ಆನ್‌ಲೈನ್ ಮಾರಾಟ ವೇದಿಕೆಯಲ್ಲಿ (ಕೃಷಿ ಉತ್ಪನ್ನ ಆನ್‌ಲೈನ್ ಮಾರುಕಟ್ಟೆ ವೆಬ್‌ಸೈಟ್‌ನಲ್ಲಿ) ಪ್ರದರ್ಶಿಸಲಾಗುವುದು.

ಮಾರಾಟದ ಹಂತದಲ್ಲಿ ಉತ್ಪನ್ನಗಳ ತೂಕ, ಬೆಲೆ, ಹಣಪಾವತಿ ಮುಂತಾದ ವಿವರಗಳು, ರೈತರ ಮೊಬೈಲ್ ಫೋನ್‌ಗೆ 'ಎಸ್‌ಎಂಎಸ್' ಮೂಲಕ ರವಾನೆಯಾಗುತ್ತವೆ. ಇದರಿಂದ ರೈತರು ಹೆಚ್ಚಿನ ಸಮಯವನ್ನು ಮಾರುಕಟ್ಟೆಯಲ್ಲಿ ವ್ಯರ್ಥ ಮಾಡುವ ಅವಶ್ಯಕತೆ ಇರುವುದಿಲ್ಲ.

ಬೆಲೆ ನಿಗದಿಪಡಿಸಿದ ನಂತರ ರೈತರ ಒಪ್ಪಿಗೆ ಪಡೆದು ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ಇದಕ್ಕೆ ಪೂರ್ವದಲ್ಲಿ ವರ್ತಕರ ಬ್ಯಾಂಕ್ ಖಾತೆಯಿಂದ ಉತ್ಪನ್ನದ ಮೌಲ್ಯ ಹಾಗೂ ನಿಯಮಾನುಸಾರ ಅವರು ಭರಿಸಬೇಕಾದ ವೆಚ್ಚಗಳನ್ನು ಆನ್‌ಲೈನ್ ವೇದಿಕೆ ನಿರ್ವಹಣಾ ಸಂಸ್ಥೆಯು ವರ್ಗಾಯಿಸಲಿದೆ.

ಕೃಷಿ ಉತ್ಪನ್ನ ಮಾರಾಟವಾಗಿದ್ದರ ಹಣವನ್ನು ರೈತರ ಬ್ಯಾಂಕ್ ಖಾತೆಗೆ ಉತ್ಪನ್ನ ಮಾರಾಟವಾದ ದಿನವೇ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಲಾಗುತ್ತದೆ.

## ಸಂಕೀರ್ಣ/ಸೃಜನ

## 1. ನನ್ನ ಕವಿತೆ

- ಸವಿತಾ ನಾಗಭೂಷಣ

**ಕವಿತೆಯ ಆಶಯ:**

**ಸೃಜನಶೀಲ ಕಲೆಯಾದ ಕವಿತೆಯ ಮೂಲ ಬೇರುಗಳಿರುವುದು ನೋವಿನ ನಿಜದ ಮೂಲಗಳಲ್ಲಿ ಮಹಲಿನಲ್ಲಲ್ಲ ಎನ್ನುವುದು ಈ ಕವಿತೆಯ ಆಶಯ**

**–1–**

ಕವಿತೆ ಹುಟ್ಟುವುದು ಮಹಲಿನಲ್ಲಲ್ಲ,
ಮುರುಕು ಜೋಪಡಿಗಳಲ್ಲಿ
ಕವಿತೆ ಹುಟ್ಟುವುದು ಝಗಝಗಿಸುವ
ದೀಪಗಳ ಬೆಳಕಿನಲ್ಲಲ್ಲ ಬುಡ್ಡಿ
ಬೆಳಕಿನ ಮಿಡುಕಿನಲ್ಲಿ

ಕವಿತೆ ಹುಟ್ಟುವುದು ಕಲ್ಪನೆಯ ಮೂಸೆಯಲ್ಲಲ್ಲ
ದೈನಂದಿನ ಘಟನಾವಳಿಗಳಲ್ಲಿ
ಕವಿತೆ ಹುಟ್ಟುವುದು ತುಂತುರು ಮಳೆಯಲ್ಲಲ್ಲ
ನೊಂದವರ ಕಣ್ಣೀರಿನಲ್ಲಿ
ಕವಿತೆ ಹುಟ್ಟುವುದು ಬಿಗಿದ ಕೊರಳಿನಲ್ಲಿ,
ನಿರಾಶೆಯ ನೆರಳಿನಲ್ಲಿ, ಅಸಹಾಯಕರ ಆಕ್ರಂದನದಲ್ಲಿ
ಇವೆಲ್ಲ, ಅಲ್ಲಿ ಇಲ್ಲಿ ಹೆಕ್ಕಿ ಪಟ್ಟಿಮಾಡಿದ
ನುಡಿಮುತ್ತುಗಳು. ಹೋದಲ್ಲೆಲ್ಲ ಹಿಂಬಾಲಿಸಿ

ಕಾಡುವ ಮಾತಿನ ಭೂತಗಳು.

–2–

ಆದರೆ ನನ್ನ ಕವಿತೆ, ಹುಟ್ಟಿದ್ದು ಮಹಲಿನಲ್ಲಿ,
ಪಿಳಿಪಿಳಿ ಕಣ್ಣು ಬಿಟ್ಟಿದ್ದು ಝಗಝಗಿಸುವ
ದೀಪಗಳ ಬೆಳಕಿನಲ್ಲಿ, ಬೆಳೆದಿದ್ದು ಕಲ್ಪನೆಯ
ಮೂಸೆಯಲ್ಲಿ, ಅರಳಿದ್ದು ಕನಸಿನಲ್ಲಿ

ಆದರೂ ಈ ಕವಿತೆಗೆ
ತುಡಿತ – ಮಿಡಿತಗಳಿಗೆ ಸ್ಪಂದಿಸುವ ಹೃದಯವಿದೆ
ಮನದಲ್ಲಿ ಅವರಿಗಾಗಿಯೇ ಹೊಸೆದ ಹೊಸ ಕನಸಿದೆ
ಕಣ್ಣ ಬಿಂಬದಲ್ಲಿ ಕೈಕೈ ಬೆಸೆದು ಜೊತೆಯಾಗಿ
ಹೆಜ್ಜೆಯಿಡುವ ಹಂಬಲವಿದೆ

ಇಷ್ಟಾದರೂ ಹಲವರ ದೃಷ್ಟಿಯಲ್ಲಿ ನನ್ನದು
ಹುಟ್ಟುವುದಕ್ಕೆ ಮುಂಚೆಯೇ ಸತ್ತ ಕವಿತೆ
ಕೆಲವರ ದೃಷ್ಟಿಯಲ್ಲಂತೂ ಬದುಕಿದರೂ ಸತ್ತ ಕವಿತೆ

**ಕವಿ ಪರಿಚಯ :**

**1961ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದ ಸವಿತಾ ನಾಗಭೂಷಣ ಅವರು ಪೋಸ್ಟಲ್ ಡಿಪಾರ್ಟ್‌ಮೆಂಟಿನಲ್ಲಿ ಉದ್ಯೋಗದಲ್ಲಿದ್ದಾರೆ. 'ನಾ ಬರುತ್ತೇನೆ ಕೇಳು' ಕವನ ಸಂಕಲನಕ್ಕೆ 1987ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.**

**ಕೃತಿಗಳು : ನಾ ಬರುತ್ತೇನೆ ಕೇಳು, ಚಂದ್ರನನ್ನು ಕರೆಯಿರಿ ಭೂಮಿಗೆ**

## 2. ಲೇಖಕ

**– ಹಿಂದಿ ಮೂಲ : ಮುನ್ಷಿ ಪ್ರೇಮಚಂದ್**

**ಕನ್ನಡಕ್ಕೆ: ಕ್ಷಿತಿಜ ಬೀದರ್**

**ತಾನೊಬ್ಬ ಲೇಖಕ. ತನ್ನ ಕೆಲಸ ಬರೆಯುವುದಷ್ಟೇ ಜನರ ಮೆಚ್ಚುಗೆಯನ್ನು ಅಪೇಕ್ಷಿಸಬಾರದೆಂದು ಕವಿ ಪ್ರವೀಣರಿಗೆ ಕೊನೆಗೂ ಅರ್ಥ ವಾಯಿತು.**

ಬೆಳಗ್ಗೆ ಪ್ರವೀಣ ಮಹಾಶಯರು ಹಾಲು ಸಕ್ಕರೆ ಇಲ್ಲದೆ ಕುಡಿದ ಚಹಾವನ್ನೇ ಇಪ್ಪತ್ತು ಸಲ ಕುಡಿದರು. ಅದೇ ಅವರ ಉಪಾಹಾರವಾಗಿತ್ತು. ಹಾಲು ಸಕ್ಕರೆ ಇಲ್ಲದ ಚಹಾ ಸಿಗದೆ ತಿಂಗಳಾಗಿತ್ತು. ಸಕ್ಕರೆ ಅವರಿಗೆ ಅಗತ್ಯದ ವಸ್ತುವಾಗಿರಲಿಲ್ಲ. ಮನೆ ಒಳಗೆ ಹೋಗಿ ಪತ್ನಿಗೆ ಹಣ ಕೇಳಬೇಕೆಂದವರು ಹೊದ್ದುಕೊಂಡು ಮಲಗಿದ್ದ ಅವಳನ್ನು ಕಂಡು ಎಚ್ಚರಿಸಲು ಬಯಸಲಿಲ್ಲ. ಥಂಡಿಗೆ ರಾತ್ರಿಯಿಡೀ ಸರಿಯಾಗಿ ನಿದ್ರೆ ಮಾಡದೆ ಈಗ ಜೊಂಪು ಹತ್ತಿರಬೇಕು ಎಂದುಕೊಂಡರು. ಅರ್ಧ ನಿದ್ರೆಯಲ್ಲಿ ಎಚ್ಚರಿಸುವುದು ಸರಿಯಲ್ಲವೆಂದು ಕೊಂಡು ಮೌನವಾಗಿ ಹಿಂತಿರುಗಿದರು.

ಚಹಾ ಕುಡಿದು ಮಸಿ ಲೇಖನಿ ಎತ್ತಿಕೊಂಡು ಪುಸ್ತಕ ಬರೆಯಲು ಕುಳಿತು ಕೊಂಡರು. ಈ ದಶಕದ ಅತ್ಯುತ್ತಮ ಕೃತಿಯಾಗಬೇಕು, ಇದರ ಪ್ರಕಾಶನದಿಂದ ತಾನು ಈ ಅಜ್ಞಾತ ಲೋಕದಿಂದ ಹೊರ ಜಗತ್ತಿಗೆ ಬಂದು ಪ್ರಸಿದ್ಧಿ ಪಡೆಯಬೇಕು ಎಂದುಕೊಂಡರು.

ಅರ್ಧ ಗಂಟೆಯ ನಂತರ ಪತ್ನಿ ಕಣ್ಣುಜ್ಜುತ್ತಾ ಅವರಿದ್ದಲ್ಲಿಗೆ ಬಂದು,

“ಚಾ ಕುಡಿದು ಬಿಟ್ರಾ..?” ಎಂದಳು.

“ಹ್ಞಾಂ ಕುಡಿದುದಾಯಿತು  ತುಂಬಾ ಚೆನ್ನಾಗಿತ್ತು.”

“ಮತ್ತೆ ಹಾಲು ಸಕ್ಕರೆ ಎಲ್ಲಿಂದ ತಂದ್ರಿ...?”

“ಹಾಲು ಸಕ್ಕರೆ ಕಾಣದೆ ಎಷ್ಟು ದಿನಗಳಾದವೋ... ನನಗೆ ಸಾದಾ ಚಹಾನೇ

ತುಂಬಾ ಇಷ್ಟವಾಗೋದು.. ಹಾಲು ಸಕ್ಕರೆ ಸೇವಿಸುವುದರಿಂದ ಅದರ ಸ್ವಾದ ಕೆಟ್ಟು ಹೋಗುತ್ತದೆ. ವೈದ್ಯರು ಕೂಡಾ ಸಾದಾ ಚಹಾ ಸೇವಿಸಲು ಸಲಹೆ ಕೊಡುತ್ತಾರೆ. ಯುರೋಪಿನಲ್ಲಿ ಹಾಲು ಬಳಸುವ ಪದ್ಧತಿಯೇ ಇಲ್ಲ. ಇಲ್ಲಿ ನಮ್ಮಲ್ಲಿ ಮಾತ್ರ ಈ ಭೋಗ ವಿಲಾಸಿಗಳಿಗೆ ಅಭ್ಯಾಸವಷ್ಟೆ..."

"ಅದು ಹೇಗೆ ನಿಮಗೆ ಇಷ್ಟವಾಗುತ್ತೋ...! ಹಣ ಅಲ್ಲಿಯೇ ಇಟ್ಟಿದ್ದೆ." ಸಾದಾ ಚಹಾ ನನಗೇಕೆ ಎಚ್ಚರಿಸಲಿಲ್ಲ.

ಪ್ರವೀಣ್ ಮಹಾಶಯರು ಮತ್ತೆ ಬರವಣಿಗೆಯಲ್ಲಿ ತೊಡಗಿದರು. ಪ್ರಾಯದಲ್ಲಿ ತಗುಲಿದ ಚಟ ಈ ಇಪ್ಪತ್ತು ವರ್ಷಗಳಿಂದಲೂ ಅವರು ಕಾಪಾಡಿಕೊಂಡು ಬಂದಿದ್ದರು. ಅದರೊಂದಿಗೆ ಅನಾರೋಗ್ಯವು ಸೇರಿಬಿಟ್ಟಿತ್ತು. ವೃದ್ಧಾಪ್ಯವು ಆಕ್ರಮಿಸಿದಂತೆ ಕನ್ನಡಕದ ಅಗತ್ಯವೂ ಎದುರಾಗಿತ್ತು. ಇಡೀ ಸಂಸಾರದಿಂದ ವಿಮುಖರಾಗಿ ಸೂರ್ಯೋದಯದಿಂದ ಮಧ್ಯ ರಾತ್ರಿವರೆಗೂ ಸಾಹಿತ್ಯ ಸೇವೆಯನ್ನು ತಪಸ್ಸಿನಂತೆ ಅವರ ಹೃದಯ ಕಮಲಕ್ಕೆ ನೈವೇದ್ಯ ಬೆಳಗುವುದರಲ್ಲಿಯೇ ಮುಳುಗಿ ಹೋಗಿತ್ತು.ಆದರೆ ಭಾರತದಲ್ಲಿ ಸರಸ್ವತಿಗಿಂತಲೂ ಹೆಚ್ಚಿನ ಸನ್ಮಾನ ಲಕ್ಷ್ಮಿಗೆ ಅಲ್ಲವೇ...? ಮನಸ್ಸು ಒಂದೇ ಆಗಿರುವಾಗ ಇಬ್ಬರು ದೇವಿಗಳಿಗೆ ಹೇಗೆ ಪ್ರಸನ್ನ ಗೊಳಿಸುವುದು...?" ಲಕ್ಷ್ಮಿ ಕೇವಲ ಆರ್ಥಿಕವಾಗಿ ಹಣದ ರೂಪದಲ್ಲಿ ಪ್ರಕಟವಾಗುತ್ತಿರಲಿಲ್ಲ. ಪತ್ರಿಕೆ ಸಂಪಾದಕರು, ಪುಸ್ತಕ ಪ್ರಕಾಶಕರು ಉದಾರವಾದ ಹಣಕಾಸಿನ ಸಹಾಯನೀಡದಂತೆಯೂ ಆಕೆ ನಿರ್ದಯಿ ಭಾವಕ್ರೀಡೆಯೂ ತೋರುತ್ತಿದ್ದಳು. ಇಡೀ ಜಗತ್ತೇ ಅವಳ ವಿರುದ್ಧ ಏನೋ ಷಡ್ಯಂತ್ರ ರಚಿಸಿದಂತೆ ಕಾಣುತ್ತಿತ್ತು. ನಿರಂತರ ಆರ್ಥಿಕ ತೊಂದರೆಯಿಂದ ಆತ್ಮವಿಶ್ವಾಸವನ್ನೇ ಹೊಸಕಿ ಹಾಕಿದಾಗ ಅವರ ರಚನೆಗಳಲ್ಲಿ ಯಾವುದೇ ಗಟ್ಟಿತನ ಇಲ್ಲವೆನ್ನುವಂತೆ ಭಾಸವಾಗ ತೊಡಗಿತು. ಆ ಭಾವನೆಯು ಹೃದಯ ಛಿದ್ರಕವಾಗಿತ್ತು.

ಈ ದುರ್ಲಭ ಮನುಷ್ಯನ ಬದುಕು ಹೀಗೆಯೇ ನಷ್ಟವಾಗಿ ಹೋಗುತ್ತದೆಯಲ್ಲಾ.. ಆದರೆ ಅವನ ಜೀವನ ಕೃತಿ...? ಬದುಕಿನ ಅವಶ್ಯಕತೆಗಳು ಕ್ಷೀಣಿಸುತ್ತಾ, ಸಂನ್ಯಾಸದ ಸೀಮೆ ದಾಟಿ ಹೋಗುವಷ್ಟು ಕಳಪೆಯೂ ಆಗಿರಲಿಲ್ಲ. ಸಂತೋಷವಾಗಿದ್ದರೆ ಅದು ಜೀವನದ ಸಂಗಾತಿಯ ತ್ಯಾಗ ಮತ್ತು ತಪಸ್ಸಿನ ಫಲವೆಂದುಕೊಂಡಿದ್ದರು. ಅವರಿಗಿಂತ ಅವಳು ಎರಡು ಹೆಜ್ಜೆ ಮುಂದಾಗಿದ್ದಳು. ಈ ದಿಸೆಯಲ್ಲಿ ಸುಮಿತ್ರಾ ಪ್ರಸನ್ನ ಚಿತ್ತಳಾಗಿದ್ದಳು. ಪ್ರವೀಣರಿಗೆ ಹೊರಜಗತ್ತಿನ ಬಗ್ಗೆ ದೂರುಗಳಿದ್ದರೂ, ಚೆಂಡಿನಲ್ಲಿ ಗಾಳಿ ತುಂಬಿಕೊಂಡಿರುವ ಪರಿಯಲ್ಲಿ ಸುಮಿತ್ರಾ ಅವರನ್ನು ಹೊರಗಿನ ಹೊಡೆತಗಳಿಂದ ರಕ್ಷಿಸುತ್ತಿದ್ದಳು. ಅವರು

ಕೂಡಾ ತಮ್ಮ ದುರ್ದೆಸೆಗೆ ರೋದಿಸುವುದಿದ್ದರೂ ಸುಮಿತ್ರಾ ದೇವಿಯ ಮುಖದ ಮೇಲಿನ ಒಂದು ಕೂದಲೆಳೆಯುಕೊಂಕದಂತೆ ನೋಡಿಕೊಳ್ಳುತ್ತಿದ್ದರು.

ಅಲ್ಲಿನ ಚಹಾ ಕಪ್ ಎತ್ತಿಕೊಳ್ಳುತ್ತಾ ಸುಮಿತ್ರಾ,

“ಹೊರಗೆ ಗಂಟೆ ಅರ್ಧ ಗಂಟೆ ತಿರುಗಾಡಿ ಕೊಂಡಾದರೂ ಬನ್ನಿ, ಪ್ರಾಣ ಕೊಟ್ಟು ಕೆಲಸ ಮಾಡಿದರೂ ಫಲವಿಲ್ಲ ಎನ್ನುವುದಾದರೂ ತಿಳಿದು ಬರಲಿ. ಸುಮ್ಮನೆ ತಲೆ ಬಿಸಿ ಯಾಕೆ ಮಾಡಿಕೊಳ್ಳಿರಿ..” ಎಂದಳು.

ಪ್ರವೀಣರು ತಲೆ ಮೇಲೆತ್ತದೆ ಕಾಗದದ ಮೇಲೆ ಬರೆಯುತ್ತಲೇ,

“ಬರೆಯುವುದರಿಂದ : ಕನಿಷ್ಠ ಏನೋ ಮಾಡ್ತಾ ಇದ್ದೀನಿ ಎಂಬ ಸಂತೋಷವಾದರೂ ಇರುತ್ತೆ. ವಾಯು ವಿಹಾರದಿಂದ ನನಗೆ ಬರೀ ಸಮಯ ಹಾಳು ಮಾಡ್ತಾ ಇದ್ದೀನಿ ಎಂದೆನಿಸುತ್ತದೆ...” ಎಂದರು.

“ಅಂದರೆ ಅಷ್ಟೊಂದು ಓದು ಬರಹ ಬಲ್ಲ ಜನ ದಿನಾಲು ವಾಯು ಸೇವನೆಗೆ ಹೋಗೋದು ಸಮಯ ಹಾಳು ಮಾಡಲಿಕ್ಕೆ ಅಂತ ತಿಳಿದಿದ್ದೀರೇನು...?

“ಅವರ ಗಳಿಕೆಯಲ್ಲಿ ಏನೂ ವ್ಯತ್ಯಾಸ ವಾಗದಿರುವ ಜನರು ವಾಯು ಸೇವನೆಗೆ ಹೋಗೋದು, ಸರಕಾರಿ ನೌಕರರು, ಅವರಿಗೇನು ತಿಂಗಳ ಸಂಬಳ ಸಿಗುತ್ತಿಲ್ಲವೇ...? ಅಥವಾ ಪ್ರತಿಷ್ಠಿತ ಜನರಾಗಿರುತ್ತಾರೆ ಅಷ್ಟೇ...! ನಾನಂತೂ ಕೂಲಿಕಾರ. ಕೂಲಿ ಮಾಡುವವನು ಯಾವತ್ತಾದರೂ ವಾಯು ಸೇವನೆಗೆ ತಿರುಗಾಡುವುದನ್ನು ಕಂಡಿದ್ದೀಯಾ...? ಅವರಿಗೆ ವಾಯು ಸೇವನೆಯ ಅಗತ್ಯವಿರುತ್ತಾ...? ಅದೆಲ್ಲಾ ಬದುಕಿನಲ್ಲಿ ಸುಖ ಸಮೃದ್ಧಿ ಇದ್ದವರಿಗೆ ಮಾತ್ರ...! ಹೊಟ್ಟೆಗೆ ಅನ್ನವೇ ಇಲ್ಲದವರಿಗೆ ಇನ್ನೆಂಥ ವಾಯುವಿಹಾರ...? ನನಗಂತೂ ಈ ಬದುಕೇ ಬಲು ಭಾರವಾಗಿದೆ. ಈ ಭಾರ ಹೀಗೆಯೇ ಇನ್ನೆಷ್ಟು ದಿನ ಹೊರುವುದೋ..?” ಗಂಡನ ನಿರಾಶೆಯ ಮಾತುಗಳನ್ನು ಕೇಳಿ ಕಣ್ಣಲ್ಲಿ ನೀರು ತುಂಬಿಕೊಂಡು ಸುಮಿತ್ರಾ ಒಳಗಿನ ಕೋಣೆಗೆ ಹೋದಳು. ಲಕ್ಷ್ಮೀ ಕೃಪಾಕಟಾಕ್ಷವಿಲ್ಲದೇ ಇದ್ದರೂ ಒಂದು ದಿನ ಈ ತಪಸ್ವಿಯ ಕೀರ್ತಿ ಕೌಮುದಿ ಖಂಡಿತವಾಗಿಯೂ ಹೊರ ಜಗತ್ತಿನಲ್ಲಿ ಬೆಳಗುತ್ತದೆ ಎಂದುಕೊಂಡಳು. ಪ್ರತಿಕೂಲ ದಿಸೆಯಲ್ಲಿ ಉದಯವಾಗುವ ಅಮಾವಾಸ್ಯೆಯ ಪ್ರಾತಃಕಾಲದ ಕೆಂಪು ಛಾಯೆಯು ಕಾಣದಷ್ಟು ಪ್ರವೀಣ ಮಹಾಶಯರು ನಿರಾಶೆಯ ಅಂಚಿಗೆ ತಲುಪಿದ್ದರು.

***

ಉದಾತ್ತ ವ್ಯಕ್ತಿಯೊಬ್ಬರು ಉತ್ಸವದ ಆಚರಣೆಗಾಗಿ ಪ್ರವೀಣ ಮಹಾಶಯರಿಗೆ ಆಮಂತ್ರಣ ಪತ್ರವನ್ನಿತ್ತಿದ್ದರು. ಆ ದಿನ ಅವರ ಮನಸ್ಸು ಆನಂದದ ಕುದುರೆಯನ್ನೇರಿ ಕುಣಿದು ಕುಪ್ಪಳಿಸತೊಡಗಿತ್ತು. ಇಡೀ ದಿನ ಅದೇ ಕಲ್ಪನೆಯಲ್ಲಿಯೇ ಕಳೆದರು. ರಾಜಾ ಸಾಹೇಬರು ಯಾವ ಶಬ್ದಗಳಲ್ಲಿ ತನ್ನನ್ನು ಸ್ವಾಗತಿಸಬಹುದು, ಧನ್ಯವಾದ ಹೇಳಬಹುದು, ಯಾವ ಪ್ರಸಂಗವನ್ನು ಪ್ರಸ್ತಾಪಿಸಬಹುದು ಮತ್ತು ಯಾವ ಗಣ್ಯರೊಡನೆ ಪರಿಚಯಿಸಬಹುದು ಎನ್ನುವ ಕಲ್ಪನಾ ಸಾಗರದಲ್ಲಿಯೇ ಮಿಂದು ಆನಂದವನ್ನನುಭವಿಸತೊಡಗಿದರು. ಬದುಕಿನ ಆರೋಹಣದ ಹೋಲಿಕೆಯೊಂದಿಗೆ ಸಮಯೋಚಿತವಾಗಿ ಒಂದು ಕವನವನ್ನು ರಚಿಸಿದರು. ಶ್ರೀಮಂತರ ಬಗೆಗಿನ ಮನೋಭಾವನೆಗೆ ಧಕ್ಕೆಯಾಗಬಹುದಾದಈವರೆಗಿನ ಪೂರ್ವಗ್ರಹ ಪೀಡಿತ ಭಾವನೆಯನ್ನು ಉಪೇಕ್ಷಿಸಿದರು.

ಮಧ್ಯಾಹ್ನದಿಂದಲೇ ಸಿದ್ಧತೆಯಲ್ಲಿ ತೊಡಗಿದರು. ಗಡ್ಡ ಬೋಳಿಸಿ ಸಾಬೂನಿನಲ್ಲಿ ಚೆನ್ನಾಗಿ ಸ್ನಾನ ಮಾಡಿದರು. ತಲೆಗೆ ಎಣ್ಣೆ ಹಾಕಿಕೊಂಡರು. ಆದರೆ ಬಟ್ಟೆಯದೇ ಸಮಸ್ಯೆಯಾಯಿತು. ಬಹಳ ವರ್ಷದ ಹಿಂದೆ ಕೋಟನ್ನು ಹೊಲಿಸಿದ್ದರು. ಅದು ಕೂಡ ಅವರಂತೆಯೇ ಹಳೆಯದಾಗಿ ಮಾಸಿಹೋಗಿತ್ತು. ಸ್ವಲ್ಪ ಶೀತ ಉಷ್ಣವಾದರೆ ಆರೋಗ್ಯ ಕೆಡುವಂತೆ ಆ ಕೋಟಿನ ಅವಸ್ಥೆಯಾಗಿತ್ತು.ನಾಜೂಕಾಗಿ ಹೊರತೆಗೆದು ಅದರ ಮೇಲಿನ ಧೂಳನ್ನು ಕೊಡವಿ ಸಿದ್ಧಪಡಿಸಿದರು.

“ನೀವು ಸುಮ್ಮನೇ ಆಮಂತ್ರಣ ಪತ್ರ ಸ್ವೀಕರಿಸಿದಿರಿ. ಆರೋಗ್ಯ ಸರಿ ಇಲ್ಲ ಎಂದು ಹೇಳಿದರಾಗಿತ್ತು. ಈ ಹರಿದ ಬಟ್ಟೆ ಸ್ಥಿತಿಯಲ್ಲಿ ಹೋಗುವುದು ಇನ್ನೂ ಕೆಟ್ಟದಲ್ಲವೆ..?” ಎಂದಳು ಸುಮಿತ್ರಾ.

“ಹೃದಯವಂತರು ವ್ಯಕ್ತಿಯ ಪೋಷಾಕನ್ನು ನೋಡುವುದಿಲ್ಲ. ಅವರ ಗುಣ , ಚಾರಿತ್ರ್ಯ ನೋಡುತ್ತಾರೆ. ರಾಜಾ ಸಾಹೇಬರು ನನ್ನಲ್ಲಿ ಏನಾದರೂ ವಿಶೇಷ ಗುಣ ನೋಡಿರಬೇಕಲ್ಲವೇ ? ಇಲ್ಲದಿದ್ದರೆ ನನಗೇಕೆ ಆಮಂತ್ರಣ ಪತ್ರ ಕಳುಹಿಸುತ್ತಿದ್ದರು..!? ನಾನೇನು ಜಮೀನ್ದಾರನಾ..? ಸಾಹುಕಾರನಾ..? ಅಧಿಕಾರಿನಾ..? ಮೇತ್ರಿನಾ..? ನಾನೊಬ್ಬ ಸಾಧಾರಣ ಲೇಖಕನಷ್ಟೇ...! ಲೇಖಕನ ಮೌಲ್ಯ ಅವನ ಬರವಣಿಗೆಯಲ್ಲಿರುತ್ತದೆ.” ಎಂದು ಪ್ರವೀಣರು ವೇದಾಂತಿಯಂತ ಗಂಭೀರ ಭಾವ ತಾಳಿದರು.

ಸುಮಿತ್ರಾ ಅವರ ಸರಳ ವ್ಯಕ್ತಿತ್ವಕ್ಕೆಸಹಾನುಭೂತಿ ತೋರಿ,

“ನೀವು ಕಲ್ಪನೆಯ ಸಂಸಾರದಲ್ಲಿದ್ದು ವಾಸ್ತವ ಸಂಸಾರದಿಂದ ಪ್ರತ್ಯೇಕಗೊಂಡಿದ್ದೀರಿ. ರಾಜಾ ಸಾಹೇಬರು ಮತ್ತು ಅಲ್ಲಿಯ ಎಲ್ಲಾ ಜನರ ದೃಷ್ಟಿ ಹೆಚ್ಚಾಗಿ ಬಟ್ಟೆಯ ಮೇಲೆಯೇ ನಾಟಿರುತ್ತದೆ ಎಂದು

ನಾನು ತಿಳಿದಿದ್ದೇನೆ.ಸರಳತೆ ಒಳ್ಳೆಯದೇಆದರೆ ಅದರಿಂದ ವ್ಯಕ್ತಿ ಬೇರೆಯವರಿಗೆ ನಿಕೃಷ್ಟವಾಗಿ ತೋರ ಬಾರದಲ್ಲವೇ..?" ಎಂದಳು.

ಪ್ರವೀಣರು ಈ ಸಂಗತಿಯನ್ನು ಗಮನಿಸಿದರು. ವಿದ್ವಜ್ಜನರ ನಡತೆಯಂತೆ ಅವರು ತಮ್ಮ ತಪ್ಪನ್ನು ಸ್ವೀಕರಿಸುವುದರಲ್ಲಿ ಹಿಂಜರಿಯುತ್ತಿರಲಿಲ್ಲ. "ಸರಿ, ನೀನು ಹೇಳೋದು ಅಕ್ಷರಶಃ ನಿಜ.

ದೀಪ ಹಚ್ಚಿದ ಮೇಲೆ ಹೋಗ್ತಿನಿ." ಎಂದರು. "ನಾನು ಹೇಳ್ತಿನಿ, ನೀವು ಹೋಗುವುದಾದರೂ ಯಾಕೆ ಅಂತ...?"

"ಅಂದರೆ...!? ಈಗ ನಿನಗೆ ಹೇಗೆ ಹೇಳಲಿ...? ಪ್ರತಿಯೊಂದು ಪ್ರಾಣಿಯ ಮನಸ್ಸಿನಲ್ಲಿ ಆದರ, ಸನ್ಮಾನದ ಬಯಕೆ ಇದ್ದಿರುತ್ತದೆ. ಆ ಬಯಕೆ ಯಾಕಿರುತ್ತದೆ ಎಂದು ನೀನು ಕೇಳಬಹುದು.ಇದು ನಮ್ಮ ಆತ್ಮವಿಶ್ವಾಸದ ಒಂದು ಸ್ಥರವಾಗಿರುತ್ತದೆ. ಇಡೀ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವ ಆ ಮಹಾನ್ ಸತ್ಯದ ಒಂದು ಅಂಶವಾಗಿರುತ್ತದೆ. ಬಿಡಿಯಾಗಿ ಇರುವುದಲ್ಲ. ಪೂರ್ಣ ಹೊಂದುವ ಗುಣ ಸೆಳೆತ ಎಲ್ಲರಲ್ಲಿಯೂ ಸಹಜವಾಗಿರುತ್ತದೆ. ಆದುದರಿಂದಲೇ ಕೀರ್ತಿ ಮತ್ತು ಸನ್ಮಾನಗಳು ಆತ್ಮೋನ್ನತಿಗೆ ಮತ್ತು ಜ್ಞಾನದೆಡೆಗೆ ಕರೆದೊಯ್ಯುವ ಸ್ವಾಭಾವಿಕ ಆಸಕ್ತಿಗಳಾಗಿರುತ್ತವೆ. ಇಂಥ ಬಯಕೆಯನ್ನು ನಾನು ಕೆಟ್ಟದು ಎಂದು ಹೇಳುವುದಿಲ್ಲ..."

ಈ ಉಸಾಬರಿಯಿಂದ ತಪ್ಪಿಸಿಕೊಳ್ಳಲು ಸುಮಿತ್ರಾ, "ಆಯಿತು ಮಹರಾಯರೇ, ಹೋಗಿ ಬನ್ನಿ, ನಿಮ್ಮ ಜೊತೆ ನಾನು ವಾದಿಸುವುದಿಲ್ಲ. ಆದರೆ ನಾಳೆಯ ದಿನದ ವ್ಯವಸ್ಥೆ ಮಾಡಿಕೊಂಡು ಬನ್ನಿ. ಯಾಕೆಂದರೆ ನನ್ನ ಹತ್ತಿರ ಕೇವಲ ಒಂದಾಣೆ ಮಾತ್ರ ಇರೋದು. ಯಾರು ಸಾಲ ಕೊಡುತ್ತಾರೋ ಅವರಿಂದಲೇ ಪಡೆದಿದ್ದೇನೆ.ಸಾಲ ತೀರಿಸುವ ಕಷ್ಟ ಬರಬಾರದಲ್ಲವೇ! ನಿಮಗಿನ್ನೇನೂ ಹೆಚ್ಚಿಗೆ ಹೇಳೋದು ಉಳಿದಿಲ್ಲ..." ಎಂದಳು.

ಪ್ರವೀಣರು ಒಂದು ಕ್ಷಣದ ನಂತರ ಹೇಳಿದರು.

"ಎರಡು ಪತ್ರಿಕೆಗಳಿಂದ ನನಗೆ ಸಂಭಾವನೆ ಬರಬೇಕಿದೆ. ಬರಬಹುದು. ಬಹುಶಃ ನಾಳೆಯವರೆಗೆ ಬರಬಹುದು. ಸದ್ಯ ನಾಳೆ ಉಪವಾಸ ಬೀಳಬೇಕಾದರೂ ಚಿಂತೆ ಇಲ್ಲ ಬಿಡು. ನಮ್ಮ ಕೆಲಸ ನಾವು ಮಾಡಿದರೆ ಸಾಕು ತನುಮನದಿಂದ ನಾವು ಕಾಯಕ ಶ್ರದ್ಧೆಯಿಂದ ಮಾಡಬೇಕಷ್ಟೇ. ಪ್ರತಿಫಲ ಸಿಗಲಿಲ್ಲವೆಂದರೆ ಅದು ನಮ್ಮ ದೋಷವಲ್ಲ.ಆತ್ಮಸಾಕ್ಷಿ ಬಿಡಬಾರದು. ಸತ್ತರೂ ಪರ್ವಾ ಇಲ್ಲ.ನಮ್ಮಂತ ಎಷ್ಟೊಂದು ಲಕ್ಷ ಜನ ಸಾಯುತ್ತಾರೆ. ಸಂಸಾರ ಹಾಗೂ ಹೀಗೂ ನಡೆಯುತ್ತಾನೇ ಇರುತ್ತದೆ.ಉಪವಾಸವೇ

ಸತ್ತರೆ ದುಃಖವೇಕೆ...? ಮೃತ್ಯು ಹೆದರುವ ವಸ್ತುವಲ್ಲ. ನಾನು ಕಬೀರ ಪಂಥದವನು. ಹೆಣವನ್ನು ಸಿಂಗರಿಸಿ ಹಾಡು ಕುಣಿತದೊಂದಿಗೆ ಎತ್ತಿಕೊಂಡು ಒಯ್ಯುವವನು. ಇದಕ್ಕೆಲ್ಲಾ ಹೆದರುವುದಿಲ್ಲ. ನಾನು ಮಾಡುವುದು ನನ್ನ ಸಾಮರ್ಥ್ಯಕ್ಕೆ ಮೀರಿದೆಯೋ ಇಲ್ಲವೋ ನೀನೇ ಹೇಳು. ಇಡೀ ರಾತ್ರಿ ಜಗತ್ತು ಸುಖ ನಿದ್ರೆಯಲ್ಲಿದ್ದರೆ ನಾನು ನನ್ನ ಲೇಖನಿ ಹಿಡಿದು ಬರೆಯುತ್ತಾ ಕುಳಿತುಕೊಳ್ಳುವುದಿಲ್ಲವೇ...? ಜನ ನಗಲಿ ಹಾಸ್ಯ ಮಾಡಲಿ, ಕುಣಿದು ಕುಪ್ಪಳಿಸಲಿ. ನನಗೆ ಅದೆಲ್ಲ ಬುದ್ಧಿಗೇಡಿತನ ಅನಿಸುತ್ತೆ. ತಿಂಗಳಾದರೂ ಒಂದಿಷ್ಟು ನೆಮ್ಮದಿಯಿಂದ ಉಸಿರು ಬಿಡುವಂತಾಗಿದೆಯಲ್ಲಾ. ಹೋಳಿ ಹಬ್ಬವೂ ಆಚರಿಸಲಿಲ್ಲ. ಅನಾರೋಗ್ಯ ಬೇರೆ...! ಬರೀ ಬರೆಯುವುದೇ ನನ್ನ ತಲೆಯಲ್ಲಿ ಹೊಕ್ಕಿರುತ್ತದೆ. ನೀನು ಹಾಸಿಗೆ ಹಿಡಿದಾಗಲೂ ವೈದ್ಯರನ್ನು ಕರೆತರಲು ನನಗೆ ಸಮಯ ಸಿಗುತ್ತಿರಲಿಲ್ಲ. ನೀನೇ ಯೋಚಿಸು, ಜಗತ್ತು ನಮ್ಮನ್ನು ಲಕ್ಷಿಸಲಿ ಅಥವಾ ಬಿಡಲಿ, ಅದಕ್ಕೆ ಹಾನಿ ಅಷ್ಟೇ...! ನನಗೇನು ನಷ್ಟ..? ದೀಪದ ಕೆಲಸ ಬೆಳಕು ಕೊಡುವುದು. ಬೆಳಕು ಬೇಡ ಎಂದು ಅದರ ಮುಂದೆ ಯಾರಾದರೂ ನಿಂತರೆ ಅದು ಪ್ರಕಾಶ ಬೆಳಗುವುದನ್ನು ನಿಲ್ಲಿಸುವುದೇ...? ಅಂಥ ಯಾವ ಸ್ನೇಹಿತರು, ಪರಿಚಿತರು, ಸಂಬಂಧಿಕರು ನನಗಿದ್ದಾರೆ ಹೇಳು, ಇವರ ಋಣದಲ್ಲಿ ನಾನಿಲ್ಲ ಎನ್ನಲು...? ಅಷ್ಟೇಕೆ ಮನೆ ಹೊರಗೆ ಹೋಗಲು ನಾಚಿಕೆ ಪಡುವಂತಾಗುತ್ತದೆ. ಸದ್ಯ ಜನ ನನ್ನನ್ನುಕೆಟ್ಟ ದೃಷ್ಟಿಯಿಂದ ನೋಡುವುದಿಲ್ಲ ಎನ್ನುವುದೇ ಸಂತೋಷದ ಸಂಗತಿ. ನನಗೆ ಅವರು ಹೆಚ್ಚಿನ ಸಹಾಯ ಮಾಡಲಾಗದಿದ್ದರೂ ನನ್ನ ಬಗ್ಗೆ ಸಹಾನುಭೂತಿ ತೋರುತ್ತಾರಲ್ಲಾ, ಅಷ್ಟು ಸಾಕು.ಸಂತೋಷವಾಗಿರಲು ನನಗೆ ಇನ್ನೇನು ಬೇಕು...? ಒಬ್ಬ ಶ್ರೀಮಂತನಾದರೂ ನನಗೆ ಸನ್ಮಾನ ಮಾಡಲು ಮುಂದೆ ಬಂದನಲ್ಲಾ...!"

ಅವರಲ್ಲಿ ಒಂದು ರೀತಿ 'ಮತ್ತು' ಕವಿದಂತಾಗಿ ಅಹಂನಲ್ಲಿ ಮತ್ತೆ ಹೇಳಿದರು,

"ಇಲ್ಲ, ನಾನು ರಾತ್ರಿ ಹೋಗುವುದಿಲ್ಲ. ನನ್ನ ಬಡತನ ತನ್ನ ಮರ್ಯಾದೆಯ ಸೀಮೆ ದಾಟಿದೆ. ಈಗ ಅದರ ಮೇಲೆ ಪರದೆ ಹಾಕುವುದು ವ್ಯರ್ಥ. ನಾನು ಈಗಲೇ ಹೊರಡುತ್ತೇನೆ. ನನಗೆ ಆಮಂತ್ರಿಸಿದ ಶ್ರೀಮಂತ ಮತ್ತು ರಾಜಾ ಸಾಹೇಬರು ಅಂತಿಂಥ ಸಾಧಾರಣ ವ್ಯಕ್ತಿಗಳಲ್ಲ. ರಾಜರು ಸಾಮಾನ್ಯರಾಗಿರುವುದಿಲ್ಲ. ಸಾಮಾನ್ಯರು ಶ್ರೀಮಂತರಾಗಿರುವುದಿಲ್ಲ.ಅವರು ಈ ನಗರದವರಷ್ಟೇ ಅಲ್ಲ, ಇಡೀ ಭಾರತದ ವಿಖ್ಯಾತ ಶ್ರೀಮಂತರಲ್ಲಿ ಒಬ್ಬರು. ಈಗಲೂ ನನಗೆ ಯಾರಾದರೂ ಕನಿಷ್ಠವಾಗಿ ಕಂಡರೆ ಅವರೇ ಕೆಳಮಟ್ಟದವರು ಎಂದು ಹೇಳಬೇಕಾಗುತ್ತದೆ...!"

****

ಸಾಯಂಕಾಲದ ಸಮಯ ಪ್ರವೀಣರು ತಮ್ಮ ಹರಿದ ಹಳೆಯ ಕೋಟನ್ನು, ಧೂಳಾವರಿಸಿದ ಚಪ್ಪಲಿಯನ್ನು ಮತ್ತು ವಿಚಿತ್ರವಾದ ಟೋಪಿಯನ್ನು ಧರಿಸಿ ಮನೆಯ ಹೊರಗಾದರು.ಅಸ್ತವ್ಯಸ್ತವಾದ ಉಡುಪು ತೊಡಪುಗಳ ಬಗ್ಗೆ ಆಸಕ್ತಿ ಇಲ್ಲದ ಅವರ ನಡತೆ ಯಾವುದೇ ಹೊರ ಜಗತ್ತಿನ ಗಮನ ಸೆಳೆಯಬೇಕೆನ್ನುವ ವಾಂಛೆಯೂ ಇಲ್ಲದಂತಿತ್ತು. ಸಾಹಿತ್ಯ ರಚನೆಯೇ ಪರೋಕ್ಷವಾಗಿ ಎಲ್ಲರ ಮೇಲೆ ಪ್ರಭಾವ ಬೀರುವುದಾಗಿತ್ತು. ದೀಪದ ಕೆಲಸ ಎಲ್ಲೆಡೆಯೂ ಪ್ರಕಾಶ ಬೀರುವ ಭ್ರಾಂತಿ ಅವರ ಪ್ರತಿಷ್ಠೆಯಲ್ಲಿ ಹೊರಸೂಸುತ್ತಿತ್ತು. ಅವರು ಮನೆ ಬಿಟ್ಟು ಯಾವಾಗಾದರೂ ಹೊರ ನಡೆಯಬೇಕಾದಾಗ ಸುತ್ತಮುತ್ತಲಿನ ಅಂಗಡಿಯವರ ಕಣ್ಣು ತಪ್ಪಿಸಿ ಓಣಿಗಳಿಂದ ಹೊರನಡೆಯುತ್ತಿದ್ದರು. ಆದರೆ ಈ ದಿನ ಅವರು ತಲೆ ಎತ್ತಿ ಅವರ ಮುಂದಿನಿಂದಲೇ ಹೊರಟರು. ಅವರ ಪ್ರಶ್ನೆಗಳೇನಾದರೂ ಇದ್ದರೆ ತಕ್ಕ ಉತ್ತರ ಕೊಡಲು ಸಿದ್ಧರಾಗಿದ್ದರು. ಆದರೆ ಸಾಯಂಕಾಲದ ಸಮಯವಾಗಿದ್ದರಿಂದ ಎಲ್ಲಾ ಅಂಗಡಿಗಳ ಮುಂದೆ ಗ್ರಾಹಕರು ಸೇರಿಕೊಂಡಿದ್ದರು. ಯಾರೂ ಅವರೆಡೆಗೆ ನೋಡುತ್ತಿರಲಿಲ್ಲ. ಸಾಲದ ಹಣದಿಂದಾಗಿ ಪರಿಚಿತ ವ್ಯಕ್ತಿಯನ್ನು ಕೂಡಾ ನಿಕೃಷ್ಟವಾಗಿ ಕಾಣುತ್ತಿದ್ದರಲ್ಲಾ...! ಈಗ ಯಾರನ್ನೋ ವಿಶೇಷ ವ್ಯಕ್ತಿಯನ್ನು ಕಾಣಲು ಹೊರಟಂತೆ ದಿವ್ಯ ಗತ್ತಿನಲ್ಲಿ ಎದ್ದು ಕಾಣತೊಡಗಿದರು.

ಪ್ರವೀಣರು ಒಂದು ಸಲ ಇಡೀ ಮಂಡಿಯನ್ನು ಸುತ್ತು ಹಾಕಿದರು. ತೃಪ್ತಿಯಾಗದೆ ಮತ್ತೆ ಎರಡನೆಯ ಸಲವು ಸುತ್ತಾಡಿದರು. ಅದು ಫಲ ನೀಡಲಿಲ್ಲ. ಕೊನೆಗೆ ಅವರೇ ಸ್ವತಃ ಹಾಫೀಸ್ ಸಮದ್‌ನ ಅಂಗಡಿ ಮುಂದೆ ಹೋಗಿ ನಿಂತರು. ಅವನ ಅಂಗಡಿಯಲ್ಲಿ ಪ್ರವೀಣರು ಒಂದು ಕೊಡೆ ತೆಗೆದುಕೊಂಡಿದ್ದವರು ಅದರ ಹಣವನ್ನು ಈವರೆಗೂ ಹಿಂತಿರುಗಿಸಿರಲಿಲ್ಲ. ಪ್ರವೀಣರನ್ನು ನೋಡಿ,

"ಓ...ಮಹಾಶಯರೇ, ಕೊಡೆಯ ಹಣವನ್ನು ನೀವಿನ್ನೂ ತೀರಿಸಲೇ ಇಲ್ಲ. ನಿಮ್ಮಂಥ ನೂರು ಐವತ್ತು ಗ್ರಾಹಕರು ಸಿಕ್ಕರೆ ದಿವಾಳಿ ಎದ್ದಂತೆಯೇ...! ಎಷ್ಟೊಂದು ದಿನವಾಯಿತಲ್ಲಾ...?" ಎಂದ.

ಪ್ರವೀಣರ ಮುಖ ಅರಳಿತು.ಮನದಇಂಗಿತ ಪೂರ್ಣಗೊಂಡಿತ್ತಲ್ಲಾ..!

"ನಾನು ಮರೆತಿಲ್ಲ ಹಾಫೀಸ್ ಜಿ ಸಾಬ್, ಇತ್ತೀಚೆಗೆ ಎಷ್ಟೊಂದು ಕೆಲಸ ಅಂದ್ರೆ ಮನೆಯಿಂದ ಹೊರಗೆ ಬರೋದೇ ಕಷ್ಟವಾಗಿತ್ತು. ಕೈಯಲ್ಲಿ ಹಣವೇ ಉಳಿಯುತ್ತಿರಲಿಲ್ಲ. ನಿಮ್ಮ ದಯೆಯಿಂದ ಜನರ ಆದರ ಸನ್ಮಾನಗಳಿಗೆ ಮಾತ್ರ ಕೊರತೆ ಇರಲಿಲ್ಲ. ಸದಾ ನಾಲ್ಕು ಹತ್ತು ಜನ ಸುತ್ತುವರಿಯುತ್ತಿದ್ದರು. ಈ ಹೊತ್ತಿನಲ್ಲಿಯೂ ರಾಜಾ ಸಾಹೇಬರ ಬಂಗ್ಲೆಗೆ ಹೋಗ್ತಾ ಇದ್ದೀನಿ.ವಿಶೇಷ ಆಮಂತ್ರಣ ಬಂದಿದೆ.ದಿನಾಲು ಯಾರದಾದರೂ ಇಂಥ ಆಮಂತ್ರಣಗಳು ಇದ್ದೇ ಇರುತ್ತವೆ..."

ಹಾಫೀಸ್ ಸಮದ್ ಪ್ರಭಾವಿತನಾಗಿ,

"ಹೌದೇ...!? ಇವತ್ತು ರಾಜಾ ಸಾಹೇಬರಲ್ಲಿಗೆ ದಯಮಾಡಿಸುತ್ತಿದ್ದೀರಾ...! ಒಳ್ಳೆಯದಾಯ್ತು. ನಿಮ್ಮಂಥ ಪ್ರತಿಭಾವಂತರಿಗೆ ಇಂಥ ಶ್ರೀಮಂತರು ಬೆಲೆ ಕೊಡದೆ ಇನ್ಯಾರಿಗೆ ಕೊಟ್ಟಾರು...? ಹಾರ್ದಿಕ ಶುಭಾಶಯಗಳು. ಈ ಕಾಲದ ಮಹತ್ವದ ವ್ಯಕ್ತಿಗಳು ನೀವು ಸಂದರ್ಭ ಬಂದಾಗ ಬಡವನನ್ನು ಮರೆಯಬೇಡಿರಿ. ಈ ರಾಜಾ ಸಾಹೇಬರಿಗೆ ನಮ್ಮ ಮೇಲೆ ದೃಷ್ಟಿ ಬಿದ್ದರೆ ಹೇಳುವುದೇನು...? ಇಡೀ ದಾಸ್ತಾನು ಅವರಿಗೆ ಬೇಕಾಗಬಹುದು. ವರ್ಷದಲ್ಲಿ ಅವರಿಗೆ ಎರಡೂವರೆ ಮೂರು ಲಕ್ಷ ಲಾಭವಿರಬೇಕಲ್ಲವೇ...!" ಎಂದ. ಅವನ ಮಾತಿನಲ್ಲಿರುವ ಎರಡೂವರೆ ಮೂರು ಲಕ್ಷ ಎನ್ನುವುದು ಪ್ರವೀಣರ ಅರಿವಿಗೆ ಬಂತು. ಬಾಯಿಮಾತಿನ ಜಮೆ ಖರ್ಚಿಗೆ ಹತ್ತು ಇಪ್ಪತ್ತು ಲಕ್ಷ ಹೆಚ್ಚಿಗೆ ಹೇಳಲಡ್ಡಿಯಿಲ್ಲ ಎಂದುಕೊಂಡರು.

"ಎರಡೂವರೆ ಮೂರು ಲಕ್ಷ...? ಅವರಿಗೆ ಅವಮಾನ ಮಾಡುತ್ತಿದ್ದೀರಷ್ಟೇ. ಅವರ ಆದಾಯವೆಷ್ಟು ಗೊತ್ತೇನು..? ಹತ್ತು ಲಕ್ಷಕ್ಕಿಂತ ಕಡಿಮೆ ಇಲ್ಲ. ಒಬ್ಬ ಸಾಹೇಬನದು ಅಂದಾಜು ಇಪ್ಪತ್ತು ಲಕ್ಷವಿದೆ. ತಾಲ್ಲೂಕು ನೋಡಲ್ಲವೇ..? ಸಂಕೀರ್ಣ ಮಳಿಗೆಗಳಿವೆ. ಅಧಿಕಾರವಿದೆ. ದೇಣಿಗೆ ಹಣ ಬರುತ್ತದೆ, ಮತ್ತು ಹೆಚ್ಚಿನದಾಗಿ ಸರ್ಕಾರದ ಬಹಾದ್ದೂರ ಸಾಹೇಬರ ಕೃಪಾಕಟಾಕ್ಷವಿದೆ..."

ಹಾಫೀಸ್ ಸಮದ್ ಬಹಳ ವಿನಮ್ರತೆಯಲ್ಲಿ, "ಹೌದೆ...!? ಯಜಮಾನರೇ, ಈ ಅಂಗಡಿಯೂ ನಿಮ್ಮದೇ ಅಂದುಕೊಳ್ಳಿ. ಒಂದು ಒಳ್ಳೆಯ ತಾಂಬೂಲ ನಿಮಗಾಗಿ ಸಿದ್ಧಪಡಿಸಲು ಅಪ್ಪಣೆ ಕೊಡುತ್ತೀರಾ...? ಇದೊಂದು ನನ್ನ ವಿನಂತಿ, ಬನ್ನಿ, ದಯವಿಟ್ಟು ಎರಡು ನಿಮಿಷ ಕುಳಿತುಕೊಳ್ಳಿ. ನಿಮಗೆ ಇಷ್ಟದ ವಸ್ತುವನ್ನು ತೋರಿಸಲಾ...? ಮನೆಯವರ ಸಲುವಾಗಿ ದಯವಿಟ್ಟು ನೋಡಿ..." ಎಂದ.

ಪ್ರವೀಣರು ತಾಂಬೂಲ ಸೇವನೆ ಮಾಡುತ್ತಾ, "ಸ್ವಲ್ಪ ತಾಳ್ಮೆ ಇರಲಿ, ಅಲ್ಲಿ ತಡವಾದೀತು ಅಂತ. ಇನ್ನೊಮ್ಮೆ ಯಾವಾಗಾದರೂ ಬರ್ತಿನಿ."

ಅಲ್ಲಿಂದ ಎದ್ದು ಅವರು ಒಂದು ಬಟ್ಟೆ ಅಂಗಡಿಯ ಮುಂದೆ ಬಂದು ನಿಂತುಕೊಂಡರು. ಮನೋಹರದಾಸ್ ಅವರ ಹೆಸರಾಗಿತ್ತು.ಪ್ರವೀಣರು ನಿಂತಿರುವುದನ್ನು ಕಂಡು ಕಣ್ಣು ಕಿರಿದು ನೋಡಿದರು. ಹಣ ವಾಪಸ್ಸು ಕೊಡಲು ಬಂದಿರಬೇಕು, ಇಷ್ಟು ದಿನ ಊರಲ್ಲಿರಲಿಕ್ಕಿಲ್ಲ ಎಂದುಕೊಂಡು.

“ಪ್ರವೀಣ್ ಜಿ, ಏನಣ್ಣ...! ಬಹಳ ದಿವಸದಿಂದ ದರ್ಶನವಾಗಲಿಲ್ಲ. ಹುಡುಗನಿಗೆ ವಸೂಲಿಗೆ ಕಳುಹಿಸಿದ್ದೆ. ಮನೆ ಸಿಗಲಿಲ್ಲ ಅಂತ ವಾಪಸ್ ಬಂದ. ನಿಮ್ಮ ಮನೆ ವಿಳಾಸವೇ ಸಿಗಲಿಲ್ಲ ಅವನಿಗೆ. ಮುನಿಮ್ ಜಿ, ನೋಡಿ ಇವರ ಲೆಕ್ಕ ಎಷ್ಟಿದೆ...?” ಎಂದ.

ಪ್ರವೀಣರು ರಕ್ಷಾಕವಚ ಧರಿಸಿದಂತೆ ಎದೆ ಸೆಟೆದು ನಿಂತಿದ್ದರು.

“ರಾಜಾ ಸಾಹೇಬರ ಅರಮನೆಯಿಂದ ವಾಪಸ್ಸು ಬಂದು ನಿಶ್ಚಿಂತೆಯಿಂದ ಕುಳಿತು ಕೊಳ್ಳುತ್ತೇನೆ. ಸ್ವಲ್ಪ ಅವಸರವಿದೆ...” ಎಂದರು. ರಾಜಾ ಸಾಹೇಬರ ಪಟ್ಟಿಯಲ್ಲಿ ಪ್ರವೀಣರನ್ನು ಸೇರಿಸುವಂತಾಗಿತ್ತು. ಮೋಹನದಾಸನಲ್ಲಿ ಎಷ್ಟೋ ಸಾವಿರ ರೂಪಾಯಿ ರಾಜಾ ಸಾಹೇಬರ ಬಾಕಿ ಇತ್ತು.ಆದರೂ ಅವರ ಸಂಬಂಧ ಬಿಡಲಾಗುತ್ತಿರಲಿಲ್ಲ. ಒಂದಕ್ಕೆ ಮೂರರಷ್ಟು ವಸೂಲಿ ಮಾಡಿಕೊಳ್ಳುತ್ತಿದ್ದ.

“ಎಲೆ ಅಡಿಕೆಯಾದರೂ ಹಾಕ್ಕೊಂಡು ಹೋಗಿರಿ ಮಹಾಶಯರೇ... ರಾಜಾ ಸಾಹೇಬರು ಒಂದು ದಿನಕ್ಕಾದರೆ ನಾವು ಹನ್ನೆರಡು ತಿಂಗಳಿಗೆ ಆಗ್ತಿವಿ ಅಣ್ಣಾ ಸಾಹೇಬ್ರೆ... ಬಟ್ಟೆ ಬರೆ ಬೇಕಾದರೆ ತೆಗೆದುಕೊಂಡು ಹೋಗಿರಲ್ಲಾ, ಈವಾಗ ಹೋಳಿ ಹಬ್ಬವಿದೆ. ಹಾಗೆಯೇ ರಾಜಾ ಸಾಹೇಬರ ಹಳೆಯ ಲೆಕ್ಕ ಬಹಳ ದಿನದಿಂದ ಉಳಿದುಕೊಂಡಿದೆ. ಅಂತ ಅವರ ಖಜಾಂಚಿಗೆ ಹೇಳಿಯಪ್ಪಾ.. ಎರಡೆರಡು ವರ್ಷ ಯಾರು ಹಳೆಯ ಲೆಕ್ಕ ಮುಂದುವರೆಸುತ್ತಾರೆ.ಈಗ ಹೊಸ ಲೆಕ್ಕ ಶುರುವಾಗಿದೆ...” ಎಂದ.

“ಎಲೆ ಅಡಿಕೆ ಇರಲಿ ಬಿಡಣ್ಣ, ತಡವಾಗುತ್ತೆ....

ಅವರು ಅಷ್ಟೊಂದು ಭೇಟಿ ಮಾಡಲು ಉತ್ಸುಕರಾಗಿದ್ದಾರೆ, ಸನ್ಮಾನ ಮಾಡಲು ಮುಂದಾಗಿದ್ದಾಗ ಅವರಿಗೆ ಕಷ್ಟವಾಗದಂತೆ ಬೇಗ ಹೋಗಬೇಕಾದ್ದು ನನ್ನ ಧರ್ಮ ಅಲ್ಲವೇ...? ನಾನಂತೂ ಗುಣಕ್ಕೆ ಬೆಲೆ ಕೊಡುವವನು. ಹಣಕ್ಕಲ್ಲ..! ಸನ್ಮಾನ ಮಾಡುತ್ತಾರೆ ಅಂತ ಅವರ ಗುಲಾಮಿತನ ಮಾಡಲಿಕ್ಕಾಗಲ್ಲ. ಅಧಿಕಾರದ ದಾಹ ಇದ್ದರೆ ಅವರವರಿಗೆ...” ಎಂದರು ಪ್ರವೀಣರು.

****

ಅರಮನೆಯ ದೀಪಗಳು ಬೆಳಗಿದವು. ಪ್ರವೀಣರು ರಾಜಾ ಸಾಹೇಬರ ವಿಶಾಲ ಭವನದೆಡೆಗೆ ಹೆಜ್ಜೆ ಹಾಕಿದರು. ಹೊರಗಡ ಶ್ರೀಮಂತರ, ಗಣ್ಯರ ಮೋಟಾರು ವಾಹನಗಳು ನಿಂತಿದ್ದವು. ರಕ್ಷಣಾ ಉಡುಪು ಧರಿಸಿದ್ದ ಕಾವಲುಗಾರ ಬಾಗಿಲಲ್ಲಿ ನಿಂತಿದ್ದ. ಗಣ್ಯರ ಸ್ವಾಗತ ಮಾಡುತ್ತಿದ್ದ. ಪ್ರವೀಣರನ್ನು ಕಂಡು ಒಂದು ಕ್ಷಣ ಹಿಂಜರಿದ. ಅವರನ್ನು ಶಿರದಿಂದ ಪಾದದವರೆಗೆ ನೋಡಿ,

“ತಮ್ಮಲ್ಲಿ ಆಮಂತ್ರಣ ಪತ್ರವಿದೆಯೇ ?” ಎಂದ. ಪ್ರವೀಣರ ಜೇಬಿನಲ್ಲಿ ಆಮಂತ್ರಣ ಪತ್ರವಿತ್ತು. ಆದರೆ ವ್ಯಕ್ತಿ ಭೇದ ಭಾವದ ಬಗ್ಗೆ ಅವರಿಗೆ ಆಕ್ರೋಶವಿತ್ತು. ತನ್ನನ್ನು ಮಾತ್ರವೇ ಯಾಕೆ ಕೇಳಬೇಕು...? ಬೇರೆಯವರಲ್ಲಿ ಯಾಕೆ ಪ್ರಶ್ನಿಸಲಿಲ್ಲ ಎಂದುಕೊಂಡು,

“ಇಲ್ಲ. ನನ್ನ ಹತ್ತಿರ ಆಮಂತ್ರಣ ಪತ್ರವಿಲ್ಲ. ನೀವು ಬೇರೆ ವ್ಯಕ್ತಿಗಳಲ್ಲಿಯೂ ವಿಚಾರಿಸಿದ್ದರೆ ನಾನು ತೆಗೆದು ತೋರಿಸುತ್ತಿದ್ದೆ. ಈ ರೀತಿಯ ಭೇದ ಭಾವವನ್ನು ನಾನು ಅವಮಾನವೆಂದು ಬಗೆಯುತ್ತೇನೆ. ನೀವು ರಾಜಾ ಸಾಹೇಬರಿಗೆ ಹೇಳಿಬಿಡಿ. ಪ್ರವೀಣರು ಬಂದರು ಮತ್ತೆ ಹಾಗೆಯೇ ಬಾಗಿಲಿನಿಂದಲೇ ಹಿಂತಿರುಗಿ ಹೋದರು ಅಂತ.” ಎಂದರು.

“ಇಲ್ಲ ಇಲ್ಲ... ತಾವು ಒಳಗೆ ನಡೆಯಿರಿ ಮಹಾಶಯರೇ. ತಪ್ಪಾಯ್ತು... ನನಗೆ ತಮ್ಮ ಪರಿಚಯವಿರಲಿಲ್ಲವಲ್ಲಾ. ತಮ್ಮಂಥ ಮಹಾನುಭಾವರಿಂದಲೇ ಸಭಾಂಗಣಕ್ಕೆ ಶೋಭೆ ಬರೋದು.ದೇವರು ತಮಗೆ ಎಂಥ ವಾಣಿ ಕೊಟ್ಟಿದ್ದಾನೆಂದರೆ ಅದೇನು ಹೇಳುವುದು..?” ಎಂದು ಅವರನ್ನು ಆದರದಲ್ಲಿ ಬರ ಮಾಡಿಕೊಂಡ. ವಾಸ್ತವದಲ್ಲಿ ಅವನು ಪ್ರವೀಣರನ್ನು ನೋಡಿಯೇ ಇರಲಿಲ್ಲ. ಅವನು ಹೇಳಿದ ಮಾತುಗಳು ಪ್ರತಿಯೊಬ್ಬ ಸಾಹಿತ್ಯ ಸೇವೆಯ ಲೇಖಕನಿಗೆ ಅನ್ವಯಿಸುವಂಥದ್ದಾಗಿತ್ತು. ಯಾರು ಅಂಥ ಮಾತುಗಳನ್ನು ತೆಗೆದು ಹಾಕುತ್ತಿರಲಿಲ್ಲ.

ಪ್ರವೀಣರು ಒಳಗೆ ಬಂದು ನೋಡಿದರು. ಇಡೀ ಪ್ರಾಂಗಣವು ಬೆಳಕಿನಿಂದ ಉಜ್ವಲವಾಗಿ ಕಂಗೊಳಿಸುತ್ತಿತ್ತು. ಮಧ್ಯದಲ್ಲಿ ನೀರಿನ ಕಾರಂಜಿಯ ಜಲಪಾತ..! ಶಿಲಾ ದೇವಕನ್ನಿಕೆಯ ಮೇಲೆ ಸುರಿಯುವ ತುಂತುರು ಮಳೆ ನೀರಿನೋಪಾದಿಯಲ್ಲಿ ಇಂದ್ರಲೋಕದ ಝುರಿ ಹರಿಯುವಂತ ದೃಶ್ಯ ಕಣ್ಮನ ಸೆಳೆಯುವಂತಿತ್ತು. ಕಾರಂಜಿಯ ಸುತ್ತಮುತ್ತಲು ನಾಲ್ಕು ಕಡೆ ಮೇಜುಗಳನ್ನು ಜೋಡಿಸಿದ್ದರು.ಅದರ ಮೇಲೆ ಶುಭ್ರವಾದ ಬಿಳಿ ಬಟ್ಟೆ ಹೊದಿಸಿ ಸುಂದರ ಹೂ ದಾನಿಗಳನ್ನು ಇರಿಸಿದ್ದರು.

ಪ್ರವೀಣರನ್ನು ನೋಡಿದ ರಾಜಾ ಸಾಹೇಬರು ಸ್ವಾಗತಿಸುತ್ತಾ,

“ಬನ್ನಿ ಬನ್ನಿ, ಈ ಸಲದ ‘ಹಂಸ’ದಲ್ಲಿ ನಿಮ್ಮ ಲೇಖನ ನೋಡಿ ಮನಸ್ಸು ಕುಣಿದಾಡಿತು. ಇಂಥ ನಗರದಲ್ಲಿಯೂ ರತ್ನ ಬಚ್ಚಿಟ್ಟು ಕೊಂಡಿರುವುದು ನನಗೆ ತಿಳಿದಿರಲಿಲ್ಲ ನೋಡಿ. ನಾನಂತು ಅಚ್ಚರಿ ಪಟ್ಟೆ...!” ಎಂದರು. ಅಲ್ಲಿ ಉಪಸ್ಥಿತರಿದ್ದ ವ್ಯಕ್ತಿಗಳ ಪರಿಚಯ ಮಾಡಿಸತೊಡಗಿದರು.

“ಪ್ರವೀಣ್ ಮಹಾಶಯರ ಹೆಸರನ್ನು ನೀವೆಲ್ಲ ಕೇಳಿರಲಿಕ್ಕೆ ಬೇಕು. ಇವರೇ ಅವರು. ಎಂಥಾ ಮಾಧುರ್ಯ, ಎಂಥ ಓತಪ್ರೋತ, ಎಂಥಾ ಭಾವ, ಎಂಥ ಭಾಷೆ, ಎಂಥ ತಿಳಿವಳಿಕೆ, ಅದೆಂಥ ಚಮತ್ಕಾರ... ಲಹರಿ...ವಾಹ್.. ವಾಹ್... ನನ್ನ ಆತ್ಮವಂತು ಕುಣಿದಾಡಿ ಬಿಡುತ್ತದೆ ನೋಡಿ..”

ಇಂಗ್ಲೀಷ್ ಉಡುಪಿನಲ್ಲಿದ್ದ ಒಬ್ಬ ವ್ಯಕ್ತಿ ಯಾವುದೋ ಜೀವಿ ‘ಪಕ್ಷಿ ಧಾಮದಿಂದತಪ್ಪಿಸಿಕೊಂಡು ಬಂದಂತೆ ಪ್ರವೀಣನೆಡೆಗೆ ನೋಡಿದ.

“ನೀವು ಇಂಗ್ಲಿಷ್ ಕವಿತೆಗಳನ್ನು ಅಧ್ಯಯನ ಮಾಡಿದ್ದೀರಾ...? ಬೈರನ್, ಶೆಲ್ಲಿ, ಕೀಟ್ಸ್ ಮೊದಲಾದವರು ”

ಪ್ರವೀಣರು ಅಧಿಕಾರ ವಾಣಿಯಲ್ಲಿ,

“ಹೌದು, ಸ್ವಲ್ಪ ನೋಡಿದ್ದೀನಿ.” ಎಂದರು. “ಮಹಾಕವಿಗಳ ಒಂದಾದರೂ ರಚನೆಯನ್ನು ನೀವು ಅನುವಾಸಿದ್ದರೆ ಇವತ್ತು ನೀವು ಹಿಂದಿ ಭಾಷೆಯಲ್ಲಿ ಅಮರ ಸೇವೆ ಸಲ್ಲಿಸಿದಂತಾಗುತ್ತಿತ್ತು.”

ಬೈರನ್ ಶೆಲ್ಲಿ ಮುಂತಾದವರಿಗಿಂತ ಪ್ರವೀಣರು ತಮ್ಮನ್ನು ಕಡಿಮೆ ಎಂದು ತಿಳಿದು ಕೊಂಡಿರಲಿಲ್ಲ. ಅವರು ಇಂಗ್ಲೀಷ್ ಕವಿಗಳು. ಅವರ ಭಾಷೆ, ಶೈಲಿ, ವಿಷಯ, ವ್ಯಂಜನ ಎಲ್ಲವೂ ಇಂಗ್ಲಿಷ್‌ನವರ ಅಭಿರುಚಿಗನುಸಾರವಾಗಿರುತ್ತಿದ್ದವು. ಅದರ ಅನುವಾದವು ಗೌರವದ ಮಾತೆಂದು ಪ್ರವೀಣರು ತಿಳಿಯುತ್ತಿರಲಿಲ್ಲ. ಅದರಂತೆ ತಮ್ಮ ಕೃತಿಯ ಅನುವಾದವೂ ಗೌರವದ ವಸ್ತುವಾಗಿ ಅವರಿಗೆ ತೋರುತ್ತಿರಲಿಲ್ಲ.

“ಇಲ್ಲಿ ನಮ್ಮಲ್ಲಿ ವಿದೇಶೀಯರ ಕವಿತೆಯ ಶಿಕ್ಷಣದ ಮೊರೆ ಹೋಗುವಷ್ಟು ಆತ್ಮ ದರ್ಶನದ ಕೊರತೆ ಬಿದ್ದಿಲ್ಲ.ಈ ವಿಷಯದಲ್ಲಿ ನಮ್ಮ ಭಾರತವು ಪಾಶ್ಚಿಮಾತ್ಯರಿಗೆ ಈಗಲೂ ಸ್ವಲ್ಪವಾದರೂ ಕಲಿಸುವಂತಿದೆ...” ಎಂದರು.

ಇಂಗ್ಲಿಷ್ ಭಕ್ತ ಮಹಾಶಯ ಪ್ರವೀಣರನ್ನು ಹುಚ್ಚನೆಂದೇ ತಿಳಿದುಕೊಂಡಂತಿದ್ದ. ರಾಜಾ ಸಾಹೇಬರು ಪ್ರವೀಣನೆಡೆಗೆ ಒಂದು ಬಗೆಯ ನೋಟ ಬೀರಿ,

“ಸಂದರ್ಭ ಸಮಯ ನೋಡಿ ಮಾತನಾಡಿ, ಇಂಗ್ಲಿಷ್ ಸಾಹಿತ್ಯದ ಬಗ್ಗೆ ಹೇಳೋದೇನಿದೆ...? ಕವಿತೆ ತನ್ನದೇ ಒಂದು ಸಂವಿಧಾನವನ್ನಿಟ್ಟು ಕೊಂಡಿಲ್ಲ.” ಎಂದರು.

ಇಂಗ್ಲೀಷ್ ಭಕ್ತನು ಪ್ರವೀಣರೆಡೆಗೆ ಗರ್ವದ ದೃಷ್ಟಿ ಬೀರಿ,

"ಇಲ್ಲಿಯವರೆಗೆ ನಮ್ಮ ಕವಿಗಳು ನಿಮ್ಮ ಕವಿತೆಯ ಅರ್ಥವೇ ತಿಳಿದುಕೊಂಡಿಲ್ಲ. ಈವರೆಗೆ ವಿಯೋಗ ಮತ್ತು ಕ್ರೈಸ್ಟ್ ಕವಿತೆಯನ್ನೇ ಆಧಾರವಾಗಿಟ್ಟು ಕೊಂಡಿದ್ದಾರೆ." ಎಂದ. ಪ್ರವೀಣರು ಪ್ರತೀಕಾರವಾಗಿ,

"ನೀವು ಮೊದಲು ವರ್ತಮಾನದಲ್ಲಿರುವ ನಿಮ್ಮ ಕವಿಗಳ ಬಗ್ಗೆಯೇ ಅಧ್ಯಯನ ಮಾಡಿಲ್ಲ. ಮಾಡಿದರೂ ಮೇಲೆಮೇಲೆ ಅಷ್ಟೆ..!" ಎಂದರು ಖಾರವಾಗಿ.

ರಾಜಾ ಸಾಹೇಬರು ಪ್ರವೀಣರಬಾಯಿ ಮುಚ್ಚಿಸಬೇಕೆಂದು ನಿಶ್ಚಯಿಸಿದರು.

"ಪ್ರವೀಣ್ ಜಿ, ನೀವೇನು ಪರಾಂಜಪೆನಾ...? ನಿಮ್ಮ ಲೇಖನಗಳು ಕೂಡ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ.ಮತ್ತು ಅವರು ಕೂಡ ನಿಮ್ಮನ್ನು ಬಹಳ ಆದರ ದೃಷ್ಟಿಯಲ್ಲಿ ನೋಡುತ್ತಾರೆ."

ಈ ಮಾತಿನ ಆಶಯವೂ ಇಂಗ್ಲೀಷ್ ಬಗ್ಗೆ ಮಾತನಾಡದಿರಿ ಎನ್ನುವುದಾಗಿತ್ತು. ಪ್ರವೀಣರು ಅದನ್ನು ಅರ್ಥ ಮಾಡಿಕೊಂಡರು. ಪರಾಂಜಪಗಿಂತಲೂ ತಾನು ಕೆಳಮಟ್ಟದವನು ಎನ್ನುವಂತಾಯಿತಲ್ಲಾ...! ವಿದೇಶಿ ವೇಷಭೂಷಣದ ಮತ್ತು ಭಾಷೆಯ ಆ ಭಕ್ತ ಜಾತಿ ದ್ರೋಹಿಯಾಗಿದ್ದರೂ ಇಷ್ಟೊಂದು ಆದರ ಸನ್ಮಾನ ಪಡೆಯುತ್ತಿದ್ದಾನಲ್ಲಾ, ಎಂಥ ಅಸಹ್ಯ. ಇನ್ನೇನು ಮಾಡೊಕ್ಕಾಗುತ್ತೆ ಎಂದುಕೊಂಡರು.

ಅದೇ ವೇಷದ ಇನ್ನೊಬ್ಬ ವ್ಯಕ್ತಿ ಒಳಗೆ ಬಂದ. ರಾಜಾ ಸಾಹೇಬರು ಅವನ'ನ್ನುಅಭಿನಂದಿಸಿದರು.

"ಬನ್ನಿ ಡಾಕ್ಟರ್ ಚಡ್ಡಾ, ಹೇಗಿದ್ದೀರಿ...?" ಎಂದರು.

ಡಾಕ್ಟರ್ ಚಡ್ಡಾ ರಾಜಾ ಸಾಹೇಬರ ಹಸ್ತ ಲಾಘವ ಮಾಡಿದರು. ಪ್ರವೀಣರತ್ತ ಕುತೂಹಲ ಭರಿತರಾಗಿ ನೋಡಿ, "ತಮ್ಮ ಪರಿಚಯ...?" ಎಂದರು. ರಾಜಾ ಸಾಹೇಬರೇ ಪ್ರವೀಣರ ಪರಿಚಯ ಮಾಡಿಕೊಟ್ಟರು.

"ಇವರು ಪ್ರವೀಣ್ ಮಹಾಶಯರು ಅಂತ.ಭಾಷೆಯ ಒಳ್ಳೆಯ ಕವಿಗಳು, ಲೇಖಕರಾಗಿದ್ದಾರೆ..."

"ಹೌದಾ...! ತಾವು ಕವಿಗಳಾ...!?" ಎನ್ನುತ್ತಾ ಡಾಕ್ಟರ್ ಚಡ್ಡಾ ಒಂದು ನಿರ್ದಿಷ್ಟ ಅಂದಾಜಿನಲ್ಲಿ ಅಸಡ್ಡೆ ದೃಷ್ಟಿ ಬೀರಿ ಮುಂದೆ ನಡೆದರು.

ಮತ್ತೋರ್ವ ಮಹಾಶಯ ಅದೇ ಪೋಷಾಕಿನಲ್ಲಿ ಒಳ ಬಂದ. ಅವರು ಖ್ಯಾತ ವಕೀಲರಾಗಿದ್ದರು. ರಾಜಾ ಸಾಹೇಬರು ಅವರನ್ನು ಪ್ರವೀಣರೊಂದಿಗೆ ಪರಿಚಯಿಸಿದರು.ಅವರು ಅದೇ ದಿಸೆಯಲ್ಲಿ, "ಹೌದಾ...! ತಾವು ಕವಿಗಳೋ..." ಎನ್ನುತ್ತಾ ಮುಂದೆ ಸರಿದರು. ಇದೇ ರೀತಿ ಹಲವು ಬಾರಿ ನಡೆಯಿತು. "ಹೌದಾ ತಾವು ಕವಿಗಳೋ...?""ಇದೇ ಮಾತು ಪ್ರತಿ ಸಲವು ಎಲ್ಲರ ಬಾಯಿಂದ ಕೇಳಿ ಬಂತು. ಈ ಮಾತು ಪ್ರತಿ ಸಲವೂ ಕೇಳಿಬಂದಂತೆ ಪ್ರವೀಣರ ಹೃದಯಕ್ಕೆ ಒಂದು ಹೊಸ ಆಘಾತದ ಬಾಣವಾಗಿ ನಾಟುತ್ತಿತ್ತು. ಆ ಮಾತಿನ ಹಿಂದಿರುವ ಭಾವವು ಪ್ರವೀಣರಿಗೆ ಚೆನ್ನಾಗಿಯೇ ಅರ್ಥವಾಗುತ್ತಿತ್ತು. ನಿನ್ನ ಕಲ್ಪನೆಯ ಲೋಕದಲ್ಲಿ ನೀನು ಮೆರಿತಾ ಇರೋ...ನಿನ್ನ ಕಿಚಡಿ ಯಾರಿಗೆ ಬೇಕಾಗಿದೆ...? ಅದರಿಂದ ನಮಗೇನು ಉಪಯೋಗ...? ಇಂಥ ಸಭ್ಯ ಸಮಾಜದಲ್ಲಿ ನಿನ್ನ ಬರವಣಿಗೆ ಯಾವ ಲೆಕ್ಕದ್ದು...?' ಮಾತಿನರ್ಥವಾಗಿತ್ತು.

ಪ್ರವೀಣರು – ಮನಸ್ಸಿನಲ್ಲಿಯೇ ತಳಮಳಗೊಳ್ಳುತ್ತಿದ್ದರು. ಆಮಂತ್ರಣ ಪತ್ರ ಪಡೆದು ಧನ್ಯನಾದೆ ಎಂದುಕೊಂಡಿದ್ದರು. ಆದರೆ ಇಲ್ಲಿ ಬಂದು ಅವಮಾನಕ್ಕೊಳಪಡುವಂತಾಯಿತಲ್ಲಾ ಎಂದುಕೊಂಡರು. ಅವರ ಕುಟೀರವೇ ಇಲ್ಲಿಗಿಂತ ಹೆಚ್ಚು ಶಾಂತಿಧಾಮವಾಗಿತ್ತು. ತನ್ನ ಮನಸ್ಸಿನ ಲಾಲಸೆಗೆ ಧಿಕ್ಕರಿಸಿದರು. ಈಗ ಅವರಿಗೆ ಜ್ಞಾನೋದಯವಾದಂತಾಯಿತು. ತಾನು ಎಷ್ಟರ ಮಟ್ಟಿಗೆ ಸನ್ಮಾನಕ್ಕೆ ಯೋಗ್ಯನಾಗಿದ್ದೇನೆ ಎಂದು ಸ್ವವಿಮರ್ಶೆಯಲ್ಲಿ ತೊಡಗಿದರು. ಈ ಸ್ವಾರ್ಥಮಯ ಸಂಸಾರದಲ್ಲಿ ತಾನು ಯಾರಿಗೂ ಪ್ರಯೋಜನವಿಲ್ಲ. ವಕೀಲನನ್ನು ಸನ್ಮಾನಿಸುವ ಉದ್ದೇಶವು ಕಠಿಣ ಸಮಯದಲ್ಲಿ ಪ್ರಕರಣಗಳನ್ನು ಗೆಲ್ಲಿಸ ಬೇಕೆಂದಲ್ಲವೇ...? ತಾನೇನು ಪ್ರಕರಣಕ್ಕೆ ವಾದಿಸುವವನೇ...? ಡಾಕ್ಟರ್, ಹಕೀಮರನ್ನು ಸನ್ಮಾನಿಸುತ್ತಿರುವುದು ಫೀಸು ಇಲ್ಲದೆ ಶುಶ್ರೂಷೆ ಮಾಡಲಿ ಎಂದಲ್ಲವೇ..? ತಾನು ಲೇಖಕ...! ಬರೆಯುವುದಷ್ಟೇ ತನ್ನ ಕೆಲಸ. ತನ್ನಿಂದ ಯಾರಿಗೆ ಪ್ರಯೋಜನವಾದೀತು !?

ಇದ್ದಕ್ಕಿದ್ದಂತೆ ಜನರಲ್ಲಿ ಸಂಚಲನ ಮೂಡಿತು. ಅಂದಿನ ಪ್ರಧಾನ ಅತಿಥಿಗಳ ಆಗಮನವಾಯಿತು. ಅವರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು. ಅವರ ಉಪಸ್ಥಿತಿಗಾಗಿಯೇ ಅಲ್ಲಿ ಉತ್ಸವ ಸಮಾರಂಭವೇರ್ಪಡಿಸಲಾಗಿತ್ತು. ರಾಜಾ ಸಾಹೇಬರು ಒಂದೇ ಹಾರಿಕೆಗೆ ಅವರ ಹತ್ತಿರ ಹೋಗಿ ಹಸ್ತಲಾಘವ ಮಾಡಿದರು.ಪ್ರವೀಣರತ್ತ ನೋಡಿ,

"ನೀವು ಕವಿತೆ ಬರೆದುಕೊಂಡು ಬಂದಿರುತ್ತಿರಲ್ಲಾ..?" ಎಂದರು.

"ಇಲ್ಲ, ನಾನು ಯಾವ ಕವಿತೆಯೂ ಬರೆದಿಲ್ಲ." ಎಂದರು ಪ್ರವೀಣರು.

“ಹೌದೆ...? ತಾವು ಇದೆಂಥ ಕೆಲಸ ಮಾಡಿ ಬಿಟ್ರಪ್ಪಾ ರಾಜಕುಮಾರಾ...ಈಗಲಾದರೂ ಯಾವುದಾದರೂ ಒಂದು ಕವಿತೆ ಬರೆದುಬಿಡು, ಎರಡು ಇಲ್ಲವೆ ನಾಲ್ಕು ಸಾಲಾದರೂ ಸಾಕು. ಇಂಥ ಸಮಯದಲ್ಲಿ ಕವಿತಾ ವಾಚನ ಸಮಾರಂಭಕ್ಕೆ ಶೋಭೆ ತರುತ್ತದೆ.”

“ಇಷ್ಟು ಬೇಗ ನನಗೆ ಕವಿತೆ ಬರೆಯಲಿಕ್ಕೆ ಆಗಲ್ಲ...”

“ಥೂ ನಿನ್ನ, ನಾನು ಸುಮ್ಮನೆ ಇಷ್ಟು ದೊಡ್ಡ ವ್ಯಕ್ತಿಗಳಿಗೆ ನಿನ್ನನ್ನು ಪರಿಚಯಿಸಿ ಬಿಟ್ಟೆನಲ್ಲಾ... ಎಲ್ಲವೂ ವ್ಯರ್ಥವಾಯಿತು..”

“ನಿಜಕ್ಕೂ ವ್ಯರ್ಥವೇ...”

“ಅಯ್ಯೋ ನಮ್ಮಪ್ಪ... ಯಾವುದಾದರೂ ಪ್ರಾಚೀನ ಕವಿಯ ಒಂದು ಕವನವಾದರೂ ವಾಚನ ಮಾಡು.ಅದೆಲ್ಲ ಯಾರಿಗೆ ಇಲ್ಲಿ ತಿಳಿಯುತ್ತದೆ.”

“ಇಲ್ಲ, ಕ್ಷಮಿಸಿ. ನಾನು ಆ ತರಹದ ಗಿಳಿಪಾಠ ಹೇಳುವ ಪೂಜಾರಿಯಂತಲ್ಲ. ನಾಟ್ಯಕಾರನೂ ಅಲ್ಲ” ಅಷ್ಟು ಹೇಳಿದವರೇ ಪ್ರವೀಣರು ತಕ್ಷಣವೇ ಅಲ್ಲಿಂದ ಹೊರ ನಡೆದರು.

ಮನೆಗೆ ಬಂದರು. ಮುಖ ಸಂತೋಷದಲ್ಲಿ ಅರಳಿಕೊಂಡಿತ್ತು. ಅವರ ಪ್ರಸನ್ನ ಚಿತ್ತ ಭಾವಕ್ಕೆ ಉತ್ತೇಜಿತಳಾದ ಸುಮಿತ್ರಾ

“ಇದೇನು ಇಷ್ಟು ಬೇಗ ಬಂದು ಬಿಟ್ರಿ..!?” ಎಂದಳು.

“ಅಲ್ಲಿ ನನ್ನ ಅಗತ್ಯವೇ ಇರಲಿಲ್ಲ.”

“ಹೋಗಲಿ, ಮುಖ ಅರಳಿ ಕೊಂಡಿದೆ. ಸಖತ್ ಸನ್ಮಾನವಾಗಿರಬೇಕಲ್ಲಾ...?”

“ಹೌದು, ಸನ್ಮಾನವಾಯಿತು, ನಿರೀಕ್ಷೆ ಮೀರಿ...”

“ತುಂಬಾ ಖುಷಿ ಪಟ್ಟಿರಿ ತಾನೇ?”

ಪ್ರವೀಣರು ಮನದಲ್ಲಿಯೇ ನಕ್ಕರು. “ಈ ದಿನ ತನಗೆ ಒಂದು ಒಳ್ಳೆಯ ಪಾಠ ಸಿಕ್ಕಿತಲ್ಲಾ...!? ತಾನು ದೀಪ ಮಾತ್ರ ತನ್ನ ಕೆಲಸ ಉರಿಯುವುದಷ್ಟೇ... ಈ ದಿನ ಆ ತತ್ವವನ್ನು ಮರೆತುಬಿಟ್ಟಿದ್ದೆ. ಸದ್ಯ ದೇವರು ಅಲ್ಲಿ ಅಧಿಕ ಪ್ರಸಂಗಿತನ ತೋರಲು ಬಿಡಲಿಲ್ಲ. ಈ ಕುಟೀರವೇ ತನಗೆ ಸ್ವರ್ಗ..! ದೀಪದಂತೆ ಪ್ರಕಾಶಿಸುವುದಕ್ಕೆ ಮಾತ್ರ ತಾನು ಇಲ್ಲಿ ಹುಟ್ಟಿರುವುದು. ಈ ತತ್ವದಲ್ಲಿಯೇ ತನ್ನ ಸಾಹಿತ್ಯ ಸೇವೆ

ಅಡಗಿದೆ.ಅದೇ ತನಗೆ ತಪಸ್ಸು..." ಎಂದು ಪ್ರವೀಣರು ನಿರಾಳರಾಗಿ ಯಾವತ್ತೂ ಇಲ್ಲದ ದಿವ್ಯ ಮಂದಹಾಸ ಬೀರಿದರು.

## 3. ಮಕ್ಕಳ ನಾಟಕಗಳಲ್ಲಿ ಹಾಸ್ಯ

**- ಡಾ. ಎಂ.ಎಸ್. ವಿದ್ಯಾ**

ಆಧುನಿಕ ಪಾಶ್ಚಾತ್ಯರಂಗದಿಂದ ಪ್ರಭಾವಗೊಂಡ ಹವ್ಯಾಸಿರಂಗವು ತನ್ನ ಪ್ರಯೋಗಶೀಲತೆಯಿಂದ ಮತ್ತಷ್ಟು ರಂಗಶಾಖೆಗಳಾಗಿ ವಿಸ್ತಾರಗೊಂಡಿತು. ಅವುಗಳಲ್ಲಿ ಪ್ರಧಾನವಾದುದು ಮಕ್ಕಳ ರಂಗಭೂಮಿ.

ಮೊದಮೊದಲು ಕನ್ನಡದಲ್ಲಿ ನಾಟಕಗಳ ಮೂಲಕ ನೀತಿಬೋಧೆ ಮಾಡುವ ಕೃತಿಗಳೇ ಮಕ್ಕಳ ನಾಟಕಗಳಾಗಿ ವಿಜೃಂಭಿಸಿದೆ. ಮಕ್ಕಳ ಮುಗ್ಧ ಮನಸ್ಸನ್ನು ರಂಜಿಸುವ, ಅವರ ಕುತೂಹಲಕ್ಕೆ ರೆಕ್ಕೆ ಮೂಡಿಸುವ, ಕಲ್ಪನೆಯನ್ನು ರೂಪಿಸುವ ಉತ್ತಮ ಬಗೆಯ ಮಕ್ಕಳ ನಾಟಕಗಳು ನೀತಿಪಾಠವನ್ನು ಸಹಜವಾಗಿಯೇ ಹೊಂದಿರುತ್ತವೆ. ಇಪ್ಪತ್ತನೆಯ ಶತಮಾನದ ನಾಟಕಗಳ ಪ್ರಮುಖ ಕೊಡುಗೆ ಎಂದರೆ ಮಕ್ಕಳ ನಾಟಕ. ಅಲ್ಲಿಯವರೆಗೂ ನಮ್ಮ ಸಾಹಿತ್ಯದಲ್ಲಿ ಮಕ್ಕಳಿಗಾಗಿ ಏನೂ ಕೂಡ ರಚಿತವಾಗಲಿಲ್ಲ (ಜನಪದ ಸಾಹಿತ್ಯದಲ್ಲಿ ಮಕ್ಕಳ ಬಗ್ಗೆ ಬಂದ ಕೆಲವು ಹಾಡುಗಳನ್ನು ಬಿಟ್ಟರೆ). ಕೈಲಾಸಂ, ಜಿ.ಪಿ.ರಾಜರತ್ನಂ ಮೊದಲಾದವರು ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದ ಮಕ್ಕಳ ಸಾಹಿತ್ಯ ರಚಿಸಿದರು. ನಾಟಕಗಳೂ ಹಿಂದೆ ಉಳಿಯಲಿಲ್ಲ. ಎಲ್ಲ ಪ್ರಕಾರಗಳಲ್ಲೂ ಕೃಷಿ ನಡೆದಂತೆ ಮಕ್ಕಳ ನಾಟಕಗಳಲ್ಲಿ ಹಲವು ಪ್ರಯೋಗಗಳು ಆಯಿತು. ಮಕ್ಕಳನ್ನು ಆಕರ್ಷಿಸಲು ಹಾಸ್ಯವು ಅನಿವಾರ್ಯ. ಮನರಂಜನೆಯ ಪ್ರಮುಖ ಸಾಧನ ನಗು. ಮಕ್ಕಳ ನಾಟಕಕಾರರು ತಮ್ಮ ನಾಟಕಗಳಲ್ಲಿ ಹಾಸ್ಯರಸವನ್ನು ಯಶಸ್ವಿಯಾಗಿಯೇ ತಂದಿದ್ದಾರೆ. ಬರುಬರುತ್ತ ಬೇಸಿಗೆಯ ಶಿಬಿರಗಳು ಹೆಚ್ಚಾದ ಮೇಲೆ ಮಕ್ಕಳ ನಾಟಕಗಳು ವಿಪುಲವಾಗಿ ಬರಲು ಪ್ರಾರಂಭಿಸಿವೆ. ಅವುಗಳಲ್ಲಿ ಮುತ್ತೂ ಇವೆ, ಜೊಳ್ಳೂ ಇವೆ.

“ಮಕ್ಕಳ ರಂಗಭೂಮಿ ಎಸೆಯುವ ಸವಾಲುಗಳು, ಬೇಡುವ ಸವಲತ್ತುಗಳು ಅನೇಕ. ನಾಟಕರಚನೆಯಿಂದ ಆರಂಭಗೊಂಡು, ಕಲಾವಿದರು, ಪ್ರಯೋಗ, ಪ್ರೇಕ್ಷಕರು, ಪರಿಣಾಮ, ಸಹಜತೆ, ಕಾಲ್ಪನಿಕತೆ, ರಮ್ಯತೆ, ಶೈಲಿ ಕೃತತೆ–ಹೀಗೆ ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ.”

ನಾಟಕ ಸಾಹಿತ್ಯದಲ್ಲಿನ ಹಾಸ್ಯದ ಜೊತೆಗೆ ನಾಟಕಗಳ ಪ್ರಯೋಗಗಳಲ್ಲಿ ನಿರ್ದೇಶಕರೂ ಸಾಕಷ್ಟು ತಂತ್ರಗಳನ್ನು ತಂತ್ರಗಳನ್ನು ಮಾಡಿ ಮಕ್ಕಳಲ್ಲಿ ನಗೆ ಹುಟ್ಟಿಸಲು ಪ್ರಯತ್ನಿಸಿದ್ದಾರೆ. ಜರ್ಮನ್ ದೇಶದ ‘ಗ್ರಿಪ್ಸ್’ ರಂಗಭೂಮಿಯನ್ನು ಕನ್ನಡದಲ್ಲಿ ತರಲಾಗಿದೆ. ಇಲ್ಲಿ ದೊಡ್ಡವರೆ ಮಕ್ಕಳ ಪಾತ್ರ ನಿರ್ವಹಿಸಿ, ಮಕ್ಕಳಾಗಿ ಬಿಡುತ್ತಾರೆ. ಮಕ್ಕಳೂ ಅವರನ್ನು ದೊಡ್ಡವರೆಂದು ಪರಿಗಣಿಸದೆ, ಮಕ್ಕಳಾಗಿಯೇ ಸ್ವೀಕರಿಸುತ್ತಾರೆ. ಈ ತಂತ್ರವೂ ಸಾಕಷ್ಟು ಮಕ್ಕಳನ್ನು ರಂಜಿಸಿವೆ. ಪಂಚತಂತ್ರದ ಕತೆಗಳಾಗಿರಬಹುದು.

ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಪಾಶ್ಚಾತ್ಯ ಸಾಹಿತ್ಯ–ಈ ಎಲ್ಲಾ ವಸ್ತುಗಳನ್ನೊಳಗೊಂಡ ಮಕ್ಕಳ ನಾಟಕಗಳು ಕನ್ನಡದಲ್ಲಿ ರಚಿತವಾಗಿವೆ.ಎಲ್ಲವೂ ಹಾಸ್ಯನಾಟಕಗಳು ಅಂತಲ್ಲ ಆದರೆ ಹಾಸ್ಯವೂ ಅವುಗಳ ಒಂದು ಭಾಗವಾಗಿರುವುದಂತೂ ನಿಜ. 'ಹಾಸ್ಯರಸ' ಹೊಂದಿರುವ ಕೆಲವು ಪ್ರಾತಿನಿಧಿಕ ನಾಟಕಗಳನ್ನು ಈ ಭಾಗದಲ್ಲಿ ವಿವೇಚಿಸಲಾಗಿದೆ.

**ಅಂಧೇರ್ ನಗರಿ ಚೌಪಟ್ ರಾಜ:** ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರಾದ ಎನ್.ಎಸ್. ವೆಂಕಟರಾಂ ಮಕ್ಕಳ ರಂಗಭೂಮಿಯಲ್ಲಿ ಸಾಕಷ್ಟು ಕೆಲಸ ಮಾಡಿರುವವರು. ಬಾಲಭವನದ ಮೂಲಕ, ಮಕ್ಕಳ ನಾಟಕಗಳು ಸಾಗುತ್ತಿದ್ದ ದಿಕ್ಕನ್ನೇ ಬದಲಾಯಿಸಿದವರು. ಇವರು ಅನೇಕ ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಅದರಲ್ಲಿ ಪ್ರಮುಖವಾದುದು 'ಅಂಧೇರ್ ನಗರಿ ಚೌಪಟ್ ರಾಜ'. ಹೆಸರೇ ಹೇಳುವಂತೆ ಕತ್ತಲ ರಾಜ್ಯ, ಮೂರ್ಖ ದೊರೆಯನ್ನು ಕುರಿತು ಮಾತನಾಡುತ್ತದೆ ಈ ನಾಟಕ. ಭರತೇಂದು ಹರಿಶ್ಚಂದ್ರ ಅವರ ಹಿಂದಿ ನಾಟಕದ ಅನುವಾದವಿದು. ರಾಜರ ಆಡಳಿತವನ್ನು ವಿಡಂಬಿಸುವ ಈ ನಾಟಕವು ಬೇಂದ್ರೆಯವರ ಸಾಯೋ ಆಟ, ಜಾತ್ರೆಯ ಮಾದರಿಯಲ್ಲಿದೆ. ಗುರುಶಿಷ್ಯರು ಅಂಧೇರಿನಗರಿಗೆ ಬಂದಾಗ ಆಗುವ ಗೊಂದಲಗಳು ಈ ನಾಟಕದಲ್ಲಿ ನಿರೂಪಿತವಾಗಿದೆ. ಯಾರೋ ಮಾಡಿದ ತಪ್ಪಿಗೆ ಶಿಷ್ಯ ಗೋವರ್ಧನದಾಸನಿಗೆ ನೇಣುಶಿಕ್ಷೆಯಾಗುತ್ತದೆ. ತಪ್ಪು ಯಾರೋ ಮಾಡಿದರೆ ಶಿಕ್ಷೆ ಯಾರಿಗೋ– ಇದು ರಾಜನ ನೀತಿ, ಕಡೆಗೆ ಗುರುವಿನ ಉಪಾಯದಿಂದ ರಾಜನೇ ಗಲ್ಲಿಗೇರುತ್ತಾನೆ. ಮೂರ್ಖತನದಿಂದ ರಾಜನು ಭಸ್ಮಾಸುರನಂತೆ ತನ್ನ ಮೃತ್ಯುವನ್ನು ತಾನೇ ಅಪ್ಪಿಕೊಳ್ಳುವುದರಲ್ಲಿ ನಾಟಕವು ಮುಕ್ತಾಯವಾಗುತ್ತದೆ. ತನ್ನ ಲವಲವಿಕೆಯ ಹಾಸ್ಯದ ಮಾತುಗಳಿಂದ, ಕ್ರಿಯೆಗಳಿಂದ ಮಕ್ಕಳನ್ನು ಆಕರ್ಷಿಸುತ್ತಲೇ ದೇಶದಲ್ಲಿ ಧರ್ಮ, ನೀತಿ, ಬುದ್ಧಿ, ಸೌಜನ್ಯ ಇರಬೇಕೆಂದು ನಾಟಕ ಸಾರುತ್ತದೆ.

**ಅಜ್ಜಿಕಥೆ:** 1990ರಲ್ಲಿ ಎಚ್. ದುಂಡಿರಾಜರಿಂದ ರಚಿತವಾದ ಈ ನಾಟಕ ಮಕ್ಕಳನ್ನು ಮನರಂಜಿಸುವ, ಸುಲಭವಾಗಿ ಆಕರ್ಷಿಸುವ ನಾಟಕ. ರಾಜ, ಮಂತ್ರಿ, ಮೇಳ, ಮಂತ್ರವಾದಿ, ರಾಜಕುಮಾರಿ, ಅಜ್ಜಿ–ಈ ಎಲ್ಲಾ ಪಾತ್ರಗಳೂ ಈ ನಾಟಕದಲ್ಲಿವೆ. ನಾಟಕಕಾರರು ಅಜ್ಜಿ ಕಥೆಯ ಮೂಲಕ ಕೇವಲ ಮನರಂಜನೆ ಮಾತ್ರವಲ್ಲದೆ ಸ್ತ್ರೀಯರಲ್ಲಿ ಪುರುಷರಷ್ಟೇ ಸಬಲರು, ಅವರಿಗೂ ಸ್ವಂತ ಅಸ್ತಿತ್ವವಿದೆ ಎನ್ನುವ ಸಂದೇಶವನ್ನು ಸಾರಿದ್ದಾರೆ. ಆದರೆ ಯಾವುದೇ ರೀತಿಯಲ್ಲಿ ಇದು ನೀತಿ ಹೇಳುವುದನ್ನು ಗುರಿಯಾಗಿಟ್ಟುಕೊಂಡಿಲ್ಲ. ನಾಟಕದ ವಸ್ತುವಿನಲ್ಲಿ ಅದು ಬೆರೆತುಹೋಗಿದೆ. ಹನಿಗವನವನ್ನು ರಚಿಸುವುದರಲ್ಲಿ ಸಿದ್ಧಹಸ್ತರಾಗಿರುವ ದುಂಡಿರಾಜ್ ಅವರು ತಮ್ಮ ಎಂದಿನ ಹಾಸ್ಯ ಪ್ರವೃತ್ತಿಯನ್ನು ಬಳಸಿ ಈ ನಾಟಕ ಬರೆದಿದ್ದಾರೆ.

ಪ್ರತಿನಿತ್ಯ ಅಜ್ಜಿಯನ್ನು ಕಥೆ ಹೇಳಬೇಕೆಂದು ಪ್ರಾಣ ಹಿಂಡುತ್ತಿದ್ದ ಮಕ್ಕಳು ನಾಟಕದ ಕೊನೆಯಲ್ಲಿ 'ಪುಟ್ಟೀ ಎಲ್ಲಾ ದಿನಾ ಅಜ್ಜಿಗೇ ಯಾಕೆ ತೊಂದರೆ ಕೊಡಬೇಕು. ನಾಳೆ ಅಜ್ಜನ ಹತ್ರ ಕಥೆ ಹೇಳಲಿಕ್ಕೆ ಹೇಳೋಣ' ಎನ್ನುವುದರೊಂದಿಗೆ ನಾಟಕ ಸಂದೇಶ ಮಕ್ಕಳನ್ನು ಮುಟ್ಟಿತು ಎನ್ನುವುದನ್ನು ಸೂಚ್ಯವಾಗಿ ಹೇಳುವುದರಲ್ಲಿ ಮುಕ್ತಾಯವಾಗುತ್ತದೆ. ದುಂಡಿರಾಜ್ ಸಹಜ ಹಾಸ್ಯಗಾರರು. ಅವರ ಹನಿಗವನಗಳಲ್ಲಿ ಹಾಸ್ಯದ ಜೊತೆಗೆ ಆಳವಾದ ಚಿಂತನೆಗಳೂ ಮೂಡಿರುತ್ತದೆ. ಅದೇ ರೀತಿ ಈ ನಾಟಕದಲ್ಲಿ ಮಕ್ಕಳಿಗೆ ನಗುವಿನ ಮೂಲಕ ಗಂಡುಹೆಣ್ಣಿನ ಅಸಮಾನತೆಯನ್ನು ಹೊಡೆದೋಡಿಸುವುದಕ್ಕೆ ಪ್ರಯತ್ನಪಟ್ಟಿದ್ದರೆ, ಚುರುಕು ಸಂಭಾಷಣೆಗಳು ನಾಟಕದ ಕಥೆಯ ಓಟಕ್ಕೆ ಸಹಾಯ ಮಾಡಿದೆ. ಪ್ರೇಕ್ಷಕರಲ್ಲಿ ನಗೆ ಹುಟ್ಟಲು ಕಾರಣವಾಗಿದೆ. ಕಥೆ ಹೇಳುವ ಅಜ್ಜಿಯನ್ನು ಕಂಪ್ಯೂಟರ್‌ಗೆ ಹೋಲಿಸಿರುವುದು ಹೊಸ ಆಲೋಚನೆ.

**ಅಲಿಬಾಬ ಮತ್ತು ನಲವತ್ತು ಕಳ್ಳರು:** ಚಂದ್ರಶೇಖರ ಕಂಬಾರರು ಲೋಕಪ್ರಸಿದ್ಧರಾದ ಉತ್ತಮ ನಾಟಕಕಾರರು. ಅವರು ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯ ಕೃಷಿ ಮಾಡಿದ್ದಾರೆ. ಲೇಖಕರು ಹೇಳಿರುವಂತೆ ಇದು ಜನಪದ ಕಥೆಯಾದ್ದರಿಂದ ನಾಟಕೀಯ ಸಂಘರ್ಷಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಬಯಲಾಟದ ರೂಪದಲ್ಲೇ ಬರೆಯಬೇಕಾಯಿತು. ಇದನ್ನರಿತು ನಿರ್ದೇಶಕಿ ಪ್ರೇಮಾಕಾರಂತ್ ಹೇಳಿದಂತೆ ಹಾಡು ನೃತ್ಯಗಳನ್ನು ಸೇರಿಸಿದ್ದಾರೆ.ಆದರೆ, ನಾಟಕೀಯ ಸಂಘರ್ಷ ಇಲ್ಲದಿದ್ದರೂ ಕಥೆಯೇ ಬಹಳ ನಾಟಕೀಯವಾಗಿರುವುದರಿಂದ ಆಸಕ್ತಿಯನ್ನು ಉಳಿಸಿಕೊಂಡು ಬಂದಿದೆ. ಜಾನಪದ ನಾಟಕಗಳಲ್ಲಿ ಇರುವಂತೆ ಮೇಳ, ಸೂತ್ರಧಾರ, ಗಣೇಶನ ಪ್ರಾರ್ಥನೆ ಮೂಲಕ ನಾಟಕದ ಪ್ರಾರಂಭ.

ಗಣೇಶನ ಸೂತ್ರಧಾರಿ ಲಾಡು ಕದ್ದು ಹೊಟ್ಟೆ ದಪ್ಪಗಾಗುವಂತೆ ಮಾಡಿಕೊಂಡಿದ್ದು ಕಳ್ಳ ಬಂದು ಅದನ್ನು ಕಂಡುಹಿಡಿದು ಅವನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡಿದ್ದು ಮಕ್ಕಳಿಗೆ ಮೋಜಿನೆಸುತ್ತದೆ. ಸೂತ್ರಧಾರ ಆರಂಭದಲ್ಲಿ ಆಡುವ ಮಾತುಗಳನ್ನು ಸ್ವಾರಸ್ಯಕರವಾಗಿದೆ. 'ಬಾಲಕ, ಬಾಲಕಿಯರೇ, ಮತ್ತು ಪಾಲಕರೇ, ನಾವು ಒಂದು ಮಕ್ಕಳ ನಾಟಕ ಆಡುತ್ತೇವೆ. ನಾಟಕದ ಹೆಸರು ಅಲಿಬಾಬ ಮತ್ತು ನಲವತ್ತು ಕಳ್ಳರು ಅಂತ. ನಾಟಕದ ಪ್ರಾರಂಭದಲ್ಲಿ ಗಣೇಶನ ಪೂಜೆ ಮಾಡಬೇಕು. ಇದೇನಪ್ಪಾ, ಅಲ್ಲಾನೂರಿನಲ್ಲಿ ಕಲ್ಲಯ್ಯಂದೇನು ಅಂದಂತೆ ಮುಸ್ಲಿಮರ ಕಥೇಲಿ ಗಣೇಶನ ಪೂಜೆ ಯಾಕೆ ಅಂತ ಗಲಾಟೆ ಮಾಡಬೇಡಿ. ನಿಮ್ಮ ಗಲಾಟೆ ಎಂಬ ವಿಘ್ನ ದೂರಮಾಡೋದಿಕ್ಕೇ ನಾವು ಗಣೇಶನ ಪೂಜೆ ಮಾಡ್ತಾ ಇರೋದು. ಇದು ಹೇಳಿಕೇಳಿ ಕಳ್ಳರ ಕಥೆ, ನಮ್ಮ ಗಣೇಶ ಶಿಷ್ಟಪಾಲಕ, ದುಷ್ಟ ಶಿಕ್ಷಕ. ಅದಕ್ಕೆ ಪ್ರಾರಂಭದಲ್ಲಿ ಅವನ ಪೂಜೆ ಮಾಡಿ ನಾಟಕ ಶುರು ಮಾಡ್ತೀವಿ.'

ಕಳ್ಳನ ಪ್ರವೇಶವಾದ ನಂತರ ಬಯಲಾಟದ ಶೈಲಿಯಲ್ಲಿ ಸೂತ್ರಧಾರ ಅವನನ್ನು ಪರಿಚಯಿಸುತ್ತಾನೆ. ಅವನು ತನ್ನ ಹತ್ತಿರ ಮುವ್ವತ್ತೊಂಬತ್ತು ಕಳ್ಳರು ಮಾತ್ರ ಇರುವುದೆಂದು ಗಣೇಶನು ದೊಡ್ಡ ಹೊಟ್ಟೆ ಇರಬೇಕೆಂದು ಲಾಡು ಹೊಟ್ಟೆಯಮೇಲೆ ಇಟ್ಟುಕೊಂಡಿದ್ದೆ ಎಂದು ಹೇಳುವುದನ್ನು ಕೇಳಿ ಅವನು ಕಳ್ಳನೂ ಹೌದು, ಸುಳ್ಳನೂ ಹೌದೆಂದು ಅವನನ್ನು ಕರೆದುಕೊಂಡು ತಾನಾಗ ಚಾಲೀಸ್ ಚೋರೋಂಕಿ ರಾಜಾ ಆದೆ ಎಂದು ಹೋಗುತ್ತಾನೆ. ಏನೂ ಮಾಡಬೇಕೆಂದು ತಿಳಿಯದೆ ಸೂತ್ರಧಾರ 'ಅಯ್ಯೋಯ್ಯೋ' ಎಂದು ಅಳುತ್ತಾ ಒದ್ದಾಡುತ್ತಿದ್ದ ಗಣೇಶನಿಗೆ ಕೈಮುಗಿಯುತ್ತಾನೆ. ಇಲ್ಲಿ ಪೂರ್ವರಂಗ ಮತ್ತು ನಾಟಕವನ್ನು ಸೇರಿಸಿರುವುದು ಬಹಳ ಸ್ವಾರಸ್ಯಕರವಾಗಿದೆ.

ಅಲಿಬಾಬನ ಕತ್ತೆಗಳು ಭೈರವಿ ರಾಗ ಹಾಡುವುದು, ರಾಕ್–ಎನ್–ರೋಲ್ ಮಾಡುವುದು, ಮರಿಕತ್ತೆಗಳು ಅವುಗಳ ಹೆಸರಿಗೆ ತಕ್ಕಂತೆ ಸಂಗೀತ ಹಾಡುವುದು ಹಾಸ್ಯಮಯವಾಗಿದೆ.

ಕಳ್ಳನ ಪಾತ್ರಧಾರ ಹಸನ್, ಅಲಿಬಾಬನ ಮನೆಗೆ ಆದಿಲ್ ಷಾ ಹೆಸರಿನಲ್ಲಿ ಬಂದಾಗ ಅವನ ಉರ್ದು ಮತ್ತು ಕನ್ನಡ ಮಿಶ್ರಿತ ಭಾಷೆ ನಗೆ ತರಿಸುತ್ತದೆ. ಹಿಂದೆ ಕಂಪನಿ ನಾಟಕಗಳಲ್ಲಿ ಬಹಳ ಕಡೆ ಮುಸ್ಲಿಮರ ಮತ್ತು ಮಾರ್ವಾಡಿಗಳ ಭಾಷೆಯನ್ನು ಇದೇ ರೀತಿ ಉಪಯೋಗಿಸುತ್ತಿದ್ದುದ್ದನ್ನು ಇಲ್ಲಿ ಸ್ಮರಿಸಬಹುದು.

**ಸಲೀಂ:** ಈ ಎಣ್ಣೆ ವ್ಯಾಪಾರದಿಂದ ನಿಮಗೆ ತಿಂಗಳಿಗೆ ಎಷ್ಟು ಲಾಭ ಸಿಗುತ್ತೆ ಆಯಿಲ್‌ಷಾ, ಹಜಾರ್ ದೋ ಹಜಾರ್.

**ಹಸನ್:** ಹಜಾರ್ ದೋ ಹಜಾರ್!!! ಹಹ್ಹಹ್ಹ... ... ಆಪ್‌ಲೋಗ್ ಲಾಭಾನಾಗಿನ್‌ತಾ ಹೈ? ಮಗರ್ ಹಂ ನಹೀ. ಪಿಕಾಸಿ ಜೋ ಹೋತಾ ಹೈನಾ? ಪಿಕಾಸಿಸೇಎಳೀತಾ ಹೈ!! ಗಿನ್ನೇಕಾ ವಖ್ತ್ ಕಹಾ ಹೈ? ಲಾಖ್ ದೋ ಲಾಖ್ ಹೋತಾತೋಗಿನ್‌ಸಕ್ತಾತಾ, ದೋ ಚಾರ್ ಕರೋಡ್ ಹೋತಾತೋ??

ಮುಸಲ್ಮಾನರ ಕಥೆಯಾದರೂ ಎಲ್ಲೂ ಉರ್ದು ಮಿಶ್ರಿತ ಭಾಷೆಯನ್ನು ಉಪಯೋಗಿಸದೇ ಆಯಿಲ್ ಷಾ ಎಂದಾಗ ಮಾತ್ರ ಈ ರೀತಿಯ ಭಾಷೆಯ ಪ್ರಯೋಗ ಆಗಿದೆ. ಇದು ಅಭಾಸ ಎನಿಸುವುದಿಲ್ಲ. 'ಅಲ್ಲಾನ ದಯೆ ದೊಡ್ಡದು ಗಣೇಶನ ರೂಪದಿಂದ ಬಂದು ಕಾಪಾಡಿದ' ಎಂದು ಮರ್ಜಿನಾಳ ಮಾತುಗಳಲ್ಲಿ ಅಲ್ಲಾ, ಗಣೇಶ ಒಂದೇ ಎಂಬ ಸಂದೇಶವೂ ಸೂಚ್ಯವಾಗಿ ಬಿತ್ತರವಾಗುತ್ತದೆ. ಕೊನೆಯಲ್ಲಿ ಸೂತ್ರಧಾರ ಗಣೇಶನ ಮಾತುಗಳೂ ನಗೆಯನ್ನು ಹುಟ್ಟಿಸುತ್ತದೆ. 'ಈ ತನಕ ನಮ್ಮ ನಾಟಕ ನೋಡಿದ ಪ್ರೇಕ್ಷಕರಿಗೆ ಸಂದೇಶವೇನಾದರೂ ಇದ್ದರೆ ತಿಳಿಸುವಂತಹವನಾಗಬೇಕು.' ಎಂದು ಸೂತ್ರಧಾರ

ಕೇಳಿದಾಗ ಗಣೇಶ 'ಸೂತ್ರಧಾರ, ಕಳ್ಳರಿಗೆ ಶಿಕ್ಷೆ ಉಂಟೇ ಉಂಟು. ಆದರೆ ಲಾಡು ಜೋರಿಗೆ ವಿನಾಯಿತಿ ಉಂಟೆಂದು ಸಾರುವಂಥವನಾಗ್ಯೆ ಸೂತ್ರಧಾರ' ಎಂದು ಹೇಳುತ್ತಾ ನಾಟಕದ ಪ್ರಾರಂಭದಲ್ಲಿ ಪೂಜೆ ಸ್ವೀಕರಿಸದಿದ್ದವನು ಕೊನೆಯಲ್ಲಿ ಸ್ವೀಕರಿಸುತ್ತಾನೆ.

ಗಣೇಶ: ಲಾಡು ಉಂಟೋ?

ಸೂತ್ರಧಾರ: ಉಂಟು ಸ್ವಾಮೀ. ತಮ್ಮ ಉದರದಿಂದ ಉದುರಿದ್ದೇ ಇದೆ.ಎನ್ನುವುದರ ಮೂಲಕ ನಾಟಕ ಮುಕ್ತಾಯವಾಗುತ್ತದೆ.

**ಹೆಡ್ಡಾಯಣ:** ಪ್ರಸಿದ್ಧ ರಂಗನಿರ್ದೇಶಕ ಬಿ.ವಿ. ಕಾರಂತ ಅವರು ರಚಿಸಿರುವ ನಾಟಕವಿದು. ಹೆಸರೇ ಹೇಳುವಂತೆ ಹೆಡ್ಡನ ಕಥೆ ಉಳ್ಳದ್ದು ಹೆಡ್ಡಾಯಣ. ವಿಪರೀತ ಪಾತ್ರಗಳು ಸೂತ್ರಧಾರನು ನಾಟಕ ಪರಿಚಯಿಸುವುದು. ಇದು ಒಂದು ಮಕ್ಕಳ ಕಥೆ, ಹೆಡ್ಡ ಧೂಮನ ಕಥೆ, ಅಜ್ಜಿ ಸಾಕಿದ ಮಗುವಿನ ಕಥೆ. ಈ ನಾಟಕ ನೋಡಿ ಖಂಡಿತವಾಗಿ ನಗಬೇಕು. ದೊಡ್ಡವರು ಸರಿಯಾಗಿ ನಗೋದಿಲ್ಲ. ಯಾಕೆಂದ್ರೆ ಅವಿಗೆ ನಗೋಕೆ ಬರೋದೇ ಇಲ್ಲ. ಅವಿಗೆ ಅವದ್ದೇ ತಾಪತ್ರಯಗಳಿರುತ್ತವೆ. ಆದರೆ ನೀವು ಮಾತ್ರ ಬಿದ್ದು ಬಿದ್ದು ನಗಬೇಕು. ಇರುವ ಪರಿಕರಗಳನ್ನೆಲ್ಲ ಉಪಯೋಗಿಸಿ ನದಿ, ಬೆಟ್ಟ, ಕುದುರೆ ಮಾಡಬಹುದು. ರಂಗ ತಂತ್ರಗಳು ನವೀನವಾಗಿವೆ. ಸ್ವಾರಸ್ಯಕರವಾಗಿವೆ. ಆದರೆ ಕಥೆ ಸುಮಾರು, ಯಾವುದೇ ರೀತಿಯ ಸಂಘರ್ಷವಿಲ್ಲ. ಸೋಂಭೇರಿ, ದಡ್ಡ ಹೆಡ್ಡರಾಯ ಕುಂಬಳಕಾಯಿ ಧೂಮನಾಗುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ. ಅವನು ಕೆಲಸ ಹುಡುಕಿಕೊಂಡು ಹೋಗುವುದು, ವಿವಿಧ ಜನರ ಹತ್ತಿರ ಕೆಲಸ ಮಾಡುವುದು, ಮುಗ್ಧತನ, ಪೆದ್ದುತನದಿಂದ ಕೂಡಿರುವ ನಾಟಕದ ವಸ್ತು ತೀರಾ ಸಾಧಾರಣ. ಪ್ರಯೋಗ ಚೆನ್ನಾಗಿದ್ದರೆ ಮಕ್ಕಳನ್ನು ಮನರಂಜಿಸುವುದು.

**ಧಾಂಧೂಂ ಸುಂಟರಗಾಳಿ:**ಸ್ತ್ರೀಯರು ನಾಟಕ ರಚಿಸುವುದು ಅಪರೂಪ ಎಂಬುದಕ್ಕೆ ಅಪವಾದವಾಗಿ ವೈದೇಹಿಯವರು ಈ ಮಕ್ಕಳ ನಾಟಕವನ್ನು ರಚಿಸಿದ್ದು ನೀನಾಸಂ ತಿರುಗಾಟದವರು ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ. ಇದು ನವೀನ ರೀತಿಯ ಪ್ರಯೋಗ, ಆ ನಾಟಕವನ್ನು ಮಕ್ಕಳ ನಾಟಕವನ್ನಾಗಿ ಪರಿವರ್ತಿಸುವ ರೀತಿಯೇ ಹೊಸತಾದುದು. ಇದು ವೈದೇಹಿಯವರ ಪ್ರಥಮ ಮಕ್ಕಳ ನಾಟಕ ಸ್ತ್ರೀಯರು ನಾಟಕಗಳನ್ನೇ ಬರೆಯುವುದು ವಿರಳವಾಗಿರುವಾಗ, ವೈದೇಹಿಯವರ ಪ್ರಯತ್ನ

ಶ್ಲಾಘನೀಯ. ಶೇಕ್ಸ್‌ಪಿಯರ್‌ನ 'ದಿ ಟೆಂಪೆಸ್ಟ್' ನಾಟಕವನ್ನು ಮಕ್ಕಳ ನಾಟಕವನ್ನಾಗಿ ಪರಿವರ್ತಿಸಿರುವುದು ಸಾಹಸವೇ ಸರಿ.

ಎಚ್.ಎಸ್. ವೆಂಕಟೇಶಮೂರ್ತಿ ರಚಿಸಿದ **'ಮುದಿ ದೊರೆ ಮೂರು ಮಕ್ಕಳು'** ಕಿಂಗ್‌ಯರ್ ನಾಟಕದ ರೂಪಾಂತರ) ಇಕ್ಬಾಲ್ ಅಹ್ಮದ್ ಅವರು ಪ್ರೇಮಾ ಕಾರಂತ ಅವರ ಬೆನಕ ಮಕ್ಕಳ ಶಿಬಿರಕ್ಕೆ ನಿರ್ದೇಶಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮಂತ್ರವಾದಿ, ಕಿರಾತ, ಕಿನ್ನರ, ಜಲದೇವತೆ, ರಾಜಕುಮಾರ, ರಾಜಕುಮಾರಿ ಎಲ್ಲಾ ರೀತಿಯ ಪಾತ್ರಗಳು ಮಕ್ಕಳ ಮನರಂಜಿಸುತ್ತವೆ. ಗುಂಡಾಡಿ, ಕುಡುಕ ವಿದೂಷಕ ಮತ್ತು ಉಂಡಾಡಿ, ಕುಡುಕು ಆಡುಗೆಭಟ್ಟ ಇವರ ಸಂಭಾಷಣೆಗಳು ಹಾಸ್ಯಮಯವಾಗಿವೆ. ದುಷ್ಟಶಿಕ್ತಿಯ ಸಂಹಾರ, ಶಿಷ್ಟಶಕ್ತಿಯ ವಿಜಯ–ಎಲ್ಲಾ ಮಕ್ಕಳ ನಾಟಕಗಳಲ್ಲಿರುವಂತೆ ಇಲ್ಲಿ ಮೂಡಿಬಂದಿದೆ ಉತ್ತಮ ಮನರಂಜನೆಯುಳ್ಳ ನಾಟಕ.

ಇದು ಓದು ನಾಟಕಕ್ಕಿಂತ ನೋಡು ನಾಟಕ. ಶೀರ್ಷಿಕೆಯೂ ಆಕರ್ಷಕವಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರಯೋಗಗೊಂಡಾಗ ಪ್ರೇಕ್ಷಕರು ನಗುವಿನಲ್ಲಿ ಮುಳುಗೆದ್ದರು.

**ಅಂಚೆಮನೆ:** ರವೀಂದ್ರನಾಥ ಠಾಕೂರರ ಕೃತಿಯನಾಧರಿಸಿದ ಈ ಮಕ್ಕಳ ನಾಟಕವನ್ನು ಕನ್ನಡಕ್ಕೆ ಅಳವಡಿಸಿದವರು ಕೆ.ವಿ. ಸುಬ್ಬಣ್ಣ, ನಾಟಕಕಾರರೇ ಹೇಳುವಂತೆ 'ಇದು ಮೂಲ ಅನುವಾದವಲ್ಲ. ಅದರ ಆಧಾರದ ಮೇಲೆ ಮಾಡಿಕೊಂಡ ಪ್ರಯೋಗ ಮಾತ್ರ. ಮೂಲಕ್ಕೂ ಇದಕ್ಕೂ ತುಂಬಾ ವ್ಯತ್ಯಾಸಗಳಿವೆ. ಈ ರಂಗ ಪಾಠವನ್ನು ಬೇರೆಬೇರೆ ನಿರ್ದೇಶಕರು ವಿವಿಧ ರೀತಿಯಲ್ಲಿ ಪ್ರಯೋಗಿಸಬಹುದು.' ಆದರೆ ಮಕ್ಕಳಿಗೆ ಎಟುಕದೇ ಹೋಗುವುದಾದ 'ಸಾಂಕೇತಿಕತೆ' ಇದರಲ್ಲಿದೆ. ಓದುವುದಕ್ಕೆ ಅಷ್ಟೇನೂ ರಂಜಕವಾಗಿಲ್ಲ. ಪ್ರಯೋಗದಿಂದ ಮಕ್ಕಳಲ್ಲಿ ಆಸಕ್ತಿ ಹುಟ್ಟುವಂತೆ ಮಾಡಬಹುದು.

**ಮಂತ್ರದ ಅವರೆಕಾಳು:** ಹೆಸರಾಂತ ನಟರಾಗಿದ್ದ ಜಿ.ವಿ. ಶಿವಾನಂದ ಅವರು ರಚಿಸಿರುವ ನಾಟಕವಿದು. ಇದೊಂದು ಆಸಕ್ತಿಯುತವಾದ ಮಕ್ಕಳನಾಟಕ. ಮಕ್ಕಳನ್ನು ರಂಜಿಸಲು ಎಲ್ಲಾ ರೀತಿಯ ಅಂಶಗಳನ್ನು ನಾಟಕಕಾರರು ಬಳಸಿಕೊಂಡಿದ್ದಾರೆ. ಸಾಮಾನ್ಯವಾಗಿ ಮಕ್ಕಳ ನಾಟಕಗಳ ವಸ್ತುವಾಗಿರುವ ರಾಜಕುಮಾರಿಯ ಕಥೆ, ಇದರ ವಸ್ತು ರಾಜಕುಮಾರಿಯನ್ನು ರಾಕ್ಷಸನಾದ ವಕ್ರಾಕ್ಷ ಅಪಹರಿಸುತ್ತಾನೆ. ಆ ಊರಿನ ಸಾಮಾನ್ಯ ಯುವಕನಾದ ರಾಮು ಅವಳನ್ನು ರಕ್ಷಿಸುತ್ತಾನೆ. ಕಥೆ ಯಥಾ ಪ್ರಕಾರ ಎಲ್ಲಾ ಮಕ್ಕಳ ಕಥೆಯಂತೆಯೇ ಇದೆ. ಆದರೆ ಬೆಳೆಸಿಕೊಂಡು ಹೋಗಿರುವ ರೀತಿ ಕುತೂಹಲಭರಿತವಾಗಿದೆ.

ರಾಜಕುಮಾರಿಯನ್ನು ಉಳಿಸಲು ಪ್ರಯತ್ನಪಡುವ ವಿಚಿತ್ರವೀರ್ಯ, ವಿಜಯವರ್ಮರ ನಡುವೆ ಉಂಟಾಗುವ ಗೊಂದಲ ವಿನೋದಕರವಾಗಿದೆ. 'ಮಂತ್ರದ ಅವರೆಕಾಳಿ'ನಿಂದ ರಾಮು ವಿಜಯ ಸಾಧಿಸುವುದರಿಂದ ನಾಟಕಕ್ಕೆ ಅದೇ ಶೀರ್ಷಿಕೆಯನ್ನು ಕೊಡಲಾಗಿದೆ. ಮಕ್ಕಳ ನಾಟಕಗಳಲ್ಲಿ ಸಾಮಾನ್ಯವಾಗಿ ಬರುವ 'ಸೂತ್ರಧಾರ' ಪಾತ್ರವನ್ನು ಇಲ್ಲೂ ತರಲಾಗಿದೆ. ನಿಸ್ವಾರ್ಥ, ನಿಷ್ಕಳಂಕ ರಾಮು, ರಾಜಕುಮಾರಿಯನ್ನು ಪಡೆಯುವುದರಿಂದ ಒಳ್ಳೆಯತನಕ್ಕೆ ಜಯ ಎಂಬ ನೀತಿಯೂ ಇದೆ. ನಗೆಯ ಬುಗ್ಗೆಯನ್ನು ಹರಿಸದಿದ್ದರೂ ಮಕ್ಕಳಿಗಾಗಿ ಒಳ್ಳೆಯ ಮನರಂಜನೆಯನ್ನು ಕೊಡುವ ನಾಟಕ

**ಇಸ್ಪೀಟ್ ರಾಜ್ಯ:** ಬಿ.ವಿ. ಕಾರಂತರ ನಿರ್ದೇಶನದಲ್ಲಿ ಹೆಚ್ಚು ಪ್ರಯೋಗಗಳನ್ನು ಕಂಡು ಜನಪ್ರಿಯವಾಗಿರುವ ಈ ನಾಟಕವನ್ನು ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ರೂಪಾಂತರಿಸಿದ್ದಾರೆ. (ಮೂಲ: ರವೀಂದ್ರನಾಥ ಟಾಗೂರ್), ಕಾರಂತರು ಹೇಳಿರುವಂತೆ ನಮ್ಮ ಜನರ ಅರ್ಥಹೀನ ನಡುವಳಿಕೆಗಳನ್ನು, ಕಂದಾಚಾರಗಳನ್ನು ಇದು ವಿಡಂಬಿಸುವ ರೀತಿ ಮನೋಹರವಾಗಿರುವುದಷ್ಟೇ ವಿಚಾರಪೂರ್ಣವೂಆಗಿದೆ. ಇದು ಸಂಪೂರ್ಣ ಹಾಸ್ಯ ನಾಟಕದ ಗುಂಪಿಗೆ ಸೇರುತ್ತದೆ.

'ಇಸ್ಪೀಟ್ ರಾಜ್ಯ'ದಲ್ಲಿ ನಡೆಯುವ ಘಟನೆಗಳು ಮಕ್ಕಳನ್ನು ರಂಜಿಸುವುದರಲ್ಲಿ ಸಂಶಯವಿಲ್ಲ. ಸಂಭಾಷಣೆಗಳೂ ನಗೆಯುಕ್ಕಿಸುತ್ತವೆ. ಅರ್ಥವಿಲ್ಲದ ನಾಜೂಕುತನ ಪಾಲಿಸುತ್ತಿದ್ದ ರಾಜಕುಮಾರ ವಿಶ್ವಪ್ರಿಯನಿಗೆ ಜೀವನೇ ಬೇಸರವಾಗಿರುತ್ತದೆ. ಅವನು ಸ್ನೇಹಿತ ವಸುಮಿತ್ರನ ಜೊತೆ ಸೇರಿ ರಾಜ್ಯ ಬಿಟ್ಟು ಹೋಗಬೇಕೆಂದು ನಿರ್ಧರಿಸುತ್ತಾನೆ. ಆಗ ಅವನಿಗೆ ಇಸ್ಪೀಟ್ ರಾಜ್ಯದ ಕನಸು ಬೀಳುತ್ತದೆ. ಇಸ್ಪೀಟನ್ನು ಸಾಂಕೇತಿಕವಾಗಿ ಬಳಸಲಾಗಿದೆ. ಮನುಷ್ಯರಂತೆ ಜೀವಿಸದೇ ಎಲ್ಲರೂ ಗೊಂಬೆಗಳಂತೆ ಅರ್ಥವಿಲ್ಲದ ಕಂದಾಚಾರಗಳನ್ನೆಲ್ಲ ಬಿಡದೇ ಪಾಲಿಸುವುದು, ಇವುಗಳನ್ನೆಲ್ಲ ವಿರೋಧಿಸಿ ಹೊಸ ರೀತಿಯ ಬದುಕನ್ನು ರೂಢಿಸಿಕೊಳ್ಳಬೇಕು ಎನ್ನುವುದರೊಂದಿಗೆ ನಾಟಕ ಮುಕ್ತಾವಾಗುತ್ತದೆ. ಸಂಭಾಷಣೆ ಚುಟುಕಾಗಿ, ಚುರುಕಾಗಿ ವಿನೋದಕರವಾಗಿದೆ.

**ಪಂಜರ ಶಾಲೆ:** ಬಿ.ವಿ. ಕಾರಂತರು ಅನುವಾದಿಸಿರುವ ರವೀಂದ್ರನಾಥ ಟಾಗೋರ್ ಅವರ ಪಂಜರ ಶಾಲೆಯೂ ಸ್ವಲ್ಪಮಟ್ಟಿಗೆ ಇಸ್ಪೀಟ್ ರಾಜ್ಯದಂತೆ ಇದೆ. ವಿಡಂಬನೆಯ ರೀತಿಯಲ್ಲೇ ಇಡೀ ನಾಟಕ ಸಾಗುತ್ತದೆ. ಅಲ್ಲಿ ಸಂಪ್ರದಾಯಕ್ಕೆ, ಕಂದಾಚಾರಕ್ಕೆ ಅಂಟಿಕೊಂಡ ಜನರನ್ನು ಕಂಡರೆ ಇಲ್ಲಿ ಒಂದು ಗಿಳಿಯನ್ನು ಪಂಜರದಲ್ಲಿಟ್ಟು ಬಲವಂತವಾಗಿ ವಿದ್ಯೆ ಕಲಿಸುವ ವಸ್ತುವಿದೆ. ಗಿಳಿಯನ್ನು ನಾಗರಿಕನನ್ನು

ಮಾಡುವುದಕ್ಕೆ 'ಶುಕ ಅಧ್ಯಯನ ಸಂಸ್ಥೆ' ಮಾಡಿ, ಅದಕ್ಕೆ ಮಹಾರಾಜನ ಅಳಿಯನನ್ನು ಶಿಕ್ಷಣದ ಮಂತ್ರಿಯನ್ನಾಗಿ ನೇಮಿಸುವುದು, ಇಂದಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯನ್ನು ವ್ಯಂಗ್ಯವಾಗಿ ನೋಡುತ್ತದೆ. ಇಲ್ಲಿ ಬರುವ ಪ್ರಶಂಸಿಸುವವರ, ನಿಂದಕರ ಪಾತ್ರಗಳು ಪ್ರೇಕ್ಷಕರನ್ನು ನಗೆಯಲ್ಲಿ ಮುಳುಗಿಸುವುದರ ಜೊತೆಗೆ ಸಮಕಾಲೀನ ಪರಿಸ್ಥಿತಿಯ ಬಗ್ಗೆ ಚಿಂತನೆಗೆ ಹಚ್ಚುವಂತೆ ಮಾಡುತ್ತದೆ. ಅಸಹಜ ಪರಿಸರ ದುಷ್ಪರಿಣಾಮಗಳನ್ನು, ಒತ್ತಾಯದ ದುರಂತವನ್ನು ಎತ್ತಿ ತೋರಿಸುವ 'ಪಂಜರಶಾಲೆ' ಕಡೆಗೆ ಪ್ರಕೃತಿಸಹಜವಾದದ್ದೇ ಗೆಲ್ಲುತ್ತದೆ ಎನ್ನುವ ಸಂದೇಶದಲ್ಲಿ ಮುಕ್ತಾಯವಾಗುತ್ತದೆ. ವ್ಯಂಗ್ಯ, ವಿಡಂಬನೆ, ಹಾಸ್ಯದ ಮೂಲಕ ಮಕ್ಕಳಿಗೆ ಉತ್ತಮ ನೀತಿ ಸಂದೇಶ ಸಾರುವ ವಿಚಾರ ಪ್ರಚೋದಕ ನಾಟಕವಿದು.

**ಜಯಂಟ್ ಮಾಮ:** ಕೆ.ವಿ. ಸುಬ್ಬಣ್ಣ ರಚಿಸಿರುವ 'ಜಯಂಟ್ ಮಾಮ' ಮಕ್ಕಳನ್ನು ರಂಜಿಸುವ ಎಲ್ಲಾ ಅಂಶಗಳನ್ನು ಹೊಂದಿರುವ ಉತ್ತಮ ನಾಟಕ ಯಕ್ಷಗಾನದ ಹಾಸ್ಯಪಾತ್ರವಾದ ಹನುಮನಾಯಕನ ಜೊತೆಗೆ ಮಕ್ಕಳು, ಮೇಷ್ಟ್ರು ಯಕ್ಷಗಾನದ ಹಾಸ್ಯಪಾತ್ರವಾದ ಹನುಮನಾಯಕನನ್ನು, ರಾಕ್ಷಸ ಹೀಗೆ ನಾಟಕಕಾರರು ಬಳಸಿರುವುದು ಮಕ್ಕಳಿಗೆ ನಮ್ಮ ಜಾನಪದ ಪ್ರಕಾರಗಳನ್ನು ಪರಿಚಯಿಸಿದಂತೆಯೂ ಆಗುತ್ತದೆ. ಪೌರಾಣಿಕ, ಜಾನಪದ, ಸಾಮಾಜಿಕ ಪಾತ್ರಗಳ ಮಕ್ಕಳನ್ನು ರಂಜಿಸಲು ರಂಗದ ಮೇಲೆ ಮೈದಾಳುತ್ತವೆ. ಕ್ರೂರವಾಗಿದ್ದ ರಾಕ್ಷಸ ಒಂದು ಹುಡುಗಿಯ ಪ್ರಾಣರಕ್ಷಿಸಲು ತನ್ನ ಜೀವವನ್ನು ಬಲಿಕೊಟ್ಟ ಅಂತಃಕರಣಛಾಯೆಯೂ ಈ ನಾಟಕದಲ್ಲಿ ಕಾಣುತ್ತದೆ. ಮನುಷ್ಯರ ಸಹವಾಸವಿಲ್ಲದೆ ದೊಡ್ಡ ಕೋಟೆಯೊಳಗೆ ಬಂದಿಯಾಗಿದ್ದ ರಾಕ್ಷಸ, ಹನುಮ ನಾಯಕನ ದೆಸೆಯಿಂದ ಮಕ್ಕಳ ಸಹವಾಸ ಮಾಡಿ ಪರಿವರ್ತನೆಯಾದ ವಸ್ತುವಿನ ಜೊತೆಗೆ, ಆಧುನಿಕ ಕಾಲದಲ್ಲಿ ಮಕ್ಕಳಿಗೆ ಆಟ ಆಡಲು ಬಯಲಿಲ್ಲದ ಸಮಸ್ಯೆಯನ್ನು ಈ ನಾಟಕ ಚರ್ಚಿಸುತ್ತದೆ. ಹನುಮನ ಮತ್ತು ಮಕ್ಕಳ ಸಂಭಾಷಣೆ, ರಾಕ್ಷಸನು ಮಾತುಗಳನ್ನು ಕಲಿಯಲು ಪ್ರಯತ್ನಿಸುವುದು ಹಾಸ್ಯಕ್ಕೆ ಎಡೆಮಾಡಿಕೊಡುತ್ತದೆ.

ಪ್ರೇಮಾ ಕಾರಂತರು ಬೆನಕ ಮಕ್ಕಳ ಶಿಬಿರದ ಮೂಲಕ ಹಲವಾರು ಮಕ್ಕಳ ನಾಟಕಗಳನ್ನು ಪ್ರಯೋಗಿಸಿ ಸಫಲಗೊಳಿಸಿದ್ದರು. ಅವುಗಳಲ್ಲಿ ಆಲೀಬಾಬ ಮತ್ತು ನಲವತ್ತು ಮಂದಿ ಕಳ್ಳರು, ಜಯಂಟ್ ಮಾಮಾ, ನಕ್ಕಳಾ ರಾಜಕುಮಾರಿ ಇತ್ಯಾದಿ ನಾಟಕಗಳು ಇದ್ದವು.

ಹೀಗೆ ಚರ್ಚಿಸುತ್ತಾ ಹೋದರೆ ನೂರಾರು ಮಕ್ಕಳ ನಾಟಕಗಳಲ್ಲಿ ಸಂದೇಶ ಪ್ರಸಾರಕ್ಕೆ ಅನುಷಂಗಿಕವಾಗಿ ಹಾಸ್ಯವು ಬಂದಿರುವುದನ್ನು ನೋಡಬಹುದು. ಹಾಸ್ಯವೇ ಮುಖ್ಯ ರಸವನ್ನಾಗಿ ಪರಿಗಣಿಸಿರುವುದು ತೀರ ಅಪರೂಪ. ಆದರೆ ಮಕ್ಕಳ ನಾಟಕಗಳಲ್ಲಿ ಹಾಸ್ಯರಸವೇ ಪ್ರಧಾನವಾಗಿದ್ದರೆ

ಒಳ್ಳೆಯದು. ಅದೇ ಅವರ ಮೇಲೆ ಹೆಚ್ಚು ಪ್ರಭಾವ ಬೀರುವುದು. 'ನಗು'ವುದರಿಂದ ಮಾನಸಿಕ, ಬೌದ್ಧಿಕ ವಿಕಾಸ ಆಗುತ್ತದೆ ಎನ್ನುವ ಇತ್ತೀಚಿನ ವೈಜ್ಞಾನಿಕ ಅನ್ವೇಷಣೆಯಿಂದಲಾದರೂ ಉತ್ತಮ ಹಾಸ್ಯವು ಮಕ್ಕಳ ನಾಟಕಗಳಲ್ಲಿ ಹೆಚ್ಚಾಗಿ ಬರಬೇಕಾಗಿದೆ. ಇತ್ತೀಚೆಗೆ ಶಾಲೆಗಾಗಿ ಮಕ್ಕಳ ನಾಟಕಗಳು ಎನ್ನುವ ಮಾಲಿಕೆಯನ್ನು ಹೊರತಂದಿರುವುದು ಸಂತಸದ ವಿಚಾರ. ಇದರ ಪ್ರಕಟಣೆಯಿಂದ ಇನ್ನೂ ಹೆಚ್ಚಿನ ಮಕ್ಕಳ ನಾಟಕಗಳು ರಂಗದ ಮೇಲೆ ಬರಬಹುದು. ಹಾಸ್ಯರಸವೂ ಪ್ರಧಾನ ಪಾತ್ರ ವಹಿಸಬಹುದು. ಮಕ್ಕಳ ನಾಟಕಗಳನ್ನು ಓದುವುದಕ್ಕಿಂತ ಪ್ರಯೋಗಗಳಲ್ಲಿ ಅನೇಕ ರೀತಿಯ ತಂತ್ರಗಳನ್ನು ಹೂಡಿ ಮಾತುಗಳೇ ಅಲ್ಲದೇ ಕ್ರಿಯೆಗಳ ಮೂಲಕವೂ ಹಾಸ್ಯರಸವನ್ನು ಉಂಟುಮಾಡಬಹುದು. ಮಕ್ಕಳ ನಾಟಕಕ್ಕೆ ಯಾವುದು ಬೇಕಾದರೂ ವಸ್ತುವಾಗಬಹುದು. ಗಂಭೀರವಾದ ವಸ್ತುವನ್ನು ಅವರಿಗೆ ತಲುಪುವಂತೆ ಹೇಳುವ ಉತ್ತಮ ನಾಟಕಕಾರರ ಅಗತ್ಯವಿದೆ.

ನಕ್ಕಳಾ ರಾಜಕುಮಾರಿ, ಬೆಟ್ಟಕ್ಕೆ ಚಳಿಯಾದರೆ, ಅಸಹಾಯಕ ಕತ್ತೆ, ನಾಯಿಮರಿ, ಒಗಟಿನ ರಾಗ, ನಾಯಿತಪ್ಪ, ನೀಲಿಕುದುರೆ ಹೀಗೆ ಮಕ್ಕಳ ನಾಟಕಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ ಎಲ್ಲದರಲ್ಲೂ ಹಾಸ್ಯಕ್ಕೆ ಸ್ಥಾನವಿಲ್ಲ. ಹಾಸ್ಯಕ್ಕೆ ಉತ್ತಮ ಸ್ಥಾನ ಕೊಟ್ಟಿರುವ ಕೆಲವು ನಾಟಕಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ಮತ್ತೊಂದು ಅಪರೂಪದ ಮಕ್ಕಳ ನಾಟಕ ಪ್ರಯೋಗ ಜರ್ಮನಿಯ 'ಗ್ರಿಪ್ಸ್ ಮಕ್ಕಳ ರಂಗಭೂಮಿ'ಯನ್ನು ಕನ್ನಡಕ್ಕೆ ತಂದಿರುವುದು. ಇಲ್ಲಿ ದೊಡ್ಡವರೇಮಕ್ಕಳಾಗಿ ನಟಿಸುವುದು ವಿಶೇಷ. ಈ ಪ್ರಯೋಗ ವೀಕ್ಷಿಸುವಾಗ ಇದೊಂದು ಕೊರತೆ ಅನ್ನಿಸುವುದಿಲ್ಲ. ಇದನ್ನು ಕನ್ನಡ ರಂಗಭೂಮಿಗೆ ತಂದ ಯಶಸ್ಸು ನಿರ್ದೇಶಕ ಎಸ್. ಸುರೇಂದ್ರನಾಥ್ ಹಾಗೂ ಅರುಂಧತಿ ನಾಗ್ ಅವರದ್ದು. **'ಗುಮ್ಮ ಬಂದ ಗುಮ್ಮ'** ನಾಟಕವೂ ಬಹಳ ಪ್ರಸಿದ್ಧಿ ಪಡೆಯಿತು. ಈಗ **'ಆಹಾ'** ಮಕ್ಕಳ ರಂಗಭೂಮಿಯ ಮೂಲಕ ಹಲವಾರು ಹಾಸ್ಯ, ಮನರಂಜನಾತ್ಮಕ ನಾಟಕಗಳನ್ನು ಇವರು ಪ್ರಯೋಗಿಸುತ್ತಾರೆ. ಆದರೂ ಇನ್ನೂ ಮಕ್ಕಳ ನಾಟಕಗಳ ಕೊರತೆ ಎದ್ದು ಕಾಣುತ್ತದೆ. ಎಷ್ಟೋ ಶಾಲಾ, ಕಾಲೇಜುಗಳಲ್ಲಿ ದೊಡ್ಡವರ ನಾಟಕಗಳನ್ನೇ ಸ್ಪರ್ಧೆಗಳಿಗೆ ಮಕ್ಕಳು ಆರಿಸಿಕೊಳ್ಳುವುದನ್ನು ನೋಡುತ್ತೇವೆ.

## 4. ಚಟುವಟಿಕೆ

**ವಿದ್ಯಾರ್ಥಿಗಳಿಂದ :**

1. ಕಥೆ ಅಥವಾ ಕವಿತೆ ಬರೆಸುವುದು.

2. ಆಭರಣ ಮತ್ತು ವಸ್ತ್ರ ವಿನ್ಯಾಸಗಳ ಸುಲಭದ ರೇಖಾಚಿತ್ರಗಳನ್ನು ಬಿಡಿಸುವುದು.

3. ಕೈಗೊಂಡ ಪ್ರವಾಸ ಕುರಿತು ಲೇಖನವನ್ನು ಬರೆಸುವುದು.

4. ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮಗಳ ವರದಿಗಳನ್ನು ಬರೆಸುವುದು.

5 ಕಾರ್ಯಕ್ರಮ ನಿರ್ವಹಣೆಯ ತರಬೇತಿ ನೀಡುವುದು. ಇನ್ನಿತರೇ ಸೃಜನಶೀಲ ಚಟುಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವುದು.